ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Swabhimani Sahakari

Pages - 36, ₹12

# ಸ್ವಾಭಿಮಾನಿ ಸಹಕಾರಿ

Volume -13
Issue - 01
January- 2016

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ



## ಸಂಕ್ರಾಂತಿ: ಎಳ್ಳು,ಬೆಲ್ಲದ ಸಡಗರ




## 67 ನೇ ಗಣರಾಜ್ಯೋತ್ಸವ



ಸೌಹಾರ್ದ ಸಹಕಾರಿಗಳ ಸಂಖ್ಯೆ : 3430 ‘ಇ’ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 873



“

ವೈಶಿಷ್ಟ್ಯತೆಯಿಂದ ಬಾಳೋಣ. ಇತರರಿಗೆ ಮಾದರಿಯಾಗೋಣ. ನಮ್ಮೆಲ್ಲಾ ಕಾರ್ಯಗಳಿಗೆ ಸಹಕರಿಸುತ್ತಿರುವ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ, ಹಿರಿಯ ಸಹಕಾರಿ ಮುಖಂಡರುಗಳಿಗೆ, ಸಂಪನ್ಮೂಲ ವ್ಯಕ್ತಿಗಳಿಗೆ ಹಾಗೂ ಸಹಕಾರ ಇಲಾಖೆಯ ಅಧಿಕಾರಿಗಳಿಗೆ ಹೃತ್ಪೂರ್ವಕ ವಂದನೆಗಳು.

”

# ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ 15 ವರ್ಷಗಳು : ಸಾಧನೆಗಳ ಶ್ರೀರಕ್ಷೆಯಿಂದ ಮುನ್ನಡೆಯೋಣ

ಆತ್ಮೀಯ ಸಹಕಾರಿ ಬಂಧುಗಳಿಗೆ ನೂತನ ವರ್ಷ 2016, ಮಕರ ಸಂಕ್ರಾಂತಿ ಹಾಗೂ 67ನೇ ಗಣರಾಜ್ಯೋತ್ಸವದ ಶುಭಾಶಯಗಳು.

ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ 15 ವರ್ಷಗಳು ಪೂರ್ಣಗೊಂಡಿವೆ. ಈ ಅವಧಿಯಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆ 3430, ಇ–ಸ್ಟ್ಯಾಂಪಿಂಗ್ ಕೇಂದ್ರಗಳು 873, 28 ಲಕ್ಷ ಸದಸ್ಯತ್ವ, 550 ಕೋಟಿ ಶೇರು ಬಂಡವಾಳ, 10,000 ಕೋಟಿ ಠೇವಣಿಗಳು, 7,500 ಕೋಟಿ ಸಾಲಗಳು, 11,500 ದುಡಿಯುವ ಬಂಡವಾಳ, 50,000 ಜನರಿಗೆ ಉದ್ಯೋಗ, 175 ಕೋಟಿ ಲಾಭ. ಈ ಎಲ್ಲಾ ಸಾಧನೆಗಳು ತೃಪ್ತಿಕರ. ಸಾಧಿಸಬೇಕಾದುದು ಇನ್ನೂ ಇದೆ. ಕ್ಷೇತ್ರ ಅತ್ಯಂತ ವೇಗವಾಗಿ ಬೆಳೆಯುತ್ತಿರುವುದರಿಂದ ಕಾರ್ಯ ಹಾಗೂ ಜವಾಬ್ದಾರಿಗಳು ಹೆಚ್ಚುತ್ತಲಿವೆ. ಸಂಯುಕ್ತ ಸಹಕಾರಿ ಇದನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಪ್ರಯತ್ನ ಮಾಡುತ್ತಲಿದೆ. ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳಲ್ಲಿ ವಿಭಿನ್ನತೆಯನ್ನು ಕಾಣುತ್ತೇವೆ. ರಾಜ್ಯದಾದ್ಯಂತ ಸೌಹಾರ್ದ ಸಹಕಾರಿ ಕಾಯ್ದೆಯನ್ನು, ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ಹಾಗೂ ಸಂಯುಕ್ತ ಸಹಕಾರಿಯ ಚಟುವಟಿಕೆಗಳನ್ನು ಸಹಕಾರಿಗಳು ಗಮನಿಸುತ್ತಿದ್ದಾರೆ ಹಾಗೂ ಪ್ರಶಂಸಿಸುತ್ತಿದ್ದಾರೆ.

ಸೌಹಾರ್ದ ಸಹಕಾರಿಗಳಿಗಾಗಿಯೇ ಪ್ರತ್ಯೇಕ ನ್ಯಾಯಾಲಯ ಮಂಜೂರಾಗಿರುವುದು, ಸಹಕಾರಿ ಕ್ಷೇತ್ರದ ಮೂಲಕ ಇ–ಸ್ಟ್ಯಾಂಪಿಂಗ್ ವ್ಯವಹಾರ, ರಿಸರ್ವ್ ಬ್ಯಾಂಕಿನವರೊಂದಿಗೆ ವ್ಯವಹರಿಸಿ ಥರ್ಡ್ ಪಾರ್ಟಿ ಚೆಕ್ ಕ್ಲಿಯರೆನ್ಸ್‌ಗೆ ಅವಕಾಶ, ಕೇಂದ್ರದ ನೇರ ತೆರಿಗೆ ನೀತಿ ಸಂಹಿತೆ ಜಾರಿಯಾದರೆ ಸಹಕಾರ ಕ್ಷೇತ್ರಕ್ಕೆ ತೊಂದರೆಯಾಗದಂತೆ ಹೋರಾಟ, ಸೌಹಾರ್ದ ಸಹಕಾರಿಗಳು ಕಾರ್ಯಾರಂಭದ ದಿನದಿಂದಲೇ ಆಧುನಿಕತೆಯನ್ನು ಮತ್ತು ತಂತ್ರಜ್ಞಾನವನ್ನು ಅಳವಡಿಸಿ ಕಾರ್ಯನಿರ್ವಹಿಸುತ್ತಿರುವುದು, ಸಾಂಪ್ರದಾಯಕ ಹಣಕಾಸು ನಿರ್ವಹಣೆಯ ಜೊತೆಗೆ ಹೆಚ್ಚಿಗೆ ಬಡ್ಡಿಯೇತರ ಆದಾಯಗಳ ನಿರ್ವಹಣೆ ಮಾಡುವಂತೆ ಪ್ರೇರೇಪಿಸುತ್ತಿರುವುದು ಹೀಗೆ ಹತ್ತಾರು ರೀತಿಯಲ್ಲಿ ಈ ಕ್ಷೇತ್ರದ ಸಾಧನೆಗಳನ್ನು ಪಟ್ಟಿಮಾಡಬಹುದು. ಸಾಧನೆಗಾಗಿ ತೃಪ್ತಿ ಇದೆ. ಆದರೆ ಸಾಧಿಸಬೇಕಾದುದು ಇನ್ನೂ ಸಾಕಷ್ಟಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಶಾಸನಬದ್ಧ ಕಾರ್ಯನಿರ್ವಹಣೆಯ ಜೊತೆಗೆ ವಿವಿಧ ಹಂತಗಳಲ್ಲಿ ಪರಿಣಾಮಕಾರಿ ತರಬೇತಿ ಹಾಗೂ ಶಿಕ್ಷಣ ವ್ಯವಸ್ಥೆ, ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಬಿಂಬಿಸುವ ಸಾಕ್ಷಚಿತ್ರ, ಇದುವರೆಗಿನ ಸಾಧನೆಯ ಬಗ್ಗೆ ಮೈಸೂರು ವಿಶ್ವವಿದ್ಯಾನಿಲಯದಿಂದ ಮೌಲ್ಯಮಾಪನಕ್ಕೆ ವ್ಯವಸ್ಥೆ, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಗುಣಮಟ್ಟಕ್ಕೆ ISO ಪ್ರಮಾಣ ಪತ್ರ ಬಂದಿದೆ.

ಅಭಿವೃದ್ಧಿಗೆ ಪೂರಕವಾಗುವ ಪ್ರಕಟಣೆಗಳು, ಯುವಕರು ಹಾಗೂ ಮಹಿಳೆಯರನ್ನು ಈ ಕ್ಷೇತ್ರದಲ್ಲಿ ಹೆಚ್ಚಿಗೆ ಬರಮಾಡಿಕೊಳ್ಳುವ ನಿಟ್ಟಿನಲ್ಲಿ ಸತತ ಪ್ರಯತ್ನ, ರಾಜ್ಯ, ರಾಷ್ಟ್ರ ಮಟ್ಟದ ಹಾಗೂ ಅಂತರರಾಷ್ಟ್ರ ಮಟ್ಟದ ಸಭೆ, ಸಮಾರಂಭ ಹಾಗೂ ತರಬೇತಿ ಕಾರ್ಯಗಳಲ್ಲಿ ಭಾಗವಹಿಸುವುದು, ಸಹಕಾರ ಕ್ಷೇತ್ರದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಂಡಿರುವುದು, ಸೌಹಾರ್ದ ಸಹಕಾರಿಗಳ ಬೆಳವಣಿಗೆಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುವುದಕ್ಕಾಗಿ ವಿಭಾಗೀಯ ಕಛೇರಿಗಳನ್ನು ಪ್ರಾರಂಭಿಸಿರುವುದು, ಪ್ರತಿ 3 ತಾಲ್ಲೂಕುಗಳಿಗೆ ಒಬ್ಬರಂತೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಯ ನೇಮಕ, ಸಂಯುಕ್ತ ಸಹಕಾರಿಗೆ ಬೆಂಗಳೂರಿನಲ್ಲಿ ಸ್ವಂತ ಜಾಗಕ್ಕೆ ವ್ಯವಸ್ಥೆ, ವಿಭಾಗೀಯ ಕಛೇರಿಗಳಿಗೆ ಸ್ವಂತ ನಿವೇಶನಗಳಿಗಾಗಿ ಪ್ರಯತ್ನ ಹೀಗೆ ಹಲವು ಸಾಧನೆಗಳು ಸೌಹಾರ್ದ ಸಹಕಾರಿಗಳಿಗೆ ಕಳಶಪ್ರಾಯ. ಸಾಧನೆಗಳ ಶ್ರೀರಕ್ಷೆಯಿಂದ ಮುನ್ನಡೆಯೋಣ. ವೈಶಿಷ್ಟ್ಯತೆಯಿಂದ ಬಾಳೋಣ. ಇತರರಿಗೆ ಮಾದರಿಯಾಗೋಣ. ನಮ್ಮೆಲ್ಲಾ ಕಾರ್ಯಗಳಿಗೆ ಸಹಕರಿಸುತ್ತಿರುವ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ, ಹಿರಿಯ ಸಹಕಾರಿ ಮುಖಂಡರುಗಳಿಗೆ, ಸಂಪನ್ಮೂಲ ವ್ಯಕ್ತಿಗಳಿಗೆ ಹಾಗೂ ಸಹಕಾರ ಇಲಾಖೆಯ ಅಧಿಕಾರಿಗಳಿಗೆ ಹೃತ್ಪೂರ್ವಕ ವಂದನೆಗಳು.

▸▸ **ಗುರುನಾಥ ಜಾಂತಿಕರ,** ಅಧ್ಯಕ್ಷರು

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

**ಶ್ರೀ ಗುರುನಾಥ ಜಾಂತಿಕರ**
ಗೌರವ ಅಧ್ಯಕ್ಷರು

**ಶ್ರೀ ಹೆಚ್.ವಿ.ರಾಜೀವ**
ಗೌರವ ಉಪಾಧ್ಯಕ್ಷರು

**ಶ್ರೀ ಎಸ್.ಆರ್.ಸತೀಶಚಂದ್ರ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು

**ಒಳ ಪುಟಗಳಲ್ಲಿ . . .**

ಅಧಿಸೂಚನೆ ........ 5
ಆದೇಶಗಳು ........ 11
ಸುತ್ತೋಲೆ ........ 13
ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರ 14ನೇ ತಂಡದ ವ್ಯಕ್ತಿತ್ವ ವಿಕಸನ ತರಬೇತಿ ........ 15
ಉಪಸಿಬ್ಬಂದಿಯವರಿಗಾಗಿ ಒಂದು ದಿನದ ತರಬೇತಿ ........ 19
ರಾಯಚೂರಿನ ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಯುವಕರು ಹಾಗೂ ಸಹಕಾರ ಕುರಿತು ಸಂವಾದ ಕಾರ್ಯಕ್ರಮ ........ 20
ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯ ವಿವರಗಳು ........ 22
ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ವಿಭಾಗೀಯ ಕಛೇರಿಗಳಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ........ 25
ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ........ 29
**RBI NEWS-DECEMBER 2015** ........ 33

# ಸಂಪಾದಕೀಯ

## ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಗಳು - 2015 ಮುಖ್ಯ ಕಾರ್ಯನಿರ್ವಾಹಕರುಗಳ ಜವಾಬ್ದಾರಿಯುತ ಹಾಗೂ ಕ್ರಿಯಾಶೀಲ ಭಾಗವಹಿಸುವಿಕೆ ಗಮನಾರ್ಹ

ಪ್ರತಿವರ್ಷದಂತೆ ಈ ಬಾರಿಯೂ ರಾಜ್ಯದ ಸೌಹಾರ್ದ ಸಹಕಾರಿಗಳ ಪ್ರಗತಿ ಪರಿಶೀಲನಾ ಸಭೆಯನ್ನು ರಾಜ್ಯದಾದ್ಯಂತ 24 ಕೇಂದ್ರಗಳಲ್ಲಿ ವಿಂಗಡಿಸಿ, ಸಭೆಗಳನ್ನು ನಡೆಸಲಾಗಿದೆ. ಈ ಸಭೆಯ ಮುಖ್ಯ ಉದ್ದೇಶ ಪ್ರಗತಿ ಪರಿಶೀಲನೆಯ ಜೊತೆಗೆ ಸೌಹಾರ್ದ ಸಹಕಾರಿಗಳಿಗೆ ಶಾಸನಬದ್ಧ ಕಾರ್ಯಚಟುವಟಿಕೆಗಳ ತಿಳುವಳಿಕೆ ನೀಡುವುದು, ಸೌಹಾರ್ದ ಸಹಕಾರಿಗಳ ಸಮಸ್ಯೆಗಳ ಅಧ್ಯಯನ ಮತ್ತು ಪರಿಹಾರಗಳ ಬಗ್ಗೆ ಚಿಂತನೆ ನಡೆಸುವುದು, ಸಭೆಯ ನಂತರ ಅವರಿಗೆ ಅಗತ್ಯವಾಗಿರುವ ವಿಷಯಗಳ ಬಗ್ಗೆ ಒಂದು ಅವಧಿಯ ತರಬೇತಿಯನ್ನು ಒದಗಿಸುವುದು, ಅವರುಗಳನ್ನು ಹೆಚ್ಚು ಜ್ಞಾನವಂತರನ್ನಾಗಿಸುವುದು ಮತ್ತು ಸಾಮರ್ಥ್ಯವುಳ್ಳವರನ್ನಾಗಿ ಮಾಡುವುದು.

ಈ ಬಾರಿಯ ವಾರ್ಷಿಕ ಸಭೆಗಳನ್ನು ಗಮನಿಸಿದಾಗ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳು ಜವಾಬ್ದಾರಿಯುತವಾಗಿ, ಕ್ರಿಯಾಶೀಲರಾಗಿ ಭಾಗವಹಿಸಿರುವುದು ಗಮನಾರ್ಹ. ವಿಷಯ ಪಟ್ಟಿಯಂತೆ ಚರ್ಚೆ ನಡೆಸಿರುವುದು, ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿರುವ ಅಡೆತಡೆಗಳು ಮತ್ತು ಆತಂಕಗಳು, ಅವುಗಳ ನಿವಾರಣೋಪಾಯಗಳ ಚರ್ಚೆ, ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಹೆಚ್ಚಿನ ತರಬೇತಿ ವ್ಯವಸ್ಥೆಗಳ ಬೇಡಿಕೆ, ಸಂಯುಕ್ತ ಸಹಕಾರಿಯ ಕಾರ್ಯನಿರ್ವಹಣೆಯ ಬಗ್ಗೆ ಸಲಹೆ, ಸೂಚನೆಗಳು, ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆ ಮತ್ತು ಪ್ರಗತಿಗಳನ್ನು ಗಮನಿಸಿದಾಗ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿಯ ಬುನಾದಿ ಭದ್ರವಾಗುತ್ತಾ ನಡೆದಿದೆ ಎಂದು ಭಾವಿಸಬಹುದು.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಕೆಲವು ಸವಾಲುಗಳಿವೆ. ಈ ಸವಾಲುಗಳನ್ನು ಎದುರಿಸಿ ನಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಿದೆ. ಕ್ಷೇತ್ರವನ್ನು ಮುನ್ನಡೆಸಬೇಕಿದೆ. ನಿಮ್ಮ ಒಂದು ಸಹಕಾರಿ ಉತ್ತಮವಾಗಿ ಕಾರ್ಯನಿರ್ವಹಿಸಿದರೆ ಸಾಲದು. ನಿಮ್ಮ ಪಕ್ಕದ ಸೌಹಾರ್ದ ಸಹಕಾರಿಯೂ ಉತ್ತಮವಾಗಿ ಕಾರ್ಯನಿರ್ವಹಿಸುವುದು ಅಗತ್ಯ. ನೀವು ನಿಮ್ಮ ಪಕ್ಕದ ಸೌಹಾರ್ದ ಸಹಕಾರಿಗಳು ಸೇರಿ ಮೂರನೆಯ ಸೌಹಾರ್ದ ಸಹಕಾರಿಯ ಅಭಿವೃದ್ಧಿಗೆ ಪ್ರಯತ್ನಿಸುವುದು ಅಷ್ಟೇ ಅಗತ್ಯ. ಹೀಗಾದಾಗ ಸಮಗ್ರ ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆ ಸಾಧ್ಯ. ಈ ನಿಟ್ಟಿನಲ್ಲಿ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳು ಸೌಹಾರ್ದ ಸಹಕಾರಿ ಚಳುವಳಿಯ ಸೇನಾನಿಗಳಂತೆ ಕಾರ್ಯನಿರ್ವಹಿಸುವುದು ಪ್ರಮುಖವಾದದ್ದು ಎಂದು ಸಂಯುಕ್ತ ಸಹಕಾರಿಯು ಭಾವಿಸುತ್ತದೆ.

## ಪ್ರೇಮ-ಪರಮ ಪ್ರೇಮ - ಶ್ರೀ ಸಿದ್ಧೇಶ್ವರ ವಾಣಿ

ಇದು ಭಕ್ತಿಯ ಸೂತ್ರ. ಭಕ್ತಿಯ ಬಗೆಗೆ ಸಾರವತ್ತಾಗಿ ಹೇಳಿದ ಪ್ರೇಮದಲ್ಲಿ ಎರಡು ಬಗೆಗಳು. ಮೊದಲನೆಯದು 'ಪ್ರೇಮ'. ಎರಡನೆಯದು 'ಪರಮ ಪ್ರೇಮ'. ಇತಿಮಿತಿ ಇದ್ದರೆ ಪ್ರೇಮ. ಇತಿಮಿತಿ ತೆಗೆದರೆ ಪರಮ ಪ್ರೇಮ.

ಪ್ರೇಮಕ್ಕೆ ಇತಿಮಿತಿಗಳು ಇರುವುದಿಲ್ಲ, ನಾವು ಹಾಕುತ್ತೇವೆ. ಇಲ್ಲಿ ಎರಡು ಹೂಗಳಿವೆ. ಆಕಾರ ಒಂದೇ, ಬಣ್ಣ ಒಂದೇ, ಸುವಾಸನೆ ಒಂದೇ. ಆದರೆ ಒಂದನ್ನು ಬೇಕಾದವರು ಕೊಟ್ಟಿದ್ದಾರೆ. ಇನ್ನೊಂದನ್ನು ಬೇಡವಾದವರು ಕೊಟ್ಟಿದ್ದಾರೆ. ಬೇಕಾದವರು ಕೊಟ್ಟಿದ್ದು ಪ್ರಿಯ ಅನಿಸುತ್ತದೆ. ಬೇಡವಾದವರು ಕೊಟ್ಟಿದ್ದು ಅಪ್ರಿಯ ಅನಿಸುತ್ತದೆ. ಎಷ್ಟು ಮಜಾ ಇದೆ. ಎರಡೂ ಹೂಗಳು ಒಂದೇ, ಆದರೆ ಒಂದನ್ನು ಹಿಡಿಯಬೇಕು ಅನಿಸುತ್ತದೆ. ಇನ್ನೊಂದು ಬೇಡ ಎನಿಸುತ್ತದೆ. ಇದರಿಂದಲೇ ಜಗತ್ತಿನಲ್ಲಿ ಸಂಘರ್ಷಗಳು, ಈರ್ಷೆಗಳು, ದ್ವಂದ್ವಗಳು ನಡೆಯುತ್ತವೆ. ಯಾವ ಭಾವನೆ ಪರಿಮಿತವೋ ಅದು ಸೌಖ್ಯ. ಯಾವ ಭಾವನೆಗೆ ಪರಿಮಿತಿ ಇರುವುದಿಲ್ಲವೋ ಅದು ಅನಂತ. ಅಪರಿಮಿತ.




ದೇವರಿಗೆ ಗುಡಿ ಕಟ್ಟುತ್ತೇವೆ. ಅಂದರೆ ದೇವರು ಸಣ್ಣವನೇನು? ದೇವರು ಗುಡಿಯೊಳಗೆ ಮಾತ್ರ ಇದ್ದಾನೇನು? ದೇವರು ಅಲ್ಲಿಯೂ ಇದ್ದಾನೆ, ಇಲ್ಲಿಯೂ ಇದ್ದಾನೆ. 'ಇರೋದು' ದೇವರು. ಸತ್ಯ ಯಾವುದೋ, ಅನಂತ ಯಾವುದೋ ಅದು ದೇವರು. ದೇವರಿಗೆ ಬೇಕಾದ ಹೆಸರು ಕೊಡಿ, x ಅಂತ ಕೊಡಿ. ಅಲ್ಲಿರೋ ದೇವರು x, ಇಲ್ಲಿರೋ ದೇವರು x, ಎಲ್ಲಾ ಕಡೆ x ದೇವರು. 'ಅಸ್ಮಿನ್' ಈ ದೇವನಲ್ಲಿ ರಾಮ, ಶಿವ, ವಿಷ್ಣು, ಗಣಪತಿ ಎಂಬುದಿಲ್ಲ, ಯಾವುದು ಇದೆ ಅದು ದೇವರು, What ever exist is, ಯಾವಾಗಲೂ ಯಾವುದು ಇದೆ, ಎಲ್ಲಾ ಕಡೆ ಇದೆ, ಅದು ದೇವರು. ಅದು ಅನಂತ, ಅದು ಸತ್ಯ. ಮನುಷ್ಯನಲ್ಲಿ ಎರಡು ಪ್ರೇಮಗಳಿರಬೇಕು. ಒಂದು 'ಪ್ರೇಮ', ಇನ್ನೊಂದು 'ಪರಮ ಪ್ರೇಮ'. ಪ್ರೇಮದಿಂದ ಲೌಕಿಕ ಸುಖ, ಪರಮ ಪ್ರೇಮದಿಂದ ಶಾಂತಿ. ಎರಡು ಇರಬೇಕು. ಸಾಮಾನ್ಯ ಪ್ರೇಮ ಮತ್ತು ಪರಮ ಪ್ರೇಮ ಇರುವ ಜನರ ಬದುಕನ್ನು ಹೋಲಿಸಿ ನೋಡಿ ಅಲ್ಲಮ ಪ್ರಭುಗಳು ಹೇಳಿದರು.

ಪ್ರೇಮಕ್ಕೆ ಪರಿಮಿತ ಬೇಡ ಅಂತ ಅಲ್ಲ, ಅದು ಬೇಕು. ಅಪರಿಮಿತವೂ ಬೇಕು. ಆಗ ಬದುಕು ಪೂರ್ಣವಾಗುತ್ತದೆ. ಸುಖ, ಶಾಂತಿ ಎರಡೂ ಮುಖ್ಯ. 'ಭಕ್ತಿ' ಎಂದರೆ 'ಪರಮ ಪ್ರೇಮ'. ಯಾವುದು ಪರಮ, ಯಾವುದು ಶ್ರೇಷ್ಠ, ಯಾವುದು ಸತ್ಯವೋ ಅದು 'ಭಕ್ತಿ'.

ಒಂದು ಮನೆ ಎಂದ ಮೇಲೆ ದೇವರ ಭಾವ ಇರುವ ಕೋಣೆ ಬೇಕು, ಸುಖದ ಕೋಣೆಯೂ ಬೇಕು. ಎರಡೂ ಬೇಕು. ಒಂದು ಇದ್ದು, ಒಂದಿಲ್ಲದಿದ್ದರೆ ಜಗತ್ತಿಗೂ ಜಾಗ ಬೇಕು. ಅನಂತತೆಗೂ ಜಾಗ ಬೇಕು. ಎರಡರ ಭಾವವೂ ನಮ್ಮಲ್ಲಿರಬೇಕು.

## ವಿಧಾನ ಪರಿಷತ್ತಿಗೆ ಆಯ್ಕೆಯಾದ ಸೌಹಾರ್ದ ಸಹಕಾರಿ ಹಾಗೂ ಸಹಕಾರ ಕ್ಷೇತ್ರದ ಗಣ್ಯರು


ಶ್ರೀ ಎಸ್.ಆರ್. ಪಾಟೀಲ್


ಶ್ರೀ ಬಸನಗೌಡ ಪಾಟೀಲ್ ಯತ್ನಾಳ್


ವಿವೇಕರಾವ್ ಪಾಟೀಲ್


ಶ್ರೀಕಾಂತ್ ಘೋಟ್ನೇಕರ್


ಎಸ್. ರವಿ

ಕರ್ನಾಟಕ ರಾಜ್ಯದ ವಿಧಾನ ಪರಿಷತ್ತಿಗೆ ರಾಜ್ಯದ ಪ್ರಮುಖ ಸೌಹಾರ್ದ ಸಹಕಾರಿ ಸಂಸ್ಥೆಗಳಾದ ಶ್ರೀ ಬಾಪೂಜಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಪಾಟೀಲ್‌ರವರು, ವಿಜಯಪುರದ ಸಿದ್ಧಸಿರಿ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸನಗೌಡ ಪಾಟೀಲ್ ಯತ್ನಾಳ್, ಬೆಳಗಾವಿ ಪ್ರಹಾವಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ವಿವೇಕ್‌ರಾವ್ ಪಾಟೀಲ್, ಕೆಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಶ್ರೀಕಾಂತ್ ಘೋಟ್ನೇಕರ್, ಬಿಬಿಆರ್ & ಆರ್‌ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಸ್. ರವಿ, ಇವರುಗಳು ಆಯ್ಕೆಯಾಗಿರುವುದಕ್ಕೆ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳು.

## ಕಾಫಿ ಬೋರ್ಡ್‌ಗೆ ಆಯ್ಕೆ


ಶ್ರೀ ಜಿ.ಎಸ್.ಮಹಾಬಲ
ನಿರ್ದೇಶಕರು

ಕಾಫಿ ಬೋರ್ಡ್‌ನ ಕೇಂದ್ರೀಯ ಸಮಿತಿ ನಿರ್ದೇಶಕರಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಜಿ.ಎಸ್. ಮಹಾಬಲರವರ ನೇಮಕ.

## ಸಹಕಾರಿ ಸಂಸ್ಥೆಗಳಿಗೆ ಹಾಗೂ ಸೌಹಾರ್ದ ಸಹಕಾರಿಗಳಿಗೆ ಚುನಾವಣಾಧಿಕಾರಿಗಳ ನೇಮಕಾತಿ ಕುರಿತಂತೆ ಸಹಕಾರ ಚುನಾವಣಾ ಪ್ರಾಧಿಕಾರದ ಮಹತ್ವದ ಆದೇಶ

ಸಂಖ್ಯೆ : ಸಚುಪ್ರಾ/ಚುನಾವಣೆ/ಜನವರಿ–ಜೂನ್/01/2016 ದಿನಾಂಕ : 18.12.2015

### ಅಧಿಸೂಚನೆ

**ವಿಷಯ : ದಿನಾಂಕ : 01.01.2016 ರಿಂದ 30.06.2016ರವರೆಗೆ ಅವಧಿ ಮುಗಿಯಲಿರುವ ಪ್ರಾಥಮಿಕ ಹಂತದ ಸಹಕಾರ ಸಂಘಗಳ ಮತ್ತು ಸಹಕಾರಿಗಳ ಆಡಳಿತ ಮಂಡಲಿಗೆ ಚುನಾವಣೆ ಹಾಗೂ ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸುವ ಕುರಿತು.**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (ಸಂಕ್ಷಿಪ್ತವಾಗಿ 'ಅಧಿನಿಯಮ') ಪ್ರಕರಣ 39ಎ (1) ಮತ್ತು ಪ್ರಕರಣ 39–ಎಎ(2) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 26–ಎ ಗಳ ಅವಕಾಶದಂತೆ ರಾಜ್ಯದಲ್ಲಿನ ಸಹಕಾರ ಸಂಘಗಳಿಗೆ/ ಸಹಕಾರಿಗಳಿಗೆ ನಡೆಯುವ ಎಲ್ಲಾ ಚುನಾವಣೆಗಳನ್ನು ನಡೆಸುವ ಮತ್ತು ತತ್ಸಂಬಂಧಿತ ಮತದಾರರ ಪಟ್ಟಿಗಳನ್ನು ತಯಾರಿಸುವ ಕಾರ್ಯದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು ಸಹಕಾರ ಚುನಾವಣಾ ಪ್ರಾಧಿಕಾರದಲ್ಲಿ ನಿಹಿತವಾಗಿರುತ್ತದೆ. ಅಧಿನಿಯಮ ಪ್ರಕರಣ 39–ಎ(2)(ಎ)ರೀತ್ಯಾ ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಚುನಾವಣೆಗಳು ನಡೆಯತಕ್ಕದ್ದಾಗಿದೆ. ಸಹಕಾರ ಚುನಾವಣಾ ಪ್ರಾಧಿಕಾರವು ಮತದಾರರ ಪಟ್ಟಿಯ ತಯಾರಿಕೆಗಾಗಿ ಮತ್ತು ಚುನಾವಣೆಗಳನ್ನು ನಡೆಸುವುದಕ್ಕಾಗಿ ಪೂರ್ವಸಿದ್ಧತಾ ಕಾರ್ಯವನ್ನು ಸಹಕಾರ ಸಂಘದ ಮಂಡಲಿಯ ಪದಾವಧಿಯ ಮುಕ್ತಾಯದ ಹಿಂದಿನ ಕೊನೆಯ ಆರು ತಿಂಗಳ ಅವಧಿಯಲ್ಲಿ ಪ್ರಾರಂಭಿಸಬಹುದಾಗಿರುತ್ತದೆ. ಅಧಿನಿಯಮ ಪ್ರಕರಣ 39–ಎಎ(15)(ಎ)ರೀತ್ಯಾ ಪ್ರತಿಯೊಂದು ಸಹಕಾರ ಸಂಘದ ಮಂಡಲಿಯು ತನ್ನ ಪದಾವಧಿಯ ಮುಕ್ತಾಯದ ಬಗ್ಗೆ ಅಂಥ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಹಿಂದಿನ ಕನಿಷ್ಠ 6 ತಿಂಗಳಿಗೆ ಮುಂಚೆ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದಾಗಿದೆ. ಅಲ್ಲದೇ ಪ್ರಾಧಿಕಾರವು ಸುಗಮವಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕೆ ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ಸಂಬಂಧಪಟ್ಟವರು ಅವಶ್ಯಕವಾದ ಎಲ್ಲಾ ನೆರವು, ಸಹಾಯ ಮತ್ತು ಸಹಕಾರವನ್ನು ನೀಡತಕ್ಕದ್ದಾಗಿದೆ. ಅಲ್ಲದೇ ಚುನಾವಣಾ ಪ್ರಾಧಿಕಾರಕ್ಕೆ/ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಅಗತ್ಯ ಪುಸ್ತಕಗಳು, ದಾಖಲೆಗಳು ಹಾಗೂ ಮಾಹಿತಿಯನ್ನು ನೀಡುವ ಜವಾಬ್ದಾರಿ ಸಂಬಂಧಿಸಿದ ಸಹಕಾರ ಸಂಘಗಳದ್ದಾಗಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013ರ ನಿಯಮ–13ಡಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ರ ನಿಯಮ–5ಬಿ(3)ಗಳ ಅವಕಾಶದಂತೆ ಚುನಾವಣಾಧಿಕಾರಿಯು ಕೂಲಂಕುಷ ಪರಿಶೀಲನೆಯ ನಂತರ, ಆಡಳಿತ ಮಂಡಲಿಗಳ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಕನಿಷ್ಠ 120 ದಿನಗಳ ಪೂರ್ವದಲ್ಲಿ ಈ ಕೆಳಕಂಡ ವಿವರಗಳನ್ನೊಳಗೊಂಡ, ಚುನಾವಣೆಗಳು ಸನ್ನಿಹಿತವಾಗಿರುವ ಎಲ್ಲಾ ಸಹಕಾರ ಸಂಘಗಳ/ ಸಹಕಾರಿಗಳ ಕ್ರೋಢೀಕೃತ ಮತ್ತು ಸಂಘಗಳವಾರು ನಮೂನೆ 13ಡಿ(1)ರಂತೆ ದೃಢೀಕೃತ ಮಾಹಿತಿಯನ್ನು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದಾಗಿದೆ.

1. **ಸಹಕಾರ ಸಂಘದ/ ಸಹಕಾರಿಯ ಹೆಸರು ಮತ್ತು ವಿಳಾಸ**
2. **ಆಡಳಿತ ಮಂಡಲಿಗೆ ಆಯ್ಕೆಯಾಗಬೇಕಾಗಿರುವ ಚುನಾಯಿತ ನಿರ್ದೇಶಕರ ಸಂಖ್ಯೆ**
3. **ಆಡಳಿತ ಮಂಡಲಿ ಪದಾವಧಿಯು ಮುಕ್ತಾಯವಾಗುವ ದಿನಾಂಕ**
4. **ಚುನಾವಣೆಗಳನ್ನು ನಡೆಸಬಹುದಾದ ಸ್ಥಳ ಹಾಗೂ ಚುನಾವಣಾ ಪ್ರಾಧಿಕಾರಕ್ಕೆ ಅವಶ್ಯವಿರುವ ಇತರೆ ಮಾಹಿತಿಗಳು**

ಗೌರವ ಕರ್ನಾಟಕ ಉಚ್ಚನ್ಯಾಯಾಲಯ ರಿಟ್ ಅಪೀಲು ಸಂಖ್ಯೆ : 734/2014 ಮತ್ತು ಸಂಬಂಧಿತ ಇತರ ಮೇಲ್ಮನವಿಗಳಲ್ಲಿ ನೀಡಿರುವ ತೀರ್ಪಿನಂತೆ ಸಹಕಾರ ಸಂಘಗಳ/ ಸಹಕಾರಿಗಳ ಆಡಳಿತ ಮಂಡಲಿ ಪದಾವಧಿಯು ಚುನಾವಣೆ ದಿನಾಂಕದಿಂದ ಐದು(5) ವರ್ಷಗಳಾಗಿರತಕ್ಕದ್ದು. ಅದೇ ರೀತಿಯಲ್ಲಿ 29–ಎಫ್(4) ಸಹಕಾರ ಸಂಘಗಳ/ ಸಹಕಾರಿಗಳ/ ಪದಾಧಿಕಾರಿಗಳ ಪದಾವಧಿಯ ಚುನಾವಣೆಯ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು. ಪದಾಧಿಕಾರಿಗಳ ಅವಧಿಯು ಆಡಳಿತ ಮಂಡಲಿಯ ಅವಧಿಯೊಂದಿಗೆ ಅಂತ್ಯಗೊಳ್ಳುತ್ತದೆ. ಈ ಸಂಬಂಧವಾಗಿ ಉಲ್ಲೇಖಿತ ದಿನಾಂಕ 30–06–2014ರ ಪತ್ರದಲ್ಲಿ(ಉಲ್ಲೇಖ–1) ಎಲ್ಲಾ ಪ್ರಾಂತೀಯ ಜಂಟಿನಿಬಂಧಕರಿಗೆ/ ಜಿಲ್ಲಾ ಉಪನಿಬಂಧಕರುಗಳಿಗೆ/ ಉಪವಿಭಾಗೀಯ ಸಹಾಯಕ ನಿಬಂಧಕರುಗಳಿಗೆ ಈಗಾಗಲೇ ತಿಳಿಸಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ(1) ಮತ್ತು 39ಎಎ(2)ರ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ

ಪ್ರಕರಣ 26ಎ ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಬಿ ಮತ್ತು 13ಡಿ(1)ರಂತೆ ಸಹಕಾರ ಚುನಾವಣಾ ಪ್ರಾಧಿಕಾರವು ರಾಜ್ಯದಲ್ಲಿನ ಎಲ್ಲಾ ಸಹಕಾರ ಸಂಘಗಳ ಚುನಾವಣೆಗಳನ್ನು ನಡೆಸಲು ಬಾಕಿ ಇರುವ ಸಂಘಗಳ ಪಟ್ಟಿ ಮತ್ತು ತತ್ಸಂಬಂಧದ ಮತದಾರರ ಪಟ್ಟಿಗಳನ್ನು ತಯಾರಿಸಲು ಅಗತ್ಯವಾದ ಮಾರ್ಗಸೂಚಿಗಳನ್ನು ಈಗಾಗಲೇ ನೀಡಿರುತ್ತದೆ.

ನಿಯಮ 13ಬಿಬಿ ರಂತೆ ಸಹಕಾರ ಸಂಘಗಳ ಚುನವಣಾ ಪ್ರಾಧಿಕಾರವು ಪ್ರತಿ ಜಿಲ್ಲೆಗೆ ಮತ್ತು ಪ್ರಾಂತಕ್ಕೆ ಹಾಗೂ ರಾಜ್ಯಕ್ಕೆ ಪ್ರಾಧಿಕಾರದ ಆದೇಶದಿಂದ ದಿನಾಂಕ : 30.06.2016ರವರೆಗೆ ಪ್ರಾಥಮಿಕ ಸಂಘಗಳ/ ಸಹಕಾರಿಗಳ ಚುನಾವಣೆಗಳನ್ನು ನಡೆಸಲು ಜಿಲ್ಲಾ/ ಪ್ರಾಂತ್ಯ/ ರಾಜ್ಯ ಮಟ್ಟದ ಕಾರ್ಯವ್ಯಾಪ್ತಿ ಹೊಂದಿರುವ ಎಲ್ಲಾ ರೀತಿಯ ಸಹಕಾರ ಸಂಘಗಳಿಗೆ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡಲಾಗಿದೆ.

ಜನವರಿ 2016 ಇಂದ ಜೂನ್–2016ರ ಒಳಗಾಗಿ ಅವಧಿ ಮುಗಿಯಲಿರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಹಕಾರ ಸಂಘಗಳ/ ಸಹಕಾರಿಗಳ ಮಂಡಲಿಗಳ ಸಾಮಾನ್ಯ ಚುನಾವಣೆ ಮತ್ತು ಪದಾಧಿಕಾರಿಗಳ ಚುನಾವಣೆಗಳನ್ನು ನಿಯಮಾನುಸಾರ ನಡೆಸಬೇಕಾದ ದಿನಾಂಕಗಳ ಹಿನ್ನೆಲೆಯಲ್ಲಿ ಸಹಕಾರ ಚುನಾವಣಾ ಪ್ರಾಧಿಕಾರವು ಪ್ರಾಥಮಿಕ ಹಂತದ ಎಲ್ಲಾ ರೀತಿಯ ಸಹಕಾರ ಸಂಘಗಳ/ ಸಹಕಾರಿಗಳ ಮಂಡಲಿ ಚುನಾವಣೆಯನ್ನು ನಡೆಸಲು ಈ ಅಧಿಸೂಚನೆಗೆ ಲಗತ್ತಿಸಿರುವ **ಅನುಬಂಧ–01ರಂತೆ** ಗೊತ್ತುಪಡಿಸಲಾದ ದಿನಾಂಕಗಳಂದು ಚುನಾವಣೆ ನಡೆಸಲು ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಟ್ಟ ಚುನಾವಣಾಧಿಕಾರಿಗಳು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

**ನಿಯಮ 13ಇ ಮತ್ತು ಸಹಕಾರಿ ನಿಯಮ 5ಸಿ ರಂತೆ** ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಟ್ಟ ಚುನಾವಣಾಧಿಕಾರಿಗಳು ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಹಕಾರ ಸಂಘಗಳಿಗೆ/ ಸಹಕಾರಿಗಳ ಆಡಳಿತ ಮಂಡಲಿಯ ಸಾಮಾನ್ಯ ಚುನಾವಣೆ ಮತ್ತು ಪದಾಧಿಕಾರಿಗಳ ಚುನಾವಣೆ, ಹೊಸದಾಗಿ ನೋಂದಣಿಯಾದ ಆಕಸ್ಮಿಕವಾಗಿ ತೆರವಾದ ಮತ್ತು ಆಡಳಿತಗಾರ/ ವಿಶೇಷಾಧಿಕಾರಿ ನೇಮಕಗೊಂಡ ಸಂಘ/ ಸಹಕಾರಿಗಳ ಚುನಾವಣೆಗಳನ್ನು ನಡೆಸಲು ಚುನಾವಣಾಧಿಕಾರಿಯು ರಿಟರ್ನಿಂಗ್ ಅಧಿಕಾರಿ ಮತ್ತು ಅಗತ್ಯವಿರುವಂತೆ ಒಬ್ಬ ಅಥವಾ ಹೆಚ್ಚು ಮಂದಿ ಸಹಾಯಕ ರಿಟರ್ನಿಂಗ್ ಅಧಿಕಾರಿಗಳನ್ನು ನಿಯಮ–(1ಎ) ರಂತೆ randomization ಮುಖಾಂತರ ನೇಮಕಾತಿ ಮಾಡತಕ್ಕದ್ದು.

ಚುನಾವಣಾಧಿಕಾರಿಗಳು/ ರಿಟರ್ನಿಂಗ್ ಅಧಿಕಾರಿಗಳು ಚುನಾವಣೆ ನಡೆಸುವ ಸಂಬಂಧ ವಿವಿಧ ಹಂತಗಳಲ್ಲಿ ನಿಯಮಾನುಸಾರ ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತು ಈ ಅಧಿಸೂಚನೆಗೆ ಲಗತ್ತಿಸಿರುವ ಚೆಕ್‌ಲಿಸ್ಟ್‌ನ **(ಅನುಬಂಧ–02)ರ** ಸೂಚನೆಗಳನ್ನು ತಪ್ಪದೇ ಅನುಸರಿಸತಕ್ಕದ್ದು.

ಪ್ರಕರಣ 28ಬಿ ರಂತೆ ಮಂಡಲಿಯ ಚುನಾವಣೆಯನ್ನು ಪದಾವಧಿಯು ಮುಕ್ತಾಯಗೊಳ್ಳುವ ಪೂರ್ವದಲ್ಲಿಯೇ ನಡೆಸತಕ್ಕದ್ದಾಗಿರುತ್ತದೆ.

ಪ್ರಕರಣ 28ಬಿ(2)ರಂತೆ 39ಎ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕಾಲಮಿತಿಯೊಳಗೆ ಚುನಾವಣೆ ವ್ಯವಸ್ಥೆ ಮಾಡಲು ವಿಫಲರಾದ ಮಂಡಲಿಯ ಸದಸ್ಯರು ನಿರ್ದಿಷ್ಟಪಡಿಸಿದ ಕಾಲಮಿತಿಯ ಕೊನೆಯ ದಿನದಂದು ಅವರ ಸ್ಥಾನವನ್ನು ತೆರವುಗೊಳಿಸಿದ್ದಾರೆಂದು ಭಾವಿಸತಕ್ಕದ್ದು.

(3) 28–ಎ ಪ್ರಕರಣದ (5)ನೇ ಉಪ–ಪ್ರಕರಣದ ಮೇರೆಗೆ ಅಧಿಕಾರವನ್ನು ವಹಿಸಿಕೊಳ್ಳುವ ಆಡಳಿತಗಾರನು, ಸಾಧ್ಯವಾದಷ್ಟು ಬೇಗನೆ, ಆದರೆ ಆರು ತಿಂಗಳ ಅವಧಿಯೊಳಗೆ, ಅಧಿನಿಯಮ, ನಿಯಮಗಳಿಗೆ ಮತ್ತು ಉಪವಿಧಿಗಳಿಗನುಸಾರವಾಗಿ ಸಂಘದ ಹೊಸ (ಮಂಡಲಿ)ಯ ರಚನೆಗೆ ವ್ಯವಸ್ಥೆ ಮಾಡತಕ್ಕದ್ದು :

ಚುನಾವಣೆ ನಡೆಸಿದ ಕೂಡಲೇ ಪ್ರತಿ ಸಂಘದ ಆಡಳಿತ ಮಂಡಲಿ ಚುನಾವಣಾ ಫಲಿತಾಂಶ ಮತ್ತು ಪದಾಧಿಕಾರಿಗಳ ಫಲಿತಾಂಶಗಳೊಂದಿಗೆ ಈ ಅಧಿಸೂಚನೆಗೆ ಲಗತ್ತಿಸಿರುವ 7ಎ ಇಂದ 8ಡಿ ರವರೆಗಿನ ನಮೂನೆಯಲ್ಲಿ **(ಅನುಬಂಧ–03)** ಚುನಾವಣಾಧಿಕಾರಿಗಳು ಪ್ರಾಧಿಕಾರಕ್ಕೆ ತಕ್ಷಣವೇ ವರದಿ ಮಾಡತಕ್ಕದ್ದು.

ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಸಹಕಾರ ಸಂಘಗಳ/ ಸಹಕಾರಿಗಳ ಅಧಿನಿಯಮ/ ನಿಯಮಗಳ ಅವಕಾಶವನ್ನು ಪ್ರಾಧಿಕಾರವು ಗಣನೆಗೆ ತೆಗೆದುಕೊಂಡು ಪ್ರಾಥಮಿಕ ಸಹಕಾರ ಸಂಘಗಳ ಸಾಮಾನ್ಯ ಚುನಾವಣೆಗಳನ್ನು ನಡೆಸಲು ದಿನಾಂಕಗಳನ್ನು ಗೊತ್ತುಪಡಿಸಿದೆ. ಸಂಬಂಧಿಸಿದ ಸಹಕಾರ ಸಂಘಗಳ ಚುನಾವಣೆ ನಡೆಸುವ ಸಂಬಂಧ ಸಹಕಾರ ಸಂಘಗಳ ಅಧಿನಿಯಮ/ ನಿಯಮಗಳು/ ಬೈಲಾಗಳಿಗೆ ಅನುಗುಣವಾಗಿ ಸರಿಯಾದ ಮತದಾರರ ಪಟ್ಟಿಯನ್ನು ತಯಾರಿಸಲು ಮತ್ತು ಚುನಾವಣೆಯನ್ನು ನಿಯಮಾನುಸಾರ, ನಿಷ್ಪಕ್ಷಪಾತವಾಗಿ ಮತ್ತು ಪಾರದರ್ಶಕವಾಗಿ ಸಕಾಲಕ್ಕೆ ನಡೆಸುವ ಬಗ್ಗೆ ಸಹಕಾರ ಸಂಘಗಳ ಆಡಳಿತ ಮಂಡಲಿಗಳು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಸಹಕಾರ ಸಂಘಗಳ ಪ್ರಕರಣ ಮತ್ತು ನಿಯಮಗಳಂತೆ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳಿಗೆ ಮತ್ತು ರಿಟರ್ನಿಂಗ್ ಆಫೀಸರ್‌ಗಳಿಗೆ ಅಗತ್ಯ ದಾಖಲಾತಿಗಳನ್ನು ಹಾಜರುಪಡಿಸಿ, ಮಾಹಿತಿಗಳನ್ನು ಒದಗಿಸುವ ಮುಖಾಂತರ ಚುನಾವಣೆಗಳನ್ನು ಸರಳ ರೀತಿಯಲ್ಲಿ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

ಸಹಿ/–

**ಸಹಕಾರ ಚುನಾವಣಾ ಆಯುಕ್ತರು**

## ಅನುಬಂಧ–01

ಸಂಖ್ಯೆ : ಸಚುಪ್ರಾ/ಚುನಾವಣೆ/ಜನವರಿ–ಜೂನ್/02/2016 ದಿನಾಂಕ : 18.12.2015

**ದಿನಾಂಕ : 01.01.2016 ರಿಂದ 30.06.2016ರವರೆಗೆ ಪದಾವಧಿ ಮುಗಿಯಲಿರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಹಕಾರ ಸಂಘಗಳಿಗೆ/ ಸಹಕಾರಿಗಳಿಗೆ ಚುನಾವಣೆಯನ್ನು ನಡೆಸಲು ಗೊತ್ತುಪಡಿಸಲಾದ ದಿನಾಂಕಗಳು.**

| ಕ್ರ.ಸಂ. | ಅವಧಿ ಮುಕ್ತಾಯಗೊಳ್ಳಲಿರುವ ದಿನಾಂಕ | ಚುನಾವಣೆ ನಡೆಸಬೇಕಾದ ಅವಧಿ / ದಿನಾಂಕ |
|---|---|---|
| 1 | ದಿನಾಂಕ 01.01.2016 ರಿಂದ 31.01.2016ರವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಂಘಗಳ/ ಸಹಕಾರಿಗಳ ಚುನಾವಣೆಗಳು. | ಶನಿವಾರ 19.12.2015/ ಭಾನುವಾರ 20.12.2015 |
| | ದಿನಾಂಕ 19.12.2015 ಮತ್ತು 20.12.2015 ರಂದು ಕಾರಣಾಂತರಗಳಿಂದ ಚುನಾವಣೆ ನಡೆಸಲು ಸಾಧ್ಯವಾಗದ ಪದಾವಧಿಯೊಳಗೆ ಚುನಾವಣೆ ನಡೆಸಲು ಅವಕಾಶವಿರುವ ಸಂಘಗಳ/ ಸಹಕಾರಿಗಳ ಚುನಾವಣೆಗಳು. | ಶನಿವಾರ 27.12.2015/ ಭಾನುವಾರ 28.12.2015 |
| 2 | ದಿನಾಂಕ 01.02.2016 ರಿಂದ 29.02.2016ರವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಂಘಗಳ/ ಸಹಕಾರಿಗಳ ಚುನಾವಣೆಗಳು. | ಶನಿವಾರ 23.01.2016/ ಭಾನುವಾರ 24.01.2016 |
| | ದಿನಾಂಕ 23.01.2016 ಮತ್ತು 24.01.2016 ರಂದು ಕಾರಣಾಂತರಗಳಿಂದ ಚುನಾವಣೆ ನಡೆಸಲು ಸಾಧ್ಯವಾಗದ ಪದಾವಧಿಯೊಳಗೆ ಚುನಾವಣೆ ನಡೆಸಲು ಅವಕಾಶವಿರುವ ಸಂಘಗಳ/ ಸಹಕಾರಿಗಳ ಚುನಾವಣೆಗಳು. | ಶನಿವಾರ 30.01.2016/ ಭಾನುವಾರ 31.01.2016 |
| 3 | ದಿನಾಂಕ 01.03.2016 ರಿಂದ 31.03.2016ರವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಂಘಗಳ/ ಸಹಕಾರಿಗಳ ಚುನಾವಣೆಗಳು. | ಶನಿವಾರ 20.02.2016/ ಭಾನುವಾರ 21.02.2016 |
| | ದಿನಾಂಕ 20.02.2016 ಮತ್ತು 21.02.2016 ರಂದು ಕಾರಣಾಂತರಗಳಿಂದ ಚುನಾವಣೆ ನಡೆಸಲು ಸಾಧ್ಯವಾಗದ ಪದಾವಧಿಯೊಳಗೆ ಚುನಾವಣೆ ನಡೆಸಲು ಅವಕಾಶವಿರುವ ಸಂಘಗಳ/ ಸಹಕಾರಿಗಳ ಚುನಾವಣೆಗಳು. | ಭಾನುವಾರ 28.02.2016/ ಸೋಮವಾರ 29.02.2016 |
| 4 | ದಿನಾಂಕ 01.04.2016 ರಿಂದ 31.04.2016ರವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಂಘಗಳ/ ಸಹಕಾರಿಗಳ ಚುನಾವಣೆಗಳು | ಶನಿವಾರ 19.03.2016/ ಭಾನುವಾರ 20.03.2016 |
| | ದಿನಾಂಕ 19.03.2016 ಮತ್ತು 20.03.2016 ರಂದು ಕಾರಣಾಂತರಗಳಿಂದ ಚುನಾವಣೆ ನಡೆಸಲು ಸಾಧ್ಯವಾಗದ ಪದಾವಧಿಯೊಳಗೆ ಚುನಾವಣೆ ನಡೆಸಲು ಅವಕಾಶವಿರುವ ಸಂಘಗಳ/ ಸಹಕಾರಿಗಳ ಚುನಾವಣೆಗಳು | ಭಾನುವಾರ 27.03.2016/ ಸೋಮವಾರ 28.03.2016 |
| 5 | ದಿನಾಂಕ 01.05.2016 ರಿಂದ 31.05.2016ರವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಂಘಗಳ/ ಸಹಕಾರಿಗಳ ಚುನಾವಣೆಗಳು. | ಶನಿವಾರ 23.04.2016/ ಭಾನುವಾರ 24.04.2016 |
| | ದಿನಾಂಕ 23.04.2016 ಮತ್ತು 24.04.2016 ರಂದು ಕಾರಣಾಂತರಗಳಿಂದ ಚುನಾವಣೆ ನಡೆಸಲು ಸಾಧ್ಯವಾಗದ ಪದಾವಧಿಯೊಳಗೆ ಚುನಾವಣೆ ನಡೆಸಲು ಅವಕಾಶವಿರುವ ಸಂಘಗಳ/ ಸಹಕಾರಿಗಳ ಚುನಾವಣೆಗಳು. | ಶನಿವಾರ 30.04.2016/ ಸೋಮವಾರ 02.05.2016 |
| 6 | ದಿನಾಂಕ 01.06.2016 ರಿಂದ 30.06.2016ರವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಂಘಗಳ/ ಸಹಕಾರಿಗಳ ಚುನಾವಣೆಗಳು. | ಶನಿವಾರ 21.05.2016/ ಭಾನುವಾರ 22.05.2016 |
| | ದಿನಾಂಕ 21.05.2016 ಮತ್ತು 22.05.2016 ರಂದು ಕಾರಣಾಂತರಗಳಿಂದ ಚುನಾವಣೆ ನಡೆಸಲು ಸಾಧ್ಯವಾಗದ ಪದಾವಧಿಯೊಳಗೆ ಚುನಾವಣೆ ನಡೆಸಲು ಅವಕಾಶವಿರುವ ಸಂಘಗಳ/ ಸಹಕಾರಿಗಳ ಚುನಾವಣೆ. | ಭಾನುವಾರ 29.05.2016/ ಸೋಮವಾರ 30.05.2016 |

# ಅನುಬಂಧ–02

ಸಂಖ್ಯೆ: ಸಚುಪ್ರಾ/ಚುನಾವಣೆ/ಜನವರಿ–ಜೂನ್/02/2016 ದಿನಾಂಕ : 18.12.2015

## ಪ್ರಾಥಮಿಕ ಹಂತದ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿಗೆ/ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆ ನಡೆಸುವ ಬಗ್ಗೆ ಚುನಾವಣಾಧಿಕಾರಿಗಳು ಕೈಗೊಳ್ಳಬಹುದಾದ ಕ್ರಮ ಕುರಿತಂತೆ ಚೆಕ್ ಲಿಸ್ಟ್.

| ಕ್ರ.ಸಂ. | ವಿವರ | ಷರಾ |
|---|---|---|
| 1 | ದಿನಾಂಕ : 01.01.2016 ರಿಂದ 30.06.2016ರವರೆಗೆ ಅವಧಿ ಮುಗಿಯುವ ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಚುನಾವಣೆ/ ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆ ನಡೆಸುವಿಕೆ – ಸಹಕಾರ ಸಂಘಗಳ/ ಸಹಕಾರಿಗಳ ಪಟ್ಟಿಯನ್ನು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಕಳುಹಿಸುವಿಕೆ. | ಸಹಕಾರ ಚುನಾವಣಾ ಪ್ರಾಧಿಕಾರದ ಸುತ್ತೋಲೆ ಕ್ರಮಾಂಕ : ಸಚುಆ/ಚುನಾವಣೆ/ಮಾಹಿತಿ/54/2014 ದಿನಾಂಕ 31–05–2014 ರಲ್ಲಿ ಸೂಚಿಸಿರುವಂತೆ ನಿಯಮ 13ಡಿ (1) ರಡಿಯಲ್ಲಿ ಮಾಹಿತಿ ಪಡೆಯಲು ಚುನಾವಣಾಧಿಕಾರಿಗಳು ಅಗತ್ಯ ಕ್ರಮವಿಡತಕ್ಕದ್ದು. |
| 2 | ಮೊದಲ ಹಂತದಲ್ಲಿ ಪ್ರಾಥಮಿಕ ಸಂಘಗಳು/ ಸಹಕಾರಿಗಳ ಮಂಡಲಿಗಳ ಚುನಾವಣೆ ನಡೆಸುವ ಬಗ್ಗೆ ಚುನಾವಣಾ ಪ್ರಾಧಿಕಾರದಿಂದ ಚುನಾವಣೆ ನಡೆಸಬೇಕಾದ ಅವಧಿ/ ದಿನಾಂಕಗಳ ಪ್ರಕಟಣೆ. | ಆದೇಶದಲ್ಲಿ ಚುನಾವಣಾ ದಿನಾಂಕಗಳನ್ನು ಪ್ರಕಟಿಸಿರುವಂತೆ ಚುನಾವಣಾಧಿಕಾರಿಗಳು ಸಂಬಂಧಿಸಿದವರು ಅಗತ್ಯ ಕ್ರಮವಿಡತಕ್ಕದ್ದು. |
| 3 | **ರಿಟರ್ನಿಂಗ್ ಆಫೀಸರ್/ ಸಹಾಯಕ ರಿಟರ್ನಿಂಗ್ ಆಫೀಸರ್‌ಗಳ ನೇಮಕ –**<br>1. ದಿನಾಂಕ : 01.01.2016 ರಿಂದ 30.06.2016ರವರೆಗೆ ಮಂಡಲಿಯ ಅವಧಿ ಮುಗಿಯುವ ಸಂಘಗಳು/ ಸಹಕಾರಿಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಚುನಾವಣೆ/ ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆ ನಡೆಸಲು. | ಪ್ರತಿ ಸಹಕಾರ ಸಂಘಕ್ಕೆ/ ಸಹಕಾರಿಗೆ ರಿಟರ್ನಿಂಗ್ ಆಫೀಸರ್ (ಆರ್.ಓ) ಅಗತ್ಯಕ್ಕನುಗುಣವಾಗಿ ಸಹಾಯಕ ರಿಟರ್ನಿಂಗ್ ಆಫೀಸರ್ (ಎ.ಆರ್.ಓ) ನೇಮಕಾತಿ ಮಾಡಿ ನಿಯಮಾನುಸಾರ ಚುನಾವಣೆ ನಡೆಸಲು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು. (ನಿಯಮ 13ಇ) |
| 4 | **ಮತದಾರರ ಪಟ್ಟಿಯನ್ನು ಸಿದ್ಧಪಡಿಸುವಿಕೆ – ವೇಳಾಪಟ್ಟಿ ಪ್ರಕಟಣೆ.**<br>**ಪ್ರತಿ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕನು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳು.**<br>i. ಚುನಾವಣೆಯಲ್ಲಿ ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ ಸಿದ್ಧಪಡಿಸಿ ಸಲ್ಲಿಸುವಿಕೆ.<br>ii. ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ಸಿದ್ಧಪಡಿಸಿದ ದಿನಾಂಕದ ಪೂರ್ವದಲ್ಲಿ ಮರುಪಾವತಿಗೆ ಬಾಕಿಯಾಗುವ ಸದಸ್ಯರ ಕರಡುಪಟ್ಟಿ ಸಿದ್ಧಪಡಿಸುವಿಕೆ.<br>iii. ಸುಸ್ತಿದಾರರ ಕರಡು ಪಟ್ಟಿ ಸಿದ್ಧಪಡಿಸಿ ಸಲ್ಲಿಸುವಿಕೆ.<br>iv. ಅನರ್ಹತೆಗೆ ಕಾರಣಗಳನ್ನು ಸದಸ್ಯವಾರು ತೋರಿಸಿ, ಸಾಮಾನ್ಯ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರದ, ಇತರ ಸದಸ್ಯರ ಕರಡುಪಟ್ಟಿ ತಯಾರಿಸಿ ಸಲ್ಲಿಸುವಿಕೆ.<br>**[ಕರ್ನಾಟಕ ಸಹಕಾರ ಸಂಘಗಳ ನಿಯಮ–13ಡಿ(5) ರಂತೆ ಚುನಾವಣಾ ದಿನಾಂಕದ ಪೂರ್ವದ ಕನಿಷ್ಠ 60 ದಿವಸಗಳ ಮುಂಚೆ]** | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಸಿ(2) ಮತ್ತು ನಿಯಮ – 13ಡಿ(4)(5) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು, 2013ರ ನಿಯಮ–5ಬಿ(1)ಗಳ ಅವಕಾಶಗಳಂತೆ ಚುನಾವಣಾಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು. |
| 5 | **ಸಹಕಾರ ಚುನಾವಣಾ ಪ್ರಾಧಿಕಾರದ ಪರವಾಗಿ ಚುನಾವಣಾಧಿಕಾರಿಯು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳು.**<br>1. ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡುಪಟ್ಟಿ, ಸುಸ್ತಿದಾರರ ಕರಡುಪಟ್ಟಿ ಹಾಗೂ ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ನಿಗದಿಪಡಿಸಿದ ದಿನಾಂಕದ ಪೂರ್ವದಲ್ಲಿ ಮರುಪಾವತಿಗೆ ಬಾಕಿಯಾಗುವ ಸದಸ್ಯರ ಕರಡು ಪಟ್ಟಿಗಳನ್ನು ಪ್ರಕಟಿಸಲು ವ್ಯವಸ್ಥೆಗೊಳಿಸುವಿಕೆ.<br>2. (ಅ)ನಲ್ಲಿ ವಿವರಿಸಿದಂತೆ ಕರಡುಪಟ್ಟಿ ಪ್ರಕಟಣೆಯಾದ ನಂತರ ಅವುಗಳಿಂದ ಬಾಧಿತರಾದವರು ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸಲು ಮತ್ತು ಸಾಮಾನ್ಯ ಚುನಾವಣೆಯ ಪೂರ್ವದ ಕನಿಷ್ಠ 15 ದಿನಗಳ ಮುಂಚಿತವಾಗಿ ಸುಸ್ತಿದಾರರು ಸಂಬಂಧಪಟ್ಟ ಸಹಕಾರ ಸಂಘಗಳಿಗೆ ಬಾಕಿಯನ್ನು ಮರುಪಾವತಿಸಲು ತಿಳಿಸುವಿಕೆ.<br>3. ಅಂತಿಮ ಅರ್ಹ ಮತದಾರರ ಪಟ್ಟಿಯನ್ನು ಪ್ರಕಟಿಸುವಿಕೆ. | 1. ಚುನಾವಣಾ ದಿನಾಂಕಕ್ಕೆ ಪೂರ್ವದ ಕನಿಷ್ಠ 45 ದಿನಗಳ ಮುಂಚಿತವಾಗಿ ಪ್ರಕಟಿಸುವ ವ್ಯವಸ್ಥೆ ಮಾಡುವುದು.<br>2. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ–13ಡಿ(3)(ಎ)ದ ಮತ್ತು ಸೌಹಾರ್ದ ಸಹಕಾರಿ ನಿಯಮ–5(ಎ)<br>3. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು–13ಡಿ(3)(ಬಿ) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ–5(ಬಿ)ಗಳ ಅವಕಾಶದಂತೆ ಚುನಾವಣಾ ದಿನಾಂಕಕ್ಕೆ ಪೂರ್ವದ 15ನೇ ದಿನದಂದು ಅಥವಾ ಮುಂಚಿತವಾಗಿ ಪ್ರಕಟಿಸತಕ್ಕದ್ದು. |

| ಕ್ರ.ಸಂ. | ವಿವರ | ಷರಾ |
|---|---|---|
| 6 | ರಿರ್ಟನಿಂಗ್ ಅಧಿಕಾರಿಯು ಚುನಾವಣಾಧಿಕಾರಿಗಳೊಂದಿಗೆ ಸಮಾಲೋಚಿಸಿ ಮತದಾನ ಕೇಂದ್ರಗಳನ್ನು ಗುರುತಿಸುವಿಕೆ ಮತ್ತು ಅದರ ವಿವರಗಳನ್ನು ಸಿದ್ಧಪಡಿಸುವುದು. | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು –13ಇ(2)(ii) ಕರ್ನಾಟಕ ಸೌಹಾರ್ದ ಸಹಕಾರಿ ಸಂಘ ನಿಯಮ–5ಸಿ(2)(ii) ಮತ್ತು (iii)ರಂತೆ |
| 7 | ಮತದಾನ ಸಿಬ್ಬಂದಿ ಪಟ್ಟಿ ತಯಾರಿಸಿಕೊಂಡು ಅಗತ್ಯಕ್ಕನುಗುಣವಾಗಿ ಚುನಾವಣಾಧಿಕಾರಿ (ಪ್ರಿಸ್ರೈಂಡಿಂಗ್) ಮತ್ತು ಚುನಾವಣಾ ಸಿಬ್ಬಂದಿ ನೇಮಕಾತಿ ಮಾಡಲು ಕ್ರಮವಿಡುವುದು. | ಕರ್ನಾಟಕ ಸಹಕಾರ ಸಂಘ ನಿಯಮಗಳು 1960ರ ನಿಯಮ–13ಎಫ್ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ರ ನಿಯಮ–5ಡಿ(1) ರಂತೆ. |
| 8 | ಸಾಮಾನ್ಯ ಚುನಾವಣೆಗಾಗಿ ಅಧಿಸೂಚನೆ ಹೊರಡಿಸುವ ಬಗ್ಗೆ ಚುನಾವಣಾಧಿಕಾರಿಗೆ ಚುನಾವಣಾ ಪ್ರಾಧಿಕಾರ ಅನುಮತಿಸಿದೆ. | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 14 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ರ ನಿಯಮ–5ಇ ಮೇರೆಗೆ ಕ್ರಮವಾಗಿ ನಮೂನೆ–XI ಹಾಗೂ ನಮೂನೆ–1ಎ ನಲ್ಲಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದು. |
| 9 | ರಿಟರ್ನಿಂಗ್ ಆಫೀಸರ್ ಉದ್ದೇಶಿತ ಚುನಾವಣೆಗಾಗಿ ನಮೂನೆ–XII ರಲ್ಲಿ ಸಾರ್ವಜನಿಕ ನೋಟೀಸ್ ನೀಡುವುದು ಮತ್ತು ಕಛೇರಿಯ ಸೂಚನಾಫಲಕದಲ್ಲಿ ಮತ್ತು ಸಹಕಾರ ಸಂಘದ ಕಛೇರಿ ಹಾಗೂ ಅವಶ್ಯಕವೆನಿಸಿದ ಇತರೆ ಸ್ಥಳಗಳಲ್ಲಿ ಪ್ರದರ್ಶಿಸುವುದು. | ಕರ್ನಾಟಕ ಸಹಕಾರ ಸಂಘ ನಿಯಮಗಳು 1960ರ ನಿಯಮ–14(3)(ಎ) ರೀತ್ಯಾ ನಮೂನೆ–XII ರಲ್ಲಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ರ ರೀತ್ಯಾ ನಮೂನೆ–2ಎ ದಲ್ಲಿ ಹೊರಡಿಸತಕ್ಕದ್ದು. |
| 10 | ಮಾದರಿ ನೀತಿ ಸಂಹಿತೆ | ಮಾದರಿ ನೀತಿ ಸಂಹಿತೆಯನ್ನು ಸಹಕಾರ ಚುನಾವಣಾ ಆಯೋಗವು ಈಗಾಗಲೇ ಪತ್ರ ಸಂಖ್ಯೆ:ಸಚುಆ/17/ನೀತಿಸಂಹಿತೆ/2013–14, ದಿನಾಂಕ : 03.08.2013 ಹಾಗೂ ದಿನಾಂಕ: 21.09.2013ರಲ್ಲಿ ಪ್ರಕಟಿಸಿರುವಂತೆ ಚುನಾವಣಾ ಪ್ರಕ್ರಿಯೆ ಅಂತ್ಯಗೊಳ್ಳುವವರೆಗೆ ಜಾರಿಯಲ್ಲಿರುತ್ತದೆ. |
| 11 | ರಿರ್ಟನಿಂಗ್ ಆಫೀಸರ್ ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಸಾಮಾನ್ಯ ಚುನಾವಣೆ ಮುಗಿದ ನಂತರ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆಯನ್ನು ನಡೆಸುವುದು. | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ–14ಎಜಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ರ ನಿಯಮ–6ರ ಅವಕಾಶಗಳಂತೆ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸತಕ್ಕದ್ದು. |

## ಚುನಾವಣೆ ಪೂರ್ವದಲ್ಲಿ ಕೈಗೊಳ್ಳಬೇಕಾದ ಕ್ರಮಗಳು

| ಕ್ರ.ಸಂ. | ವಿಷಯ | ಸುತ್ತೋಲೆ/ ಪತ್ರಗಳ ಕ್ರಮಸಂಖ್ಯೆ ಮತ್ತು ದಿನಾಂಕ |
|---|---|---|
| 1 | ಸಹಕಾರ ಸಂಘಗಳ/ ಸಹಕಾರಿಗಳ/ ಪದಾಧಿಕಾರಿಗಳ ಸ್ಥಾನಕ್ಕೆ ಚುನಾವಣೆ ನಡೆಸುವ ಬಗ್ಗೆ ಚುನಾವಣಾಧಿಕಾರಿಗಳು ಕಾನೂನಿಗನುಗುಣವಾಗಿ ಕಾರ್ಯನಿರ್ವಹಿಸುವ ಕುರಿತು. | ಸಂಖ್ಯೆ: ಸಚುಆ/ಚುನಾವಣೆ/15/2013-14 ದಿನಾಂಕ: 26-07-2013ರ ಪತ್ರದಲ್ಲಿನ ಕ್ರಮ ಸಂಖ್ಯೆ 01 ರಿಂದ 10ರಂತೆ ಕ್ರಮವಿಡುವುದು. ಸೂಚನೆಗಳಲ್ಲಿ ರಿಟರ್ನಿಂಗ್ ಆಫೀಸರ್/ ಅಧೀಕ್ಷಾಧಿಕಾರಿಗಳು/ ನೌಕರರಿಗೆ ತರಬೇತಿ ಕುರಿತು ವ್ಯವಸ್ಥೆ ಮಾಡಲು ಸೂಚಿಸಲಾಗಿದೆ. |
| 2 | ಸಹಕಾರ ಸಂಘಗಳ/ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಗೆ ಚುನಾವಣೆ ನಡೆಸುವ ಬಗ್ಗೆ ರಿಟರ್ನಿಂಗ್ ಆಫೀಸರ್‌ಗಳಿಗೆ ನೀಡಲಾದ ಮಾರ್ಗಸೂಚಿಗಳು. | ಸುತ್ತೋಲೆ ಸಂಖ್ಯೆ: ಸಚುಆ/16/2013-14 ದಿನಾಂಕ: 05-08-2013 ರಂತೆ ಕ್ರಮವಿಡತಕ್ಕದ್ದು. |
| 3 | ಸಹಕಾರ ಸಂಘಗಳ/ ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆಗೆ ಚಿಹ್ನೆಗಳ ಹಂಚಿಕೆ ಕುರಿತು. | ಸಂಖ್ಯೆ: ಸಚುಆ/18/ಚಿಹ್ನೆ/2013-14 ದಿನಾಂಕ : 06-08-2013ರಲ್ಲಿ ಉಪನಿಬಂಧಕರುಗಳಿಗೆ ನೀಡಿರುವ ಸೂಚನೆಯಂತೆ ಕ್ರಮವಿಡತಕ್ಕದ್ದು. |
| 4 | ಸಹಕಾರ ಸಂಘಗಳ ಪದಾಧಿಕಾರಿಗಳ ಚುನಾವಣೆ ನಡೆಸುವ ಕುರಿತು. | ಸುತ್ತೋಲೆ ಸಂಖ್ಯೆ : ಸಚುಆ/ಪ.ಚು/27/2013-14 ದಿನಾಂಕ : 27-09-2013 ರಂತೆ. |
| 5 | ಸಹಕಾರ ಸಂಘಗಳ/ ಸಹಕಾರಿಗಳ ಆಡಳಿತ ಮಂಡಲಿ/ ಪದಾಧಿಕಾರಿಗಳ ಚುನಾವಣೆ - ಸಂಘಗಳ/ ಸಹಕಾರಿಗಳ ಆಡಳಿತ ಮಂಡಲಿಗಳ ಮುಖ್ಯಕಾರ್ಯನಿರ್ವಾಹಕರುಗಳು ಕಾನೂನಿಗನುಗುಣವಾಗಿ ಕೈಗೊಳ್ಳಬಹುದಾದ ಅಗತ್ಯ ಕ್ರಮವಿಡುವ ಅಂಶಗಳನ್ನು ಆಡಳಿತ ಮಂಡಲಿ ಅವಗಾಹನೆಗೆ ಮಂಡಿಸುವ ಕುರಿತು. | ಸುತ್ತೋಲೆ ಸಂಖ್ಯೆ : ಸಚುಆ/ಚುನಾವಣೆ/34/ 2013-14 ದಿನಾಂಕ : 11-11-2013 ರಂತೆ ಕ್ರಮವಿಡತಕ್ಕದ್ದು. |
| 6 | ಸಹಕಾರ ಚುನಾವಣಾ ಆಯೋಗವು ನಡೆಸುವ ಸಹಕಾರ ಸಂಘ ಸಂಸ್ಥೆಗಳ ಚುನಾವಣೆಗೆ ಪೋಲೀಸ್ ಸಿಬ್ಬಂದಿಯನ್ನು ಒದಗಿಸುವಿಕೆ-ಬಂದೋಬಸ್ತ್ ಕರ್ತವ್ಯದ ಸಂಬಂಧ ಶುಲ್ಕ ಪಾವತಿ ದರವನ್ನು ನಿಗದಿಪಡಿಸುವ ಕುರಿತು. | ಸುತ್ತೋಲೆ ಸಂಖ್ಯೆ: ಸಚುಆ/ಚುನಾವಣೆ/8/2014 ದಿನಾಂಕ: 18-03-2014 ರಂತೆ ಕ್ರಮವಿಡತಕ್ಕದ್ದು. |

## ಚುನಾವಣೆ ನಂತರದಲ್ಲಿ ಕೈಗೊಳ್ಳಬೇಕಾದ ಕ್ರಮಗಳು

| ಕ್ರ.ಸಂ. | ವಿಷಯ | ಸುತ್ತೋಲೆ/ ಪತ್ರಗಳ ಕ್ರಮಸಂಖ್ಯೆ ಮತ್ತು ದಿನಾಂಕ |
|---|---|---|
| 1 | ಚುನಾವಣೆಗೆ ಸಂಬಂಧಪಟ್ಟ ಕಾಗದ ಪತ್ರಗಳ ವಿಲೇವಾರಿ ಕುರಿತು. | ಸುತ್ತೋಲೆ ಸಂಖ್ಯೆ: ಸಚುಆ/16/2013-14 ದಿನಾಂಕ 12-08-2013 ರಂತೆ ಕ್ರಮವಿಡತಕ್ಕದ್ದು. |

ಜಿಲ್ಲಾ ಉಪ ನಿಬಂಧಕರು, ಚುನಾವಣಾಧಿಕಾರಿ, ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ಇಲಾಖಾ ಕ್ಷೇತ್ರಾಧಿಕಾರಿಗಳು ಪ್ರಾಥಮಿಕ ಸಂಘಗಳು / ಸಹಕಾರಿಗಳ ಮತದಾರರ ಪಟ್ಟಿಗೆ ಸಿದ್ಧಪಡಿಸುವಿಕೆಗೆ ಸಂಬಂಧಿಸಿದಂತೆ ಸಂಘಗಳ/ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನು ಸಿದ್ಧಪಡಿಸಿ ಸಲ್ಲಿಸಿದ (ಕ್ರ.ಸಂ.4ರಲ್ಲಿ ತಿಳಿಸಿರುವಂತೆ) ಕರಡು ಪಟ್ಟಿಗಳನ್ನು ಪರಿಶೀಲಿಸುವ ಸಂಬಂಧ ಪರಿಶೀಲನಾ ತಂಡಗಳನ್ನು ರಚಿಸಿ, ಸದಸ್ಯರ ಆಕ್ಷೇಪಣೆಗಳ ಬಗ್ಗೆ ಪರಿಶೀಲಿಸಿ ಅಂತಿಮ ಪಟ್ಟಿಗಳನ್ನು (ಕ್ರ.ಸಂ.5ರಲ್ಲಿ ತಿಳಿಸಿರುವಂತೆ) ಸಿದ್ಧಪಡಿಸಿ ದೃಢೀಕರಿಸಿ ಪ್ರಕಟಿಸುವ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳಲು ನಿರ್ದೇಶಿಸಿದೆ.

ಮೇಲೆ ವಿವರಿಸಿದಂತೆ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ನಿಯಮಗಳು 1960 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ಅವಕಾಶಗಳು ಹಾಗೂ ಸಂಘಗಳ/ ಸಹಕಾರಿಗಳ ಬೈಲಾ ಅವಕಾಶಗಳನ್ನು ಗಮನದಲ್ಲಿಟ್ಟುಕೊಂಡು ಹಂತಹಂತವಾಗಿ ಕೈಗೊಳ್ಳಬೇಕಾದ ವಿವಿಧ ಪ್ರಕ್ರಿಯೆಗಳ ಬಗ್ಗೆ ಗಮನಹರಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಚುನಾವಣಾಧಿಕಾರಿಗಳಿಗೆ ನಿರ್ದೇಶಿಸಲಾಗಿದೆ. ಪ್ರತಿ ಅಂಶಗಳ ಬಗ್ಗೆ ಆಗಾಗ್ಗೆ ಸಂಕ್ಷಿಪ್ತವಾಗಿ ವರದಿಯನ್ನು ರಾಜ್ಯ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಸಲ್ಲಿಸಲು ನಿರ್ದೇಶಿಸಿದೆ.

**ಸಹಿ/-**

**ಸಹಕಾರ ಚುನಾವಣಾ ಆಯುಕ್ತರು**

# ಸಹಕಾರ ಸಂಘಗಳ/ ಸಹಕಾರಿಗಳ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡುವ ಕುರಿತು ಸಹಕಾರ ಚುನಾವಣಾ ಪ್ರಾಧಿಕಾರದ ಆದೇಶ

**– : ಆದೇಶ : –**

**ವಿಷಯ : ಸಹಕಾರ ಸಂಘಗಳ ಅಧಿನಿಯಮ, 1959 ಮತ್ತು ನಿಯಮಗಳು 1960ರ ನಿಯಮ 2(ಐ–1) ಮತ್ತು 13ಬಿಬಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳ ನಿಯಮ2(ಜಿ–2)ರಂತೆ ದಿನಾಂಕ : 01.01.2016 ರಿಂದ 30.06.2016ರವರೆಗೆ ಪದಾವಧಿ ಮುಗಿಯಲಿರುವ ಜಿಲ್ಲೆ/ ಪ್ರಾಂತ್ಯ/ ರಾಜ್ಯ ಕಾರ್ಯವ್ಯಾಪ್ತಿ ಹೊಂದಿರುವ ಎಲ್ಲಾ ರೀತಿಯ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡುವ ಬಗ್ಗೆ.**

**ಸಂಖ್ಯೆ: ಸಚುಪ್ರಾ/ಚು.ಅ.ನೇ/03/2016** **ದಿನಾಂಕ : 18.12.2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸಹಕಾರ ಸಂಘಗಳ ನಿಯಮಗಳ ತಿದ್ದುಪಡಿ 2015ರ ನಿಯಮ 2 (ಐ–1) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳ ತಿದ್ದುಪಡಿ 2015ರ ನಿಯಮ 2 (ಜಿ–2) ಮತ್ತು ನಿಯಮ 13 ಬಿಬಿ ರಂತೆ ಚುನಾವಣಾ ಪ್ರಾಧಿಕಾರಕ್ಕೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಎನ್.ಸಿ.ಮುನಿಯಪ್ಪ, ಕರ್ನಾಟಕ ಚುನಾವಣಾ ಪ್ರಾಧಿಕಾರದ ಆಯುಕ್ತನಾದ ನಾನು ಸಹಕಾರ ಸಂಘಗಳಿಗೆ/ ಸೌಹಾರ್ದ ಸಹಕಾರಿಗಳಿಗೆ ಚುನಾವಣೆಗಳನ್ನು ನಡೆಸಲು ಈ ಕೆಳಕಂಡ ಅಧಿಕಾರಿಗಳನ್ನು ಜಿಲ್ಲಾ/ ಪ್ರಾಂತ್ಯ/ ರಾಜ್ಯ ಚುನಾವಣಾಧಿಕಾರಿಗಳನ್ನಾಗಿ ದಿನಾಂಕ : 01.01.2016 ರಿಂದ 30.06.2016ರವರೆಗೆ ನೇಮಕಾತಿ ಮಾಡಿ ಆದೇಶಿಸಿರುತ್ತೇನೆ.

| ಕ್ರ. ಸಂ. | ಜಿಲ್ಲಾ/ ಪ್ರಾಂತ್ಯ/ ರಾಜ್ಯ ಚುನಾವಣಾಧಿಕಾರಿಯಾಗಿ ನೇಮಕಗೊಳಿಸಲ್ಪಟ್ಟ ಅಧಿಕಾರಿ | ಚುನಾವಣಾಧಿಕಾರಿಯ ವ್ಯಾಪ್ತಿಗೆ ಬರುವ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು |
|---|---|---|
| 1 | ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು (ಬೆಂಗಳೂರು ನಗರದ ಉಪನಿಬಂಧಕರುಗಳು ಸೇರಿದಂತೆ) | ಆಯಾ ಜಿಲ್ಲೆಯಲ್ಲಿರುವ ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಕಾರ್ಯವ್ಯಾಪ್ತಿ ಹೊಂದಿರುವ ಪ್ರಾಥಮಿಕ ಸಹಕಾರ ಸಂಘಗಳು/ ಪಟ್ಟಣ ಬ್ಯಾಂಕುಗಳು/ ಸೌಹಾರ್ದ ಸಹಕಾರಿಗಳು/ ಸೌಹಾರ್ದ ಸಹಕಾರಿ ಬ್ಯಾಂಕುಗಳು. |
| 2 | ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು (ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ) | ತಾಲ್ಲೂಕು ಮಟ್ಟ ಹಾಗೂ ಜಿಲ್ಲಾ ಮಟ್ಟಕ್ಕಿಂತ ಕಡಿಮೆ ಕಾರ್ಯವ್ಯಾಪ್ತಿ ಹೊಂದಿರುವ ಪ್ರಾಥಮಿಕ ಸಹಕಾರ ಸಂಘಗಳು, ಸೌಹಾರ್ದ ಸಹಕಾರಿಗಳು, ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ಸೌಹಾರ್ದ ಸಹಕಾರಿ ಬ್ಯಾಂಕುಗಳು |
| 3 | ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ (ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ) | ಬೆಂಗಳೂರು ನಗರ ತಾಲ್ಲೂಕು ಮಟ್ಟ ಕಾರ್ಯವ್ಯಾಪ್ತಿ ಹೊಂದಿರುವ ಪ್ರಾಥಮಿಕ ಸಹಕಾರ ಸಂಘಗಳು, ಸೌಹಾರ್ದ ಸಹಕಾರಿಗಳು, ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ಸೌಹಾರ್ದ ಸಹಕಾರಿ ಬ್ಯಾಂಕುಗಳು. |
| 4 | ಸಹಕಾರ ಸಂಘಗಳ ಜಂಟಿ ನಿಬಂಧಕರು (ಪಟ್ಟಣ ಬ್ಯಾಂಕುಗಳ ವಿಭಾಗ), ಕೇಂದ್ರ ಕಛೇರಿ, ಬೆಂಗಳೂರು. (ಬೆಂಗಳೂರು ಮತ್ತು ಮೈಸೂರು ಪ್ರಾಂತ್ಯಕ್ಕೆ ಸಂಬಂಧಿಸಿದಂತೆ) | ಜಿಲ್ಲಾ ಮಟ್ಟ ಹಾಗೂ ಜಿಲ್ಲಾ ಮಟ್ಟಕ್ಕಿಂತ ಮೇಲ್ಪಟ್ಟ ಕಾರ್ಯವ್ಯಾಪ್ತಿ ಹೊಂದಿರುವ ಕೃಷಿಯೇತರ ಪತ್ತಿನ ಸಹಕಾರ ಸಂಘಗಳು/ ಪಟ್ಟಣ ಸಹಕಾರ ಬ್ಯಾಂಕುಗಳು. |
| | | ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ತಾಲ್ಲೂಕು ಮಟ್ಟಕ್ಕೆ ಮೇಲ್ಪಟ್ಟು ರಾಜ್ಯಮಟ್ಟದವರೆಗಿನ ಕೃಷಿಯೇತರ ಪತ್ತಿನ ಸಹಕಾರ ಸಂಘಗಳು/ ಪಟ್ಟಣ ಸಹಕಾರ ಬ್ಯಾಂಕುಗಳು. |

| | | |
|---|---|---|
| 5 | ಸಹಕಾರ ಸಂಘಗಳ ಜಂಟಿ ನಿಬಂಧಕರು, ಕಾಡಾ, ಬೆಳಗಾವಿ (ಬೆಳಗಾವಿ ಪ್ರಾಂತಕ್ಕೆ ಸಂಬಂಧಿಸಿದಂತೆ)<br>ಸಹಕಾರ ಸಂಘಗಳ ಜಂಟಿ ನಿಬಂಧಕರು, ಕಾಡಾ, ಕಲಬುರಗಿ (ಕಲಬುರಗಿ ಪ್ರಾಂತಕ್ಕೆ ಸಂಬಂಧಿಸಿದಂತೆ) | ಜಿಲ್ಲಾ ಮಟ್ಟ ಹಾಗೂ ಜಿಲ್ಲಾ ಮಟ್ಟಕ್ಕಿಂತ ಮೇಲ್ಪಟ್ಟ ಕಾರ್ಯವ್ಯಾಪ್ತಿ ಹೊಂದಿರುವ ಕೃಷಿಯೇತರ ಪತ್ತಿನ ಸಹಕಾರ ಸಂಘಗಳು/ ಪಟ್ಟಣ ಸಹಕಾರ ಬ್ಯಾಂಕುಗಳು, ಸೌಹಾರ್ದ ಸಹಕಾರಿಗಳು ಮತ್ತು ಸೌಹಾರ್ದ ಸಹಕಾರಿ ಬ್ಯಾಂಕುಗಳು. |
| 6 | ಸಹಕಾರ ಸಂಘಗಳ ಜಂಟಿ ನಿಬಂಧಕರು (ಕಾನೂನು ಕೋಶ), ಕೇಂದ್ರ ಕಛೇರಿ, ಬೆಂಗಳೂರು. (ಬೆಂಗಳೂರು ಮತ್ತು ಮೈಸೂರು ಪ್ರಾಂತ್ಯಕ್ಕೆ ಸಂಬಂಧಿಸಿದಂತೆ) | ಜಿಲ್ಲಾ ಮಟ್ಟ ಹಾಗೂ ಜಿಲ್ಲಾ ಮಟ್ಟಕ್ಕಿಂತ ಮೇಲ್ಪಟ್ಟ ಕಾರ್ಯವ್ಯಾಪ್ತಿ ಹೊಂದಿರುವ ಸೌಹಾರ್ದ ಸಹಕಾರಿಗಳು, ಸೌಹಾರ್ದ ಸಹಕಾರಿ ಬ್ಯಾಂಕುಗಳು. |
| 7 | ಕೇಂದ್ರ ಕಛೇರಿಯ ಸಹಕಾರ ಸಂಘಗಳ ಅಪರ ನಿಬಂಧಕರು (ಫೆಡರಲ್ ಮತ್ತು ಅಪೆಕ್ಸ್ ಸಹಕಾರ ಸಂಸ್ಥೆಗಳನ್ನು ಹೊರತುಪಡಿಸಿ, ಉಳಿದಂತೆ ಅವರವರ ವ್ಯಾಪ್ತಿಗೆ ಸಂಬಂಧಿಸಿದ ಸಹಕಾರ ಸಂಘಗಳು) | ಜಿಲ್ಲಾ ಮಟ್ಟ ಹಾಗೂ ಜಿಲ್ಲಾ ಮಟ್ಟಕ್ಕಿಂತ ಮೇಲ್ಪಟ್ಟ ಕಾರ್ಯವ್ಯಾಪ್ತಿ ಹೊಂದಿರುವ ಸಹಕಾರ ಸಂಘಗಳು.<br>ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ತಾಲ್ಲೂಕು ಮಟ್ಟಕ್ಕೆ ಮೇಲ್ಪಟ್ಟು ರಾಜ್ಯಮಟ್ಟದವರೆಗಿನ ಕಾರ್ಯವ್ಯಾಪ್ತಿ ಹೊಂದಿರುವ ಸಹಕಾರ ಸಂಘಗಳು. |

**ಮೇಲೆ ಪ್ರತ್ಯಾಯೋಜಿಸಲ್ಪಟ್ಟ ಅಧಿಕಾರಿಗಳ ವ್ಯಾಪ್ತಿಗೆ ಒಂದು ವೇಳೆ ಪ್ರತ್ಯಾಯೋಜಿಸಲ್ಪಟ್ಟಿರುವ ಸಹಕಾರ ಸಂಸ್ಥೆಗಳ ಚುನಾವಣಾ ವ್ಯಾಜ್ಯಗಳು ಇತ್ಯರ್ಥಕ್ಕೆ ಬಂದಲ್ಲಿ ಸದರಿ ವ್ಯಾಜ್ಯಗಳನ್ನು ಇತರೆ ಸೂಕ್ತ ಪ್ರಾಧಿಕಾರಕ್ಕೆ ವರ್ಗಾಯಿಸತಕ್ಕದ್ದು ಎಂಬ ಸೂಚನೆಯೊಂದಿಗೆ ಸ್ಪಷ್ಟೀಕರಣ ನೀಡಿರುವಂತೆ ಕ್ರಮವಿಡತಕ್ಕದ್ದು.**

ಸಹಕಾರ ಚುನಾವಣಾ ಪ್ರಾಧಿಕಾರ/ ಚುನಾವಣಾಧಿಕಾರಿಯು ಕಡ್ಡಾಯವಾಗಿ ರಿಟರ್ನಿಂಗ್ ಅಧಿಕಾರಿಯನ್ನು ರ್‍ಯಾಂಡ್‌ಮೈಜೇಷನ್ (Randomization) ಮೂಲಕ ನೇಮಕ ಮಾಡತಕ್ಕದ್ದು. ಇದನ್ನು ಚುನಾವಣಾ ಪ್ರಾಧಿಕಾರದ ಗಮನಕ್ಕೆ ತಪ್ಪದೇ ತರಲು ಕ್ರಮ ವಹಿಸತಕ್ಕದ್ದು.

ಚುನಾವಣಾಧಿಕಾರಿಗಳು ಪ್ರಾಥಮಿಕ ಸಹಕಾರ ಸಂಘಗಳು/ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಸಲ್ಲಿಸಿದ ಮತದಾರರ ಪಟ್ಟಿಯನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಪರಿಶೀಲಿಸಿ ಸಿದ್ಧಪಡಿಸಲು ಹಾಗೂ ಮತ ನೀಡುವ ಹಕ್ಕುಳ್ಳ/ ಸುಸ್ತಿದಾರರ ಹಾಗೂ ಸುಸ್ತಿಯಾಗುವವರ ಕರಡುಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ ಕನಿಷ್ಠ 45 ದಿನಗಳ ಮುಂಚಿತವಾಗಿ ಪ್ರಕಟಿಸಿ, ಆಕ್ಷೇಪಣೆ ಕರೆಯುವುದು, ಅಂತಿಮ ಮತದಾರರ ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ 15 ದಿನಗಳ ಪೂರ್ವದಲ್ಲಿ ಪ್ರಕಟಿಸತಕ್ಕದ್ದು. ಅವುಗಳ ಪ್ರತಿಯನ್ನು ಪ್ರಾಧಿಕಾರಕ್ಕೆ ಕಳುಹಿಸಿ ಕೊಡತಕ್ಕದ್ದು.

ಅಲ್ಲದೇ ಪ್ರತಿ ಸಹಕಾರ ಸಂಘದ/ ಸಹಕಾರಿಯ ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ ಹಾಗೂ ಮತದಾರರ ಹಕ್ಕನ್ನು ಹೊಂದಿರದ ಇತರ ಸದಸ್ಯರ ಕರಡು ಪಟ್ಟಿಗಳನ್ನು ಹಾಗೂ ಮತದಾರರ ಅಂತಿಮ ಪಟ್ಟಿ ಮತ್ತು ಚುನಾವಣಾ ವೇಳಾಪಟ್ಟಿಗಳನ್ನು ಸಂಬಂಧಪಟ್ಟ ಸಹಕಾರ ಸಂಘದ/ ಸಹಕಾರಿಯ ಮತ್ತು ಅದರ ಶಾಖೆಗಳ ಸೂಚನಾಫಲಕಗಳನ್ನು, ಸಹಕಾರ ಇಲಾಖೆಯ ಸ್ಥಳೀಯ ಕಛೇರಿಯಲ್ಲಿ, ಸಹಕಾರ ಸಂಘದ ಜಾಲತಾಣದಲ್ಲಿ (ಇದ್ದಲ್ಲಿ) ಹಾಗೂ ಸಹಕಾರ ಸಂಘದ ಸದಸ್ಯರಿಗೆ ತಲುಪಲು ಅವಕಾಶವಿರುವಂತಹ ಇತರ ಸ್ಥಳಗಳಲ್ಲಿ ಪ್ರಕಟಿಸತಕ್ಕದ್ದು. ಅವುಗಳ ಪ್ರತಿಯನ್ನು ಪ್ರಾಧಿಕಾರಕ್ಕೆ ಕಳುಹಿಸಿ ಕೊಡತಕ್ಕದ್ದು.

ಚುನಾವಣಾಧಿಕಾರಿಗಳು ಅವರ ಕಾರ್ಯವ್ಯಾಪ್ತಿಗೆ ಬರುವಂತಹ ಸಹಕಾರ ಸಂಘಗಳ/ ಸಹಕಾರಿಗಳ ಚುನಾವಣೆಯನ್ನು ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಯನ್ನು ಪ್ರಾಧಿಕಾರದಿಂದ ಕಾಲಕಾಲಕ್ಕೆ ನೀಡಲಾದ ಸುತ್ತೋಲೆ, ಅಧಿಸೂಚನೆ ಮತ್ತು ಮಾರ್ಗಸೂಚಿಗಳನ್ನು ಅನುಸರಿಸಿ ಚುನಾವಣೆಗಳನ್ನು ನಿಯಮಾನುಸಾರ, ಪಾರದರ್ಶಕವಾಗಿ ನಿಷ್ಪಕ್ಷಪಾತದಿಂದ ನಡೆಸಲು ಆದೇಶಿಸಿದೆ.

**ಸಹಿ/–**

**ಸಹಕಾರ ಚುನಾವಣಾ ಆಯುಕ್ತರು**

# ಮತದಾರರ ಪಟ್ಟಿ ತಯಾರಿಸುವ ಕುರಿತಂತೆ ಚುನಾವಣಾ ಪ್ರಾಧಿಕಾರದ ಸುತ್ತೋಲೆ

ಸಂಖ್ಯೆ:ಸಚುಪ್ರಾ/ಮ.ಪಟ್ಟಿ/02/2016 ದಿನಾಂಕ : 14.12.2015

## ಸುತ್ತೋಲೆ

**ವಿಷಯ : ಚುನಾವಣಾ ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಟ್ಟ ಚುನಾವಣಾಧಿಕಾರಿಗಳು ಪದಾವಧಿಯು ಮುಕ್ತಾಯವಾಗಲಿರುವ ಚುನಾವಣೆಗಳು ಸನ್ನಿಹಿತವಾಗಿರುವ ಎಲ್ಲಾ ಸಹಕಾರ ಸಂಘಗಳ/ ಸಹಕಾರಿಗಳ ಕ್ರೋಢೀಕೃತ ಪಟ್ಟಿಯೊಂದಿಗೆ ಕೂಲಂಕುಶ ಪರಿಶೀಲನೆಯ ನಂತರ ಮತದಾರರ ಪಟ್ಟಿ ಸಲ್ಲಿಸುವ ಬಗ್ಗೆ.**

2011ರ ಭಾರತದ ಸಂವಿಧಾನದ 97ನೇ ತಿದ್ದುಪಡಿಯಂತೆ ಕರ್ನಾಟಕದಲ್ಲಿ 2012ರಲ್ಲಿ ಸಹಕಾರ ಸಂಘಗಳ ಕಾಯ್ದೆಗೆ ತಿದ್ದುಪಡಿ ತಂದು ಸಹಕಾರ ಚುನಾವಣಾ ಆಯೋಗದ ರಚನೆಯಾದ ನಂತರ 2013 ರಿಂದ 2015ರ ವರೆಗಿನ ಆಡಳಿತ/ಮಂಡಲಿಯ/ಸದಸ್ಯರ/ಪದಾಧಿಕಾರಿಗಳ ಸಾಮಾನ್ಯ ಮತ್ತು ಖಾಲಿ ಬಿದ್ದ ರಿಕ್ತ ಸ್ಥಾನಗಳಿಗೆ ಚುನಾವಣೆಗಳನ್ನು ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ ಮತ್ತು 39ಎಎ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 26 ಮತ್ತು 26ಎ ಅವಕಾಶದಂತೆ ಪ್ರಾಧಿಕಾರದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣದಂತೆ ನಡೆಸಲಾಗಿರುತ್ತದೆ. ಅದೇ ರೀತಿಯಲ್ಲಿ ಚುನಾವಣೆಗಳನ್ನು ನಡೆಸುವ ತತ್ಸಂಬಂಧಿತ ಮತದಾರರ ಪಟ್ಟಿಯನ್ನು ತಯಾರಿಸುವ ಕಾರ್ಯವನ್ನು ಪ್ರಾಧಿಕಾರದ ಅಧೀಕ್ಷಣೆ, ನಿರ್ದೇಶನ, ನಿಯಂತ್ರಣಕ್ಕೊಳಪಟ್ಟು ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎಎ(2) ರಂತೆ ಹಾಗೂ ಕರ್ನಾಟಕ ಸೌಹಾರ್ದ ನಿಯಮಗಳು 2004 ನಿಯಮ 5ಬಿ ಅವಕಾಶದಂತೆ ನಿರ್ವಹಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮತದಾರರ ಪಟ್ಟಿಯನ್ನು ತಯಾರಿಸುವ ಕುರಿತು ಉಲ್ಲೇಖಿತ ದಿನಾಂಕಗಳಂದು ಅಧಿಸೂಚನೆ/ ಸುತ್ತೋಲೆಗಳನ್ನು ಈಗಾಗಲೇ ಹೊರಡಿಸಲಾಗಿದೆ.

ಮತದಾರರ ಪಟ್ಟಿಯನ್ನು ತಯಾರಿಸುವ ಪ್ರಕ್ರಿಯೆಯಲ್ಲಿ ಗುರುತರವಾದ ಲೋಪದೋಷಗಳಾಗಿರುವ ಬಗ್ಗೆ ದೂರುಗಳು ರಾಜ್ಯಾದ್ಯಂತ ಸದಸ್ಯರುಗಳಿಂದ ಪ್ರಾಧಿಕಾರಕ್ಕೆ ಸಲ್ಲಿಕೆಯಾಗಿದ್ದ ಹಿನ್ನೆಲೆಯಲ್ಲಿ, ನಿಯಮಾನುಸಾರ ಸರಿಯಾದ ಮತದಾರರ ಪಟ್ಟಿಯನ್ನು ತಯಾರಿಸುವ ಬಗ್ಗೆ ಈಗಾಗಲೇ ಪ್ರಾಧಿಕಾರದಿಂದ ದಿನಾಂಕ 12.06.2015ರಂದು ಉಲ್ಲೇಖ (2)ರ ಸುತ್ತೋಲೆಯನ್ನು ಹೊರಡಿಸಲಾಗಿದೆ. ಸದರಿ ಸುತ್ತೋಲೆಯಲ್ಲಿ ಮತದಾರರ ಪಟ್ಟಿಯನ್ನು ಕೇವಲ ಚುನಾವಣೆ ಪೂರ್ವದಲ್ಲಿ ತಯಾರಿಸುವುದಕ್ಕಿಂತ ಪ್ರತಿ ವರ್ಷ ಕಡ್ಡಾಯವಾಗಿ ಆಯಾ ವರ್ಷದ ಏಪ್ರಿಲ್–1 ರಿಂದ ಮುಂದಿನ ವರ್ಷದ ಮಾರ್ಚ್–31 ರವರೆಗೆ ಎಲ್ಲಾ ರೀತಿಯ ಸಹಕಾರ ಸಂಘಗಳ/ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಮ್ಮ ತಮ್ಮ ಸಂಘಗಳ ಸರಿಯಾದ ಮತದಾರರುಗಳ ಪರಿಷ್ಕೃತ ಪಟ್ಟಿಯನ್ನು ತಯಾರಿಸಲು ಈ ಮೂಲಕ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ. ಈ ಬಗ್ಗೆ ಎಲ್ಲಾ ರೀತಿಯ ಸಹಕಾರ ಸಂಘಗಳು/ ಸಹಕಾರಿಗಳು, ಆಯಾ ವಿಭಾಗಗಳ ರಾಜ್ಯಮಟ್ಟದ ಮಹಾಮಂಡಳಿಗಳು/ ಜಿಲ್ಲಾ ಮಟ್ಟದ ಫೆಡರಲ್ ಸಂಘಗಳು ಮತ್ತು ಯೂನಿಯನ್‌ಗಳು/ ಜಿಲ್ಲಾ ಬ್ಯಾಂಕುಗಳು/ ಹಾಲು ಒಕ್ಕೂಟಗಳು ಇದರ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಈ ಬಗ್ಗೆ ತಮ್ಮ ಅಧೀನದಲ್ಲಿ ಬರುವ ಎಲ್ಲಾ ಸಹಕಾರ ಸಂಘಗಳ/ ಸಹಕಾರಿಗಳ ಸರಿಯಾದ ಮತದಾರರ ಪಟ್ಟಿಯನ್ನು ತಯಾರಿಸುವ ಬಗ್ಗೆ ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಡುವ ಚುನಾವಣಾಧಿಕಾರಿಗಳಿಗೆ, ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಮತ್ತು ರಿಟರ್ನಿಂಗ್ ಆಫೀಸರ್‌ಗಳಿಗೆ ಈ ಬಗ್ಗೆ ತಮ್ಮ ಹಂತದಲ್ಲಿ ಆಯಾ ವರ್ಷದಲ್ಲಿ ಚುನಾವಣೆಗೆ ಬಾಕಿ ಇರುವ ಸಂಘಗಳ ಚುನಾವಣೆ ನಡೆಸಲು ಮತದಾರರ ಪಟ್ಟಿ ತಯಾರಿಸುವ ಕುರಿತಂತೆ ಈ ಸುತ್ತೋಲೆಯಲ್ಲಿ ನೀಡಲಾದ ಮಾರ್ಗದರ್ಶನಗಳಂತೆ ಸೂಕ್ತ ತರಬೇತಿ ನೀಡಲು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

ಮತದಾರರ ಪಟ್ಟಿ ತಯಾರಿಕೆಗೆ ಸಂಬಂಧಿಸಿದಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ನಿಯಮಗಳು 1960 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಮತ್ತು ನಿಯಮಗಳು 2004 ರಂತೆ ಅನ್ವಯವಾಗಬಹುದಾದ ವಿವಿಧ ಪ್ರಕರಣಗಳ ಮತ್ತು ನಿಯಮಗಳ ವಿವರಗಳನ್ನು ಅನುಬಂಧ–1ರಲ್ಲಿ ಗಮನಿಸುವುದು.

ಮತದಾರರ ಅರ್ಹತೆ ಮತ್ತು ಅನರ್ಹತೆ ಕುರಿತಂತೆ ನಿರ್ಧರಿಸಲು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮಗಳು 1959ರ ಪ್ರಕರಣ 20(2) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 20(2) ಹಾಗೂ 55 ರೀತ್ಯಾ ಮತದಾರರ ಪಟ್ಟಿ ತಯಾರಿಸುವಾಗ ಸದಸ್ಯನ ಮಾಹಿತಿ ಹಾಗೂ ಷೇರು ವಿವರಗಳನ್ನು, ವಾರ್ಷಿಕ ಮಹಾಸಭೆಗೆ ಹಾಜರಾದ ಸದಸ್ಯರ ಹಾಜರಾತಿ ವಿವರಗಳನ್ನು ಹಾಗೂ ಸದಸ್ಯರು ಕನಿಷ್ಠ ವ್ಯವಹಾರ/ ಸೌಲಭ್ಯಗಳನ್ನು ಪಡೆದಿರುವ ವಿವರಗಳನ್ನು ನಿಯಮಾನುಸಾರ ನಿರ್ಧರಿಸಲು ಪುಸ್ತಕಗಳನ್ನು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಕಡ್ಡಾಯವಾಗಿ ನಿರ್ವಹಿಸತಕ್ಕದ್ದಾಗಿರುತ್ತದೆ. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಸಿ ರೀತ್ಯಾ ಸಹಕಾರ ಚುನಾವಣಾ ಪ್ರಾಧಿಕಾರದ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿರ್ದೇಶನಕ್ಕೆ ಒಳಪಟ್ಟು ಸಹಕಾರ ಸಂಘಗಳ/ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕನು ಸಹಕಾರ ಸಂಘಗಳ/ ಸಹಕಾರಿಗಳ ಚುನಾವಣೆಗಾಗಿ ಮತದಾರರ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದಾಗಿದೆ. ಮುಖ್ಯಕಾರ್ಯನಿರ್ವಾಹಕನಿಂದ ಈ ರೀತಿ ತಯಾರಿಸಲ್ಪಟ್ಟ ಪಟ್ಟಿಯನ್ನು ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಟ್ಟ ಚುನಾವಣಾಧಿಕಾರಿಯು ಪರಿಶೀಲಿಸಿ ಅನುಮೋದಿಸಬೇಕಾಗಿರುತ್ತದೆ.

ಮತದಾರರ ಪಟ್ಟಿ ತಯಾರಿಕಾ ಪ್ರಕ್ರಿಯೆಯ ಪೂರ್ವದಲ್ಲಿ ಸಹಕಾರ ಸಂಘಗಳ ನಿಯಮ 1960, ನಿಯಮ 13ಡಿ(1) ರಂತೆ ಚುನಾವಣಾ ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಟ್ಟ ಚುನಾವಣಾಧಿಕಾರಿಯು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಹಕಾರ ಸಂಘಗಳ/ ಸಹಕಾರಿಗಳ ಆಡಳಿತ ಮಂಡಲಿಗಳ ಪದಾವಧಿಯು ಮುಕ್ತಾಯವಾಗುವ ಕನಿಷ್ಟ 120 ದಿನಗಳ ಪೂರ್ವದಲ್ಲಿ ಚುನಾವಣೆಗಳು ಸನ್ನಿಹಿತವಾಗಿರುವ ಎಲ್ಲಾ ಸಹಕಾರ ಸಂಘಗಳ ಕ್ರೋಢೀಕೃತ ಪಟ್ಟಿಯನ್ನು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದಾಗಿದೆ.

ಎಲ್ಲಾ ಸಹಕಾರ ಸಂಘಗಳ/ ಸಹಕಾರಿಗಳ ಆಡಳಿತ ಮಂಡಲಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಡಿ(4)ರ ರೀತ್ಯಾ ಚುನಾವಣಾ ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಟ್ಟ ಚುನಾವಣಾಧಿಕಾರಿಯು ಪ್ರಾಧಿಕಾರದ ನಿರ್ದೇಶನದಂತೆ ಸರಿಯಾದ ಮತದಾರರ ಪಟ್ಟಿಯನ್ನು ತಯಾರಿಸಿ ಅನುಮೋದಿಸಲು ಅನುವಾಗುವಂತೆ ಸಮರ್ಪಕ ಮಾಹಿತಿಯನ್ನು ಒದಗಿಸುವುದು ಆದ್ಯ ಕರ್ತವ್ಯವಾಗಿರುತ್ತದೆ. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಡಿ(5)ರ ರೀತ್ಯಾ ಪ್ರತಿ ಸಹಕಾರ ಸಂಘದ ಮುಖ್ಯಕಾರ್ಯನಿರ್ವಾಹಕನು ಸದಸ್ಯತ್ವ ರಿಜಿಸ್ಟರಿನಲ್ಲಿ ದಾಖಲಿಸಲಾದ ನಮೂದುಗಳ ಆಧಾರದ ಮೇಲೆ (ಅ) ಚುನಾವಣೆಯಲ್ಲಿ ಮತ ನೀಡುವ ಹಕ್ಕುಳ್ಳ ಸದಸ್ಯರ ಅಥವಾ ಪ್ರತಿನಿಧಿಗಳ ಮತ್ತು ಡೆಲಿಗೇಟುಗಳ ಕರಡು ಪಟ್ಟಿಯನ್ನು, (ಆ) ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ನಿಗದಿಪಡಿಸಿದ ದಿನಾಂಕದ ಪೂರ್ವದಲ್ಲಿ ಮರುಪಾವತಿಗೆ ಬಾಕಿಯಾಗುವ ಸದಸ್ಯರ ಕರಡು ಪಟ್ಟಿಯನ್ನು, (ಇ) ಸುಸ್ತಿದಾರರ ಕರಡು ಪಟ್ಟಿಯನ್ನು, (ಈ) ಅನರ್ಹತೆಗೆ ಕಾರಣಗಳನ್ನು ಸದಸ್ಯವಾರು ತೋರಿಸಿ, ಸಾಮಾನ್ಯ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರದ, ಇತರ ಸದಸ್ಯರ ಅಥವಾ ಪ್ರತಿನಿಧಿಗಳ ಮತ್ತು ಡೆಲಿಗೇಟುಗಳ ಕರಡು ಪಟ್ಟಿಯನ್ನು ತಯಾರಿಸತಕ್ಕದ್ದಾಗಿದೆ. ಅದೇ ರೀತಿಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 5ಬಿರಂತೆ ಪ್ರತಿ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನು ಸದಸ್ಯತ್ವ ರಿಜಿಸ್ಟರಿನಲ್ಲಿ ದಾಖಲಿಸಲಾದ ನಮೂದುಗಳ ಆಧಾರದ ಮೇಲೆ ಚುನಾವಣೆಯಲ್ಲಿ ಮತ ನೀಡುವ ಹಕ್ಕುಳ್ಳ ಸದಸ್ಯರ ಹಾಗೂ ಸದಸ್ಯ ಸಹಕಾರಿಗಳ ಮತ ನೀಡುವ ಹಕ್ಕುಳ್ಳ ಡೆಲಿಗೇಟುಗಳ ಕರಡು ಅರ್ಹತಾ ಪಟ್ಟಿಯನ್ನು, ಸಹಕಾರಿಯ ಸುಸ್ತಿದಾರರ ಕರಡು ಪಟ್ಟಿ ಹಾಗೂ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರದ ಇತರ ಸದಸ್ಯರ/ ಪ್ರತಿನಿಧಿ/ ಡೆಲಿಗೇಟುಗಳ ಕರಡು ಪಟ್ಟಿಗಳನ್ನು ತಯಾರಿಸತಕ್ಕದ್ದಾಗಿದೆ.

ಅದೇ ರೀತಿಯಲ್ಲಿ ನಿಯಮ 13ಡಿ(5)(ಎ)ರಡಿ ಬಿಡಿ ವ್ಯಕ್ತಿಯ ಸದಸ್ಯನ ಸಂಬಂಧದಲ್ಲಿ, ಸದಸ್ಯನ ಅಥವಾ ಪ್ರತಿನಿಧಿಯ ಹೆಸರು, ಪ್ರವೇಶತ್ವದ ಸಂಖ್ಯೆ, ಹೆತ್ತವರ ಅಥವಾ ಪತಿಯ ಹೆಸರು ಹಾಗೂ ಅಂಥ ಸದಸ್ಯನ ಅಥವಾ ಪ್ರತಿನಿಧಿಯ ವಿಳಾಸ ಹಾಗೂ (ಬಿ) ಸದಸ್ಯ ಸಹಕಾರ ಸಂಘದ ಸಂಬಂಧದಲ್ಲಿ, ಪ್ರವೇಶತ್ವ ಸಂಖ್ಯೆ, ಸಹಕಾರ ಸಂಘದ ಹೆಸರು, ಸಂಘವನ್ನು ಪ್ರತಿನಿಧಿಸಲು ಪ್ರಸ್ತಾಪಿಸಿರುವ ಡೆಲಿಗೇಟಿನ ಹೆಸರು ಇರತಕ್ಕದ್ದು ಮತ್ತು ಸದರಿ ಪಟ್ಟಿಗಳನ್ನು ಸಂಬಂಧಪಟ್ಟ ಪುಸ್ತಕಗಳ, ದಾಖಲೆಗಳ ಮತ್ತು ದಸ್ತಾವೇಜುಗಳ ಸಹಿತ ಚುನಾವಣಾ ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಟ್ಟ ಚುನಾವಣಾಧಿಕಾರಿಯವರಿಗೆ ಚುನಾವಣಾ ದಿನಾಂಕದ ಪೂರ್ವದ ಕನಿಷ್ಠ ಅರವತ್ತು ದಿನಗಳ ಮುಂಚಿತವಾಗಿ ಒದಗಿಸತಕ್ಕದ್ದಾಗಿರುತ್ತದೆ.

ಸಹಕಾರ ಸಂಘಗಳ/ ಸಹಕಾರಿಗಳ ಸದಸ್ಯರುಗಳಿಂದ ಗೌರವ ಉಚ್ಚ ನ್ಯಾಯಾಲಯಗಳಲ್ಲಿ ಮತ್ತು ಇತರೆ ಯಾವುದೇ ನ್ಯಾಯಾಲಯಗಳಲ್ಲಿ ಅರ್ಜಿಗಳಲ್ಲಿ ಸಲ್ಲಿಸಿರುವ ಬಗ್ಗೆ ನ್ಯಾಯಾಲಯಗಳು ನೀಡಬಹುದಾದ ಆದೇಶಗಳನ್ನು/ ನಿರ್ದೇಶನಗಳನ್ನು ಗಮನದಲ್ಲಿಟ್ಟುಕೊಂಡು ಮತದಾರರ ಪಟ್ಟಿಯನ್ನು ತಯಾರಿಸಕ್ಕದ್ದು. ಅದೇ ರೀತಿಯಲ್ಲಿ, ಸರ್ಕಾರ/ ನಿಬಂಧಕರು ಕಾಲಕಾಲಕ್ಕೆ ಹೊರಡಿಸಬಹುದಾದ ನಿರ್ದೇಶನಗಳನ್ನು/ ಆದೇಶಗಳನ್ನು/ ಅಧಿಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಮತದಾರರ ಪಟ್ಟಿಯನ್ನು ತಯಾರಿಸತಕ್ಕದ್ದು. ಮತದಾರರ ಪಟ್ಟಿ ತಯಾರಿಕೆಗೆ ಸಂಬಂಧಿಸಿದಂತೆ, ನಿಯಮ 13ಸಿ(2), 13ಡಿ(4) ಮತ್ತು (5)ರಂತೆ ಕ್ರಮ ಕೈಗೊಂಡ ನಂತರ ನಿಯಮ 13ಎ ರಂತೆ ಗುರುತಿನ ಚೀಟಿಯನ್ನು ಸಹ ನೀಡಿದ ವಿವರಗಳನ್ನು ತಯಾರಿಸಿ ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಟ್ಟ ಚುನಾವಣಾಧಿಕಾರಿಗಳು ಸುತ್ತೋಲೆಗೆ ಲಗತ್ತಿಸಿರುವ ಚೆಕ್‌ಲಿಸ್ಟ್ ನಮೂನೆ ಮಾಹಿತಿಗಳನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಪರಿಶೀಲಿಸಿ, ದೃಢೀಕರಿಸಿ ಅವುಗಳ ಪ್ರತಿಗಳನ್ನು ನಿಗದಿತ ಸಮಯಕ್ಕೆ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು. ಅದೇ ರೀತಿಯಲ್ಲಿ ಚುನಾವಣಾಧಿಕಾರಿಯು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಂಘಗಳ/ ಸಹಕಾರಿಗಳ ಮತದಾರರ ಪಟ್ಟಿಯನ್ನು ಹಾಗೂ ಮತದಾರರ ಪಟ್ಟಿಯಂತೆ ಮತದಾರರಿಗೆ ನೀಡಿರುವ ಗುರುತಿನ ಚೀಟಿಗಳ ವಿವರಗಳನ್ನು (ಪ್ರತಿ ವರ್ಷದ ಏಪ್ರಿಲ್-1 ರಿಂದ ಮುಂದಿನ ವರ್ಷದ ಮಾರ್ಚ್-31 ರವರೆಗೆ) ಗಣಕೀಕರಿಸಿ, ದೃಢೀಕರಿಸಿದ ಸಾಫ್ಟ್‌ಕಾಪಿ ಮತ್ತು ಹಾರ್ಡ್‌ಕಾಪಿಗಳನ್ನು ಸಹಕಾರ ಚುನಾವಣಾ ಪ್ರಾಧಿಕಾರದಿಂದ ಮೇಲ್ವಿಚಾರಣೆಗೆ ನಿಯೋಜಿಸಲ್ಪಟ್ಟ ಅಧಿಕಾರಿಗಳು ಸಹಕಾರ ಸಂಘಗಳಿಗೆ/ ಸಹಕಾರಿಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅನುಬಂಧ-2ರ ಚೆಕ್‌ಲಿಸ್ಟ್‌ಗೆ ಸಂಬಂಧಿಸಿದ ದಾಖಲಾತಿಗಳೊಂದಿಗೆ ಪರಿಶೀಲನೆಗೆ ತಪ್ಪದೇ ಹಾಜರು ಪಡಿಸತಕ್ಕದ್ದು.

ಮೇಲಿನ ಕಂಡಿಕೆಗಳಲ್ಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಪ್ರತಿ ವರ್ಷದಲ್ಲಿ ಚುನಾವಣೆಗೆ ಬಾಕಿ ಇರುವ ಎಲ್ಲಾ ಸಹಕಾರ ಸಂಘಗಳ/ ಸಹಕಾರಿಗಳ ಚುನಾವಣೆಗಳನ್ನು ಚುನಾವಣಾ ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಟ್ಟ ಚುನಾವಣಾಧಿಕಾರಿಗಳು ನಿಯಮಾನುಸಾರ, ಪಾರದರ್ಶಕವಾಗಿ ಮತ್ತು ನಿಷ್ಪಕ್ಷಪಾತವಾಗಿ ನಡೆಸುವ ಉದ್ದೇಶದಿಂದ ಸರಿಯಾದ ಮತದಾರರ ಪಟ್ಟಿಯನ್ನು ತಯಾರಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

**ಸಹಿ/-**

**ಸಹಕಾರ ಚುನಾವಣಾ ಆಯುಕ್ತರು**

# ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರ 14ನೇ ತಂಡದ ವ್ಯಕ್ತಿತ್ವ ವಿಕಸನ ತರಬೇತಿ

**ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರದ 14ನೇ ತಂಡದ ಕಾರ್ಯಕ್ರಮವನ್ನು ಕೃಷಿ ವಿಶ್ವವಿದ್ಯಾಲಯ, ರಾಯಚೂರು ಇದರ ಕೃಷಿ ವಿಜ್ಞಾನ ಕೇಂದ್ರದಲ್ಲಿ ದಿನಾಂಕ : 03.12.2015 ರಿಂದ 12.12.2015ರವರೆಗೆ ನಡೆಸಲಾಯಿತು.**

## ಉದ್ಘಾಟನಾ ಸಮಾರಂಭ 03.12.2015




### ತರಬೇತಿ ಶಿಬಿರದ ಉದ್ಘಾಟನೆ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಸಹಕಾರ ಕ್ಷೇತ್ರದ ಪಾತ್ರ ಮಹತ್ವದ್ದು – ಕುಲಸಚಿವ ಶ್ರೀ ಚಂದರಗಿ

ಕಾರ್ಯಕ್ರಮವನ್ನು ವಿಶ್ವ ವಿದ್ಯಾಲಯದ ಕುಲಸಚಿವರಾದ ಶ್ರೀ ಡಿ.ಎಮ್. ಚಂದರಗಿಯವರು ಉದ್ಘಾಟಿಸಿ, ಸಹಕಾರ ಕ್ಷೇತ್ರದಲ್ಲಿ ಸಮಾಜದ ಸಾಮಾನ್ಯ ವ್ಯಕ್ತಿಗಳಿಗೆ ಅವರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಹೊಂದಲು ಅವಕಾಶವಿದೆ. ಈ ಕ್ಷೇತ್ರದ ಸಾಧನೆಯನ್ನು, ಕಾರ್ಯಕ್ರಮಗಳನ್ನು ಅವರ ಬಳಿ ತಲುಪಿಸುವ ಕಾರ್ಯ ಸಹಕಾರಿಗಳಿಂದ, ಕಾರ್ಯಕರ್ತರುಗಳಿಂದ, ಅಧಿಕಾರಿಗಳಿಂದ ಪರಿಣಾಮಕಾರಿಯಾಗಿ ಆಗಬೇಕಿದೆ. ಅದಕ್ಕಾಗಿ ಅವರುಗಳು ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಪರಿಣಿತಿಯನ್ನು ಪಡೆಯುವುದು ಅವಶ್ಯಕ. ಅದಕ್ಕಾಗಿ ಇಂತಹ ತರಬೇತಿಗಳು ಪೂರಕ ಎಂದು ತಿಳಿಸಿದರು.

### ಸಹಕಾರ ಕ್ಷೇತ್ರದ ಸಾಧನೆ, ಅವಕಾಶಗಳ ಮತ್ತು ಕಾರ್ಯಚಟುವಟಿಕೆಗಳ ಅರಿವು ಸಿಬ್ಬಂದಿಯವರಿಗೆ ಅವಶ್ಯಕ – ಶ್ರೀ ಗುರುನಾಥ ಜಾಂತಿಕರ

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ರಾಜ್ಯದಲ್ಲಿ 3400ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. ಸಹಕಾರ ಕ್ಷೇತ್ರದ ಕಾರ್ಯಾಚರಣೆಯಲ್ಲಿ ಹೊಸ ಚೈತನ್ಯವನ್ನು ಮೂಡಿಸಿವೆ. ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ಸಂಯುಕ್ತ ಸಹಕಾರಿಯು ಹಲವು ವಿಧವಾದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ಗುಣಮಟ್ಟದ ಬಗ್ಗೆ ರಾಜ್ಯದಾದ್ಯಂತ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ಸಿಬ್ಬಂದಿಯವರಿಗಾಗಿ ವ್ಯಕ್ತಿತ್ವ ವಿಕಸನ ತರಬೇತಿಗಳನ್ನು ಕಳೆದ 7 ವರ್ಷಗಳಿಂದ ಹಮ್ಮಿಕೊಳ್ಳಲಾಗುತ್ತಿದೆ. ಇದು 14ನೇ ತಂಡ. ಉತ್ತಮ ಪರಿಸರಗಳಲ್ಲಿ, ಉತ್ತಮ ವಿಷಯಗಳನ್ನು ಆಯ್ಕೆ ಮಾಡಿ, ಪರಿಣಿತ ಸಂಪನ್ಮೂಲ ವ್ಯಕ್ತಿಗಳನ್ನು ಬರಮಾಡಿಕೊಂಡು ತರಬೇತಿ ನೀಡುವುದರ ಜೊತೆಗೆ ಯೋಗ ತರಬೇತಿ ಮತ್ತು ಅನೇಕ ಪ್ರಾಯೋಗಿಕಗಳನ್ನು ವ್ಯವಸ್ಥೆ ಮಾಡಲಾಗುತ್ತಿದೆ. ಜೊತೆಗೆ ಸಹಕಾರ ಕ್ಷೇತ್ರದ ಸಾಧನೆ, ಅವಕಾಶಗಳ ಮತ್ತು ಕಾರ್ಯಚಟುವಟಿಕೆಗಳ ಬಗ್ಗೆಯೂ ತರಬೇತಿ ನೀಡಲಾಗುತ್ತಿದೆ. ಹೀಗಾಗಿ ಈ ತರಬೇತಿಗೆ ಹೆಚ್ಚಿನ ಮಹತ್ವ ಬಂದಿದೆ ಎಂದು ತಿಳಿಸಿದರು.

### ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳು ತೃಪ್ತಿಕರ ಹಾಗೂ ಶಿಸ್ತುಬದ್ಧ – ಶ್ರೀ ಅರಳಿ ಸೂರ್ಯಕಾಂತ, ಜಂಟಿನಿಬಂಧಕರು

ಕಲಬುರಗಿ ವಿಭಾಗೀಯ ಜಂಟಿ ನಿಬಂಧಕರಾದ ಶ್ರೀ ಅರಳಿ ಸೂರ್ಯಕಾಂತರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಮಾತನಾಡುತ್ತಾ ಸೌಹಾರ್ದ ಸಹಕಾರಿಗಳ ಸಂಖ್ಯೆ 3400, 1959ರ ಕಾಯ್ದೆಯಡಿಯಲ್ಲಿ 37000. ಹೀಗಾಗಿ ಸೌಹಾರ್ದ ಸಹಕಾರಿಗಳನ್ನು ಬಹಳ ಹತ್ತಿರದಿಂದ ನೋಡಬಹುದು, ಮಾರ್ಗದರ್ಶನ ಮಾಡಬಹುದು, ಪರಿಣಾಮವಾಗಿ ಅವುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಮತ್ತು ಪ್ರಾರಂಭದಿಂದಲೂ ತಾಂತ್ರಿಕತೆಯನ್ನು ಅಳವಡಿಸಿಕೊಂಡಿರುವುದರಿಂದ ಶಿಸ್ತುಬದ್ಧವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಿದೆ. ವಿಶೇಷವಾಗಿ ಸಂಯುಕ್ತ ಸಹಕಾರಿಯವರು ತರಬೇತಿ ಕಾರ್ಯಕ್ರಮಗಳನ್ನು ಉತ್ತಮವಾಗಿ ಸಂಘಟಿಸುತ್ತಾರೆ. ಭಾಗವಹಿಸಿರುವ ಸಿಬ್ಬಂದಿಯವರು ಈ ತರಬೇತಿ ಕಾರ್ಯಕ್ರಮದ ಪ್ರಯೋಜನ ಪಡೆದು, ಸೌಹಾರ್ದ ಸಹಕಾರಿಗಳನ್ನು ಅಭಿವೃದ್ಧಿಯತ್ತ ನಡೆಸಲು ಶ್ರಮಿಸಬೇಕು ಎಂದು ಕರೆ ನೀಡಿದರು.

ಪ್ರಾರಂಭದಲ್ಲಿ ಶ್ರೀಮತಿ ವಿದ್ಯಾ ಸರಸ್ವತಿಯವರ ಪ್ರಾರ್ಥನೆಯಾದ ನಂತರ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ಅತಿಥಿ ಗಣ್ಯರನ್ನು ಸ್ವಾಗತಿಸಿ, ಸಂಯುಕ್ತ ಸಹಕಾರಿಯ ಚಟುವಟಿಕೆಗಳ ಬಗ್ಗೆ ತಿಳಿಸಿ, ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರದ ಬಗ್ಗೆ ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು.

ಕಾರ್ಯಕ್ರಮದಲ್ಲಿ ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ರಾಜಶೇಖರ ನಾಯಕ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಮಂಜುಳಾ ಪಾಟೀಲ್ ಹಾಗೂ ಶ್ರೀ ವೈ.ಟಿ.ಪಾಟೀಲರವರು ಉಪಸ್ಥಿತರಿದ್ದು, ಕಾರ್ಯಕ್ರಮವನ್ನು ಕುರಿತು ಮಾತನಾಡಿದರು. ಸಹಕಾರಿಗಳ ಉಪನಿಬಂಧಕರಾದ ಶ್ರೀಮತಿ ಡಾ. ಸುನಿತಾ ಸಿದ್ಧರಾಮ ಹಾಗೂ ಕೃಷಿ ವಿಜ್ಞಾನ ಕೇಂದ್ರದ ಕಾರ್ಯಕ್ರಮ ಸಂಯೋಜಕರಾದ ಶ್ರೀಮತಿ ಡಾ. ಮೌನೇಶ್ವರಿಯವರು ಉಪಸ್ಥಿತರಿದ್ದರು.




ತರಬೇತಿ ಶಿಬಿರದಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳು



ಯೋಗ ಶಿಬಿರ

ಕಾರ್ಯಕ್ರಮದ ಅವಧಿಯಲ್ಲಿ ಯೋಗ ಶಿಬಿರ, ತಂಡಗಳ ರಚನೆ, ತಂಡಗಳಿಂದಲೇ ಪ್ರತಿ ದಿನದ ಕಾರ್ಯಕ್ರಮಗಳ ವರದಿ ಮಿಲಿ, ಇನ್ಸ್‌ಸ್ಟಂಟ್ ಮಿಲಿ, ಸುವಿಚಾರ, ಸಹಕಾರ ಗೀತೆ, ಸ್ವಾಗತ, ನಿರೂಪಣೆ, ವಂದನಾರ್ಪಣೆ, ಸಭೆ, ಸಮಾರಂಭಗಳನ್ನು ಏರ್ಪಡಿಸುವ ವಿಧಾನಗಳು, ವಿವಿಧ ವಿಷಯಗಳ ಬಗ್ಗೆ ಪ್ರಾಯೋಗಿಕ, ಮನರಂಜನಾ ಕಾರ್ಯಕ್ರಮಗಳು, ಅಧ್ಯಯನ ಪ್ರವಾಸ – ರಾಯಚೂರು ಜಿಲ್ಲೆಯ ಗೋರೆಬಾಳ ಕೃಷಿ ಪತ್ತಿನ ಸಹಕಾರ ಸಂಘ ಸೇರಿದಂತೆ ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಮಾನ್ವಿ, ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು, ಶ್ರೀ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ, ಶ್ರೀ ರಾಮಲಿಂಗೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ, ಶ್ರೀ ಸಿದ್ಧಗಂಗಾ ಶ್ರೀ ವಿವಿಧೋದ್ದೇಶ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ, ಅಕ್ಷಯ ಸೌಹಾರ್ದ ಸಹಕಾರಿ ನಿ., ರಾಯಚೂರು, ಭಗವಾನ ಮಹಾವೀರ ಸೌಹಾರ್ದ ಸಹಕಾರಿ ನಿ., ರಾಯಚೂರು ಮುಂತಾದ ಸಹಕಾರಿಗಳಿಗೆ ಭೇಟಿ ನೀಡಿ, ಅಧ್ಯಯನ ಏರ್ಪಡಿಸಲಾಗಿತ್ತು.

## ಸಮಾರೋಪ ಸಮಾರಂಭ :

### ನಿರಂತರ ತರಬೇತಿ ಹಾಗೂ ಅಧ್ಯಯನವೇ ಸಹಕಾರ ಕ್ಷೇತ್ರದ ಅಭಿವೃದ್ಧಿಯ ತಳಹದಿ : ಸಮಾರೋಪ ಕಾರ್ಯಕ್ರಮದಲ್ಲಿ ಶ್ರೀ ಶೇಖರಗೌಡ ಮಾಲಿ ಪಾಟೀಲ್

10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರದಲ್ಲಿ ಸಮಾರೋಪ ಭಾಷಣಕಾರರಾಗಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಶೇಖರಗೌಡ ಮಾಲಿಪಾಟೀಲ್‌ರವರು ಮಾತನಾಡಿ, ಸಹಕಾರ ಕ್ಷೇತ್ರಕ್ಕೆ ತನ್ನದೇ ಆದ 111 ವರ್ಷಗಳ ಇತಿಹಾಸವಿದೆ. ಈ ದೇಶದ ಸಹಕಾರ ಚಳುವಳಿ ವಿಶ್ವದಲ್ಲೇ ಬೃಹತ್ ಗಾತ್ರದ್ದು ಹಾಗೂ ಉತ್ತಮ ಗುಣಮಟ್ಟದ್ದು ಎಂದು ತಿಳಿಸಿ, ಅನೇಕ ಏರು ಪೇರುಗಳ ಮಧ್ಯೆಯೂ ಈ ದೇಶದ ಆರ್ಥಿಕ

## ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಪಿ.ಕೆ.ಸಾಲಿಮಠರವರು ಶಿಬಿರಕ್ಕೆ ಭೇಟಿ

### ಸದಸ್ಯರ ಹಾಗೂ ಸಾರ್ವಜನಿಕರ ಸೇವೆ ನಿಮ್ಮ ಮುಖ್ಯ ಗುರಿಯಾಗಿರಲಿ – ಡಾ. ಪಿ.ಕೆ.ಸಾಲಿಮಠ, ಕುಲಪತಿಗಳು

ತರಬೇತಿ ಅವಧಿಯಲ್ಲಿ ದಿನಾಂಕ 08.12.2015ರಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಪಿ.ಕೆ.ಸಾಲಿಮಠರವರು ಶಿಬಿರಕ್ಕೆ ಭೇಟಿ ನೀಡಿ, ಶಿಬಿರಾರ್ಥಿಗಳೊಡನೆ ಬೆರೆತು ಪರಿಚಯ ಮಾಡಿಕೊಂಡು ನಂತರ ಶಿಬಿರಾರ್ಥಿಗಳನ್ನುದ್ದೇಶಿಸಿ ಸುದೀರ್ಘವಾಗಿ ಮಾತನಾಡುತ್ತಾ ಸಹಕಾರ ಕ್ಷೇತ್ರ ಅತ್ಯಂತ ಪವಿತ್ರವಾದ ಕ್ಷೇತ್ರ. ಸಾಮಾನ್ಯ ಜನರ ಬದುಕಿನಲ್ಲಿ ಆರ್ಥಿಕ, ಸಾಮಾಜಿಕ ಪ್ರಗತಿಯನ್ನು ಮಾಡಬಹುದಾದ ಕ್ಷೇತ್ರ. ಆದರೆ ಈ ಕ್ಷೇತ್ರದ ಸೇನಾನಿಗಳು ಉತ್ತಮವಾಗಿ ಕಾರ್ಯನಿರ್ವಹಣೆ ಮಾಡದಿದ್ದರೆ ಕ್ಷೇತ್ರ ವಿಫಲವಾಗುತ್ತದೆ. ಹಾಗಾಗಕೂಡದು. ಆದ್ದರಿಂದ, ಈ ಕ್ಷೇತ್ರದ ಎಲ್ಲಾ ವಿಭಾಗದ ವರ್ಗದವರಿಗಾಗಿ ಸಂಯುಕ್ತ ಸಹಕಾರಿಯವರು ತರಬೇತಿಗಳನ್ನು ಹಮ್ಮಿಕೊಳ್ಳುತ್ತಿರುವುದು ಸ್ವಾಗತಾರ್ಹ ಹಾಗೂ ಶ್ಲಾಘನೀಯ. ತರಬೇತಿ



ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಪಿ.ಕೆ.ಸಾಲಿಮಠರವರು ತರಬೇತಿ ಶಿಬಿರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅವರನ್ನು ಸನ್ಮಾನಿಸಲಾಯಿತು.

ಪಡೆದುಕೊಂಡವರೆಲ್ಲ ಸಮಾಜಮುಖಿಯಾಗಿ ಕಾರ್ಯನಿರ್ವಹಿಸಿ ಎಂದು ಕರೆ ನೀಡಿದರು.

ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾ ಬಂದಿದೆ. ಈ ದೇಶದ ಜನರ ಜೀವನ ಪದ್ಧತಿಯಾಗಿದೆ. ಸೌಹಾರ್ದ ಸಹಕಾರಿ ಕ್ಷೇತ್ರವಾದರೂ ಕಳೆದ 15 ವರ್ಷಗಳಿಂದ ಕರ್ನಾಟಕದಲ್ಲಿ ಬಹಳ ಉತ್ತಮವಾದ ಸಾಧನೆಯನ್ನು ಮಾಡುತ್ತಿದೆ. ಸಹಕಾರ ಕ್ಷೇತ್ರಕ್ಕೆ ಹೊಸ ಚೈತನ್ಯವನ್ನು ನೀಡಿದೆ. ಸೌಹಾರ್ದ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಇದಕ್ಕೆ ಕಾರಣ ತರಬೇತಿ ಹಾಗೂ ಶಿಕ್ಷಣ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯವರು ನಿರಂತರ ತರಬೇತಿ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರ ಅಭಿವೃದ್ಧಿಗೆ ಪೂರಕವಾಗಿ ಅಧ್ಯಯನ ಕಾರ್ಯವನ್ನು ಮಾಡುತ್ತಲಿದ್ದಾರೆ. ಹೀಗಾಗಿ ಅಭಿವೃದ್ಧಿ ಸಾಧ್ಯವಾಗಿದೆ ಎಂದು ತಿಳಿಸಿದರು.

### ಶಿಬಿರಾರ್ಥಿಗಳ ಸಕ್ರಿಯ ಭಾಗವಹಿಸುವಿಕೆಗೆ ಆದ್ಯತೆ – ಶ್ರೀ ಗುರುನಾಥ ಜಾಂತಿಕರ



ಶಿಬಿರಾರ್ಥಿಗಳಿಂದ ಸಂಯುಕ್ತ ಸಹಕಾರಿಗೆ ನೆನಪಿನ ಕಾಣಿಕೆ

ಸಮಾರಂಭದ ಅಧ್ಯಕ್ಷತೆ ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಮಾತನಾಡಿ, ಈ ತರಬೇತಿ ಕಾರ್ಯಕ್ರಮ ಸಂಯುಕ್ತ ಸಹಕಾರಿಯ ಅತ್ಯಂತ ಪ್ರತಿಷ್ಠೆಯ ಕಾರ್ಯಕ್ರಮ. ಅತ್ಯಂತ ವ್ಯವಸ್ಥಿತವಾಗಿ ಉತ್ತಮವಾಗಿ ಮತ್ತು ಗುಣಾತ್ಮಕವಾಗಿ ವ್ಯವಸ್ಥೆಗಳನ್ನು ಮಾಡಲಾಗುತ್ತದೆ. ಉತ್ತಮ ಪರಿಸರವಿರುತ್ತದೆ. ಯೋಗ ತರಬೇತಿ ಇರುತ್ತದೆ. ವ್ಯಕ್ತಿತ್ವ ವಿಕಸನಕ್ಕೆ ಪೂರಕ ವಿಷಯಗಳಿರುತ್ತವೆ. ಪ್ರಾಯೋಗಿಕಗಳಿರುತ್ತವೆ. ಅಧ್ಯಯನ ಪ್ರವಾಸವಿರುತ್ತದೆ. ಶಿಬಿರಾರ್ಥಿಗಳ ಸಕ್ರಿಯ ಭಾಗವಹಿಸುವಿಕೆಗೆ ಹೆಚ್ಚಿನ ಆದ್ಯತೆಯಿರುತ್ತದೆ. ಇದುವರೆಗೆ ಇಂತಹ 13 ಶಿಬಿರಗಳನ್ನು ನಡೆಸಲಾಗಿದೆ. ಇದು 14ನೇ ತಂಡ ಎಂದು ತಿಳಿಸಿದರು.

### ಪ್ರತಿಯೊಬ್ಬ ಸಿಬ್ಬಂದಿಗೂ ತರಬೇತಿ ಅವಶ್ಯಕ – ಶ್ರೀ ತಿಮ್ಮಯ್ಯಶೆಟ್ಟಿ, ಅಧ್ಯಕ್ಷರು, ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.,

ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಮಾತನಾಡಿದ ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ತಿಮ್ಮಯ್ಯಶೆಟ್ಟಿಯವರು ಮಾತನಾಡಿ, ತರಬೇತಿ ಪ್ರತಿಯೊಬ್ಬರಿಗೂ ಅವಶ್ಯಕ. ತರಬೇತಿ ಪಡೆಯದೇ ಯಾವ ಸಿಬ್ಬಂದಿಯವರು ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದಿಲ್ಲ. ಸಂಯುಕ್ತ ಸಹಕಾರಿಯವರು ನಿರಂತರವಾಗಿ ಏರ್ಪಡಿಸುತ್ತಿರುವ ಈ ರೀತಿಯ ತರಬೇತಿಗಳು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕ ಎಂದು ತಿಳಿಸಿ, ಮಾನ್ವಿ ಪಟ್ಟಣ ಸಹಕಾರ ಬ್ಯಾಂಕಿನ ಕಾರ್ಯಚಟುವಟಿಕೆ ಹಾಗೂ ಪ್ರಗತಿಯ ಬಗ್ಗೆ ಮತ್ತು ತರಬೇತಿಗಳ ಬಗ್ಗೆ ವಿವರಿಸಿದರು.

ಸಮಾರೋಪ ಕಾರ್ಯಕ್ರಮವನ್ನು ಶಿಬಿರಾರ್ಥಿಗಳು ಸಂಘಟಿಸಿದ್ದರು. ಕಾರ್ಯಕ್ರಮ ನಿರೂಪಣೆ, ಸ್ವಾಗತ, ಮಾಲಾರ್ಪಣೆ, ಶಿಬಿರಾರ್ಥಿಗಳ ಅನಿಸಿಕೆಗಳಿಂದ ವಂದನಾರ್ಪಣೆಯವರೆಗೂ ಶಿಬಿರಾರ್ಥಿಗಳೇ ನಿರ್ವಹಿಸಿದರು. ಕಲಬುರಗಿ ವಿಭಾಗದ ಕಿರಿಯ ಅಧಿಕಾರಿ, ಕಾರ್ಯಕ್ರಮದ ಸಹಸಂಚಾಲಕರಾದ ಶ್ರೀ ರಾಜಶೇಖರ ಹೂಗಾರರವರು ಶಿಬಿರದ ವರದಿಯನ್ನು ಪ್ರಸ್ತುತ ಪಡಿಸಿದರು. ವೇದಿಕೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀಮತಿ ಮಂಜುಳಾ ಪಾಟೀಲ್, ಶ್ರೀ ಎಲ್.ಎಸ್.ಆನಂದ, ಶ್ರೀ ವೈ.ಟಿ.ಪಾಟೀಲ್, ಕೆ.ವಿ.ಕೆ ಕೇಂದ್ರದ ಕಾರ್ಯಕ್ರಮ ಸಂಚಾಲಕರಾದ ಡಾ. ಮೌನೇಶ್ವರಿ, ಬೀದರ್ ಸಹಕಾರಿಗಳ ಒಕ್ಕೂಟದ ಶ್ರೀ ರಾಜಶೇಖರ ಮುಂತಾದವರು ಉಪಸ್ಥಿತರಿದ್ದರು. ರಾಯಚೂರು ಜಿಲ್ಲೆಯ ಅನೇಕ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಾಹಕರು, ಸಿಬ್ಬಂದಿಯವರು ಸಮಾರೋಪ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳಿಗೆ ಬಹುಮಾನ ಹಾಗೂ ಎಲ್ಲಾ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ನೀಡಲಾಯಿತು.

ರಾಜ್ಯದ 15 ಜಿಲ್ಲೆಗಳ 29 ಸೌಹಾರ್ದ ಸಹಕಾರಿಗಳಿಂದ 47 ಸಿಬ್ಬಂದಿಯವರು ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದರು. ತರಬೇತಿ ಕಾರ್ಯಕ್ರಮ ಅತ್ಯಂತ ಉತ್ತಮವಾಗಿತ್ತು. ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿತ್ತು. ಜೀವನದಲ್ಲಿ ಮರೆಯಲಾಗದ ತರಬೇತಿ ಎಂದು ಶಿಬಿರಾರ್ಥಿಗಳು ಅನಿಸಿಕೆಗಳನ್ನು ವ್ಯಕ್ತಪಡಿಸಿದರು.



ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಿಬಿರಾರ್ಥಿಗಳು



ಪ್ರಮಾಣಪತ್ರ ವಿತರಣೆ

# "10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರ"ದ ಅಧ್ಯಯನ ಪ್ರವಾಸ ಸಂದರ್ಭದಲ್ಲಿ ಶಿಬಿರಾರ್ಥಿಗಳಿಂದ ವಿವಿಧ ಸಹಕಾರಿ ಸಂಸ್ಥೆಗಳಿಗೆ ಭೇಟಿ



ಶ್ರೀ ಗುರು ರಾಮಲಿಂಗೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಮಸ್ಕಿ ಸಹಕಾರಿಗೆ ಭೇಟಿ.



ಶ್ರೀ ಸಿದ್ಧಗಂಗಾ ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮಸ್ಕಿ ಸಹಕಾರಿಗೆ ಭೇಟಿ



ಶ್ರೀ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ಸಹಕಾರಿಗೆ ಭೇಟಿ.



ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಮಾನ್ವಿ. ಬ್ಯಾಂಕಿಗೆ ಭೇಟಿ.

## ದಿನಾಂಕ : 03.12.2015 ಪತ್ರಿಕಾಗೋಷ್ಠಿ



ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ದಿನಾಂಕ 03.12.2015 ರಂದು ಕೃಷಿ ವಿಜ್ಞಾನ ಕೇಂದ್ರದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಅವರೊಂದಿಗೆ ಸಂಯುಕ್ತ ಸಹಕಾರಿಯ ಯಾದಗಿರಿ ಜಿಲ್ಲೆಯ ನಿರ್ದೇಶಕರಾದ ಶ್ರೀ ವೈ.ಟಿ.ಪಾಟೀಲ್ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ಉಪಸ್ಥಿತರಿದ್ದು, ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಸಾಧನೆಗಳು ಸಂಯುಕ್ತ ಸಹಕಾರಿಯು ರಾಯಚೂರಿನಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ವಿವರ ನೀಡಿದರು. ರಾಯಚೂರಿನ ಸುಮಾರು 25ಕ್ಕೂ ಹೆಚ್ಚು ಪತ್ರಿಕಾ ಪ್ರತಿನಿಧಿಗಳು ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದ್ದರು

# ಉಪಸಿಬ್ಬಂದಿಯವರಿಗಾಗಿ ಒಂದು ದಿನದ ತರಬೇತಿ



ಉದ್ಘಾಟನಾ ಕಾರ್ಯಕ್ರಮ



ತರಬೇತಿಯಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳು

## ಉಪಸಿಬ್ಬಂದಿ ಸೌಹಾರ್ದ ಸಹಕಾರಿ ಸಂಸ್ಥೆಯ ಮಹತ್ವದ ವ್ಯಕ್ತಿ - ಶ್ರೀ ಗುರುನಾಥ ಜಾಂತಿಕರ

ಪ್ರಪ್ರಥಮವಾಗಿ ಪ್ರಾಯೋಗಿಕವಾಗಿ ರಾಜ್ಯದ ಸೌಹಾರ್ದ ಸಹಕಾರಿಗಳ ಉಪಸಿಬ್ಬಂದಿಯವರಿಗಾಗಿ (ಅಟೆಂಡರುಗಳಿಗಾಗಿ) ಸಂಯುಕ್ತ ಸಹಕಾರಿಯ ವತಿಯಿಂದ ದಿನಾಂಕ 04.12.2015ರಂದು ರಾಯಚೂರು ಕೃಷಿ ವಿಶ್ವವಿದ್ಯಾಲಯದ ಅಗ್ರಿ ಇಂಜಿನಿಯರಿಂಗ್ ಸಭಾಂಗಣದಲ್ಲಿ ಒಂದು ದಿನದ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಅನೇಕ ದಿನಗಳಿಂದ ಉಪಸಿಬ್ಬಂದಿಯವರಿಗಾಗಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಚಿಂತನೆ ನಡೆಸಲಾಗಿತ್ತು. ಇಂದು ಅದು ಕಾರ್ಯರೂಪಕ್ಕೆ ಬಂದಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಎಲ್ಲಾ ವರ್ಗದ ಜನರಿಗಾಗಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಪ್ರಯತ್ನ ಸಫಲವಾದಂತಾಗಿದೆ. ಉಪಸಿಬ್ಬಂದಿಯೆಂದು ಯಾರೂ ತಾತ್ಸಾರ ಮಾಡದೇ ಅವರುಗಳಿಗೂ ತರಬೇತಿಯನ್ನು ನೀಡುವುದು ಅವಶ್ಯಕ. ಅವರುಗಳು ಸಹಕಾರಿಯ ಅತ್ಯಂತ ಮಹತ್ವದ ವ್ಯಕ್ತಿ. ಏಕೆಂದರೆ ಎಲ್ಲರೂ ಅವರುಗಳನ್ನು ಮಾತನಾಡಿಸುತ್ತಾರೆ, ವಿವರಗಳನ್ನು ಕೇಳುತ್ತಾರೆ, ಕೆಲಸ ಹೇಳುತ್ತಾರೆ, ಕೆಲಸ ಮಾಡಿಸಿಕೊಳ್ಳುತ್ತಾರೆ. ಹೀಗಾಗಿ ಎಲ್ಲರೊಡನೆ ವ್ಯವಹರಿಸುವ ವ್ಯಕ್ತಿಗೆ ಆತನ ನಡತೆ/ ವರ್ತನೆ ಹೇಗಿರಬೇಕು? ಶಿಸ್ತು, ಸಮಯ ಪಾಲನೆ, ದಕ್ಷತೆಗಳಿಗೆ ಹೇಗೆ ಆದ್ಯತೆ ನೀಡಬೇಕು? ಪರಿಸರವನ್ನು ಹೇಗೆ ಸ್ವಚ್ಛವಾಗಿಡಬೇಕು? ಕಡತಗಳನ್ನು ಹೇಗೆ ಶಿಸ್ತುಬದ್ಧವಾಗಿಡಬೇಕು? ಜೊತೆಗೆ ತಮ್ಮ ಸಂಸ್ಥೆಯ ಬಗ್ಗೆ, ಚಟುವಟಿಕೆಗಳ ಬಗ್ಗೆ ಮತ್ತು ತಮ್ಮ ಸಂಸ್ಥೆ ವ್ಯವಹರಿಸುವ ಸಂಸ್ಥೆಗಳ ಬಗ್ಗೆ ಪ್ರಾಥಮಿಕ ಮಾಹಿತಿ ಇರಬೇಕಾದುದು ಅವಶ್ಯಕ. ಹಾಗಾಗಿ ಈ ತರಬೇತಿ ಅತ್ಯಂತ ಮಹತ್ವದ್ದಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಮಂಜುಳಾ ಪಾಟೀಲರವರು ಮಾತನಾಡಿ ತರಬೇತಿಯಿಂದ ವ್ಯಕ್ತಿಯ ವಿಕಸನ ಹಾಗೂ ಸಂಸ್ಥೆಯ ಅಭಿವೃದ್ಧಿ ಸಾಧ್ಯವಾಗುತ್ತದೆ. ಎಲ್ಲಾ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಪ್ರಯೋಜನ ಪಡೆಯುವುದು ಅವಶ್ಯಕ ಎಂದು ತಿಳಿಸಿದರು. ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸ್ವಾಗತ ಹಾಗೂ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ರಾಜ್ಯದ 30 ಸೌಹಾರ್ದ ಸಹಕಾರಿಗಳ ವಿಶೇಷವಾಗಿ ರಾಯಚೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ 58 ಉಪಸಿಬ್ಬಂದಿಯವರು ಭಾಗವಹಿಸಿ, ಪ್ರಯೋಜನ ಪಡೆದರು.

ಕಾರ್ಯಕ್ರಮದಲ್ಲಿ ಶ್ರೀ ಎಮ್.ಎ.ಜಾಲವಾದಿ, ಹಿರಿಯ ಪ್ರಧಾನ ವ್ಯವಸ್ಥಾಪಕರು, ಪ್ರಭುಲಿಂಗೇಶ್ವರ ಸೌಹಾರ್ದ ಸಹಕಾರಿ, ಜಮಖಂಡಿ ಇವರು ಶಿಬಿರಾರ್ಥಿಗಳಿಗೆ "ತಾನು ಯಾರು? ತನ್ನ ಸಂಸ್ಥೆ ಏನು? ತನ್ನ ಸಂಸ್ಥೆಯ ಕಾರ್ಯಚಟುವಟಿಕೆಗಳು ಯಾವುವು? ತನ್ನ ಜವಾಬ್ದಾರಿ ಏನು? ಜವಾಬ್ದಾರಿಗಳ ನಿರ್ವಹಣೆ ಹೇಗೆ?" ಎಂಬ ವಿಷಯಗಳ ಬಗ್ಗೆ ಮತ್ತು ಶ್ರೀ ಬಿ.ಎಸ್. ಚಂದ್ರಶೇಖರರವರು "ವೃತ್ತಿ ಸಂಸ್ಕೃತಿ, ಪರಿಣಾಮಕಾರಿ ಸಂವಹನ ಮತ್ತು ಮೋಟಿವೇಶನ್" ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು. ಕಾರ್ಯಕ್ರಮ ಉತ್ತಮವಾಗಿತ್ತೆಂದು ಶಿಬಿರಾರ್ಥಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.



ಶ್ರೀ ಎಸ್.ಚಂದ್ರಕಾಂತ
ಅಧ್ಯಕ್ಷರು



ಶ್ರೀ ಕೆ.ಈಶ್ವರಚಾರ್
ಉಪಾಧ್ಯಕ್ಷರು

ವಿಶ್ವಕರ್ಮ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸಹಕಾರಿಯ ಆಡಳಿತ ಮಂಡಲಿಯ ನಿರ್ದೇಶಕರ ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆಯಾಗಿದ್ದು, ಆಡಳಿತ ಮಂಡಲಿ ಪದಾಧಿಕಾರಿಗಳಿಗಾಗಿ ಅಧ್ಯಕ್ಷರಾಗಿ ಶ್ರೀ ಎಸ್.ಚಂದ್ರಕಾಂತ, ಉಪಾಧ್ಯಕ್ಷರಾಗಿ ಶ್ರೀ ಕೆ.ಈಶ್ವರಚಾರ್‌ರವರು ಮುಂದಿನ ಐದು ವರ್ಷಗಳಿಗೆ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

# ರಾಯಚೂರಿನ ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಯುವಕರು ಹಾಗೂ ಸಹಕಾರ ಕುರಿತು ಸಂವಾದ ಕಾರ್ಯಕ್ರಮ

**ಆರ್ಥಿಕ ಅಭಿವೃದ್ಧಿಗೆ ಸಹಕಾರ ಕ್ಷೇತ್ರ ಮತ್ತು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಯುವಕರ ಪಾತ್ರ ಮಹತ್ವದ್ದು. ಸಹಕಾರಿ ಅಧ್ಯಯನ ಪೀಠ ಸ್ಥಾಪನೆಗೆ ಚಿಂತನೆ – ಡಾ. ಎಮ್.ಕೆ.ನಾಯಕ, ಡೀನ್, ಪಿ.ಜಿ. ಸ್ಟುಡೆಂಟ್ಸ್, ಕೃಷಿ ವಿಶ್ವವಿದ್ಯಾಲಯ**



ಸಂವಾದ ಕಾರ್ಯಕ್ರಮ ಉದ್ಘಾಟನೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಕೃಷಿ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಯುವಕರು ಹಾಗೂ ಸಹಕಾರ ಕುರಿತಾದ ಸಂವಾದ ಕಾರ್ಯಕ್ರಮವನ್ನು ದಿನಾಂಕ 07.12.2015ರಂದು ಕೃಷಿ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿದ ಕೃಷಿ ವಿಶ್ವವಿದ್ಯಾಲಯದ ಪಿ.ಜಿ. ವಿದ್ಯಾರ್ಥಿಗಳ ಡೀನ್ ಡಾ. ಎಮ್.ಕೆ.ನಾಯಕರವರು ಮಾತನಾಡಿ ಸಹಕಾರ ಕ್ಷೇತ್ರದ ಇತಿಹಾಸ ಹಾಗೂ ಸಾಧನೆಗಳನ್ನು ಗಮನಿಸಿದಾಗ ದೇಶದ ಅರ್ಥವ್ಯವಸ್ಥೆಗೆ ಸಹಕಾರ ಕ್ಷೇತ್ರದ ಕೊಡುಗೆ ಅಪಾರವಾಗಿದೆ.

ವಿವಿಧ ದೇಶಗಳ ಸಹಕಾರ ಚಳುವಳಿಯನ್ನು ಅಧ್ಯಯನ ಮಾಡಿದಾಗ, ನಮ್ಮ ದೇಶದ ಚಳುವಳಿ ಬಲವಾಗಿ ಬೆಳೆದಿದೆ. ಭದ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಯುವಕರು ಈ ದೇಶದ ಈ ಚಳುವಳಿಯ ಅಭಿವೃದ್ಧಿಯ ಆಶಾಕಿರಣ. ಈ ಕ್ಷೇತ್ರವನ್ನು ಬಲಪಡಿಸುವ ನಿಟ್ಟಿನಲ್ಲಿ ಸಹಕಾರ ಕ್ಷೇತ್ರಕ್ಕೆ ಯುವಕರು ಪಾಲ್ಗೊಳ್ಳುವುದು ಅವಶ್ಯಕ ಎಂದು ತಿಳಿಸುತ್ತಾ ಕೃಷಿ ವಿಶ್ವವಿದ್ಯಾಲಯದಲ್ಲಿ ಸಹಕಾರ ಕುರಿತಾದ ಅಧ್ಯಯನ ಪೀಠ ಸ್ಥಾಪನೆಗೆ ಚಿಂತನೆ ಮಾಡಲಾಗುವುದು ಎಂದು ತಿಳಿಸಿದರು.

**ದಿಕ್ಸೂಚಿ ಭಾಷಣ :** ಡಾ. ಎಸ್.ಎ.ಸಿದ್ಧಾಂತಿ, ನಿವೃತ್ತ ನಿರ್ದೇಶಕರು, ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರು ಇವರು ದಿಕ್ಸೂಚಿ ಭಾಷಣವನ್ನು ಮಾಡಿ, ದೇಶದಲ್ಲಿ ಸಹಕಾರ ಚಳುವಳಿ ನಡೆದು ಬಂದ ದಾರಿ, ಸಹಕಾರ ಚಳುವಳಿಯ ಪ್ರಗತಿ, ಸಾಧನೆ, ವಿವಿಧ ದೇಶಗಳ ಸಹಕಾರ ಚಳುವಳಿಯ ಸಾಧನೆಗಳ ಬಗ್ಗೆ ವಿವರ ನೀಡಿದರು.

ಸಂವಾದ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಕೃಷಿ ವಿಶ್ವವಿದ್ಯಾಲಯದ ಡೀನ್ ಆಫ್ ಸ್ಟುಡೆಂಟ್ಸ್ ಆದ ಶ್ರೀ ಅಶೋಕ ಹಳೆಪ್ಯಾಟಿ, ವಿದ್ಯಾರ್ಥಿ ಕ್ಷೇಮ ನಿರ್ವಹಣೆಯ ನಿರ್ದೇಶಕರಾದ ಡಾ. ಏ.ನಾಗನಗೌಡ, ಸಹಕಾರಿಗಳ ಉಪನಿಬಂಧಕರಾದ ಡಾ. ಸುನಿತಾ ಸಿದ್ಧರಾಮ, ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಶಾರದಾ ಗಾರ್ಲೆ, ಕೆ.ಎಂ.ಎಫ್ ಸ್ಥಳೀಯ ಸಹ ವ್ಯವಸ್ಥಾಪಕರಾದ ಶ್ರೀ ರವಿಕುಮಾರ, ಅರ್ಥಶಾಸ್ತ್ರ ಪ್ರಾಧ್ಯಾಪಕರಾದ ಶ್ರೀಮತಿ ಅಮೃತ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಮಂಜುಳಾ ಪಾಟೀಲ್ ಹಾಗೂ ಶ್ರೀ ಸಣ್ಣ ಸೂಗಪ್ಪ ಇವರುಗಳು ಭಾಗವಹಿಸಿದ್ದರು.

ಸಂವಾದ ಕಾರ್ಯಕ್ರಮದಲ್ಲಿ ಕೃಷಿ ವಿಶ್ವವಿದ್ಯಾಲಯದ 150ಕ್ಕೂ ಹೆಚ್ಚು ವಿದ್ಯಾರ್ಥಿಗಳು, ವ್ಯಕ್ತಿತ್ವ ವಿಕಸನ ತರಬೇತಿಯ ಶಿಬಿರಾರ್ಥಿಗಳು, ರಾಯಚೂರು ಜಿಲ್ಲೆಯ ಸ್ಥಳೀಯ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮ ಪ್ರಯೋಜನಕಾರಿಯಾಗಿತ್ತೆಂದು ಕೃಷಿ ವಿಶ್ವವಿದ್ಯಾಲಯದ ಅಧಿಕಾರಿಗಳು ಅಭಿಪ್ರಾಯ ವ್ಯಕ್ತಪಡಿಸಿದರು. ಸಂವಾದಕಾರರಾಗಿ ಸಾಗರದ ಚಾರ್ಟೆಡ್ ಅಕೌಂಟೆಂಟ್ ಶ್ರೀ ಬಿ.ವಿ.ರವೀಂದ್ರನಾಥರವರು ಕಾರ್ಯನಿರ್ವಹಿಸಿದರು.

## ಇ–ಸ್ಟ್ಯಾಂಪಿಂಗ್ ಮಾಹಿತಿ

ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ ಕರ್ನಾಟಕ ಸ್ಟಾಂಪು (ಇ–ಸ್ಟಾಂಪ್ ಮೂಲಕ ಸುಂಕ ಪಾವತಿ) ನಿಯಮಗಳು, 2009 23 (1) ರಲ್ಲಿ ತಿಳಿಸಿರುವಂತೆ “ಇ–ಸ್ಟಾಂಪ್ ಪ್ರಮಾಣಪತ್ರ ಕೊಡುವ ಅಧಿಕಾರಿಯು ಇ–ಸ್ಟಾಂಪ್ ಪ್ರಮಾಣಪತ್ರದ ಮೇಲೆ ಹೆಸರು ಮತ್ತು ಪದನಾಮ, ಸಹಿ ಮತ್ತು ಸೀಲು, ಅನುಮೋದಿತ ಮಧ್ಯವರ್ತಿಯ ಶಾಖೆಯ ವಿಳಾಸಗಳನ್ನು ಕಪ್ಪು ಮಸಿಯಲ್ಲಿ ಮಾಡತಕ್ಕದ್ದು”.

## ಸಹಕಾರ ಸುದ್ಧಿ ಮಾಸಪತ್ರಿಕೆಯ ಬಿಡುಗಡೆ

ಸಹಕಾರ ಕ್ಷೇತ್ರದ ವಿವಿಧ ಚಟುವಟಿಕೆಗಳ ಹಾಗೂ ವಿಚಾರಗಳನ್ನು ಪ್ರಸರಣ ಮಾಡುವ ಉದ್ದೇಶದಿಂದ “ಸಹಕಾರ ಸುದ್ಧಿ” ಎಂಬ ಮಾಸಪತ್ರಿಕೆಯನ್ನು ಮೈಸೂರಿನಲ್ಲಿ ದಿನಾಂಕ 17.01.2016ರಂದ ಮಾನ್ಯ ಸಹಕಾರ ಸಚಿವರಾದ ಶ್ರೀ ಹೆಚ್.ಎಸ್. ಮಹದೇವ ಪ್ರಸಾದರವರು ಅನೇಕ ಸಹಕಾರ ಗಣ್ಯರ ಉಪಸ್ಥಿತಿಯಲ್ಲಿ ಬಿಡುಗಡೆ ಮಾಡಲಿದ್ದಾರೆಂದು ಮಾಸ ಪತ್ರಿಕೆಯ ಸಂಪಾದಕರಾದ ಶ್ರೀ ಎನ್. ಕುಮಾರಸ್ವಾಮಿ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

## ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಿಗಾಗಿ "ಆಡಳಿತ ಪರಿಣಿತಿ ತರಬೇತಿ"
## ತರಬೇತಿ ನಿರಂತರವಾಗಿದ್ದರೆ ಪರಿಣಿತಿ ಹೆಚ್ಚಿಸಿಕೊಳ್ಳಲು ಸಾಧ್ಯ – ಶ್ರೀ ಗುರುನಾಥ ಜಾಂತಿಕರ



ತರಬೇತಿ ಕಾರ್ಯಕ್ರಮದ ಉದ್ಘಾಟನೆ



ತರಬೇತಿ ಕಾರ್ಯಕ್ರಮದ ಸಂದರ್ಭದಲ್ಲಿ ಆರ್ಟ್ ಆಫ್ ಲಿವಿಂಗ್‌ನ ಶ್ರೀ ರವಿಶಂಕರ್ ಗುರೂಜಿಯವರ ಭೇಟಿ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರುಗಳಿಗಾಗಿ "ಆಡಳಿತ ಪರಿಣಿತಿ ತರಬೇತಿ" ಕಾರ್ಯಾಗಾರವನ್ನು ದಿನಾಂಕ : 10 ಮತ್ತು 11 ನವೆಂಬರ್ 2015 ರಂದು ಗುಹಾಂತರ ರೆಸಾರ್ಟ್ ಕಗ್ಗಲಿಪುರ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಅವರು ಮಾತನಾಡಿ ಕಲಿಕೆ ನಿರಂತರ ಪ್ರಕ್ರಿಯೆಯಾಗಿದ್ದು, ಪ್ರತಿಯೊಬ್ಬರು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಇಂಥ ತರಬೇತಿಯು ಅನುಕೂಲವಾಗಲಿದೆ ಎಂದು ತಿಳಿಸಿದರು. ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಬಿ.ಎ.ಮಹದೇವಪ್ಪ ಅವರು ತರಬೇತಿಯನ್ನು ನಡೆಸಿಕೊಟ್ಟರು. ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಯಾವ ರೀತಿಯಲ್ಲಿ ಸಹಕಾರ ಕ್ಷೇತ್ರದಲ್ಲಿ ಇತರ ಮಂಡಳಿಗಳಿಗೆ ಮಾದರಿಯಾಗಿದೆ ಎಂದು ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್‌ರವರು ತಿಳಿಸಿದರು.

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳು ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಚಲಿತ ವಿಷಯಗಳ ಕುರಿತು ಹಾಗೂ ಜಿಲ್ಲಾವಾರು ಸೌಹಾರ್ದ ಸಹಕಾರಿಗಳ ಸ್ಥಿತಿಗತಿ ಬಗ್ಗೆ ಪರಸ್ಪರ ಚರ್ಚಿಸಿದರು.




## ತುಮಕೂರಿನ ಸಹಕಾರಿ ಶ್ರೀ ಎನ್.ಎಸ್.ಜಯಕುಮಾರ್‌ರವರಿಗೆ "ಇಂದಿರಾಗಾಂಧಿ ಸದ್ಭಾವನಾ ಚಿನ್ನದ ಪದಕ ಪ್ರಶಸ್ತಿ"

ತುಮಕೂರು ಜಿಲ್ಲೆಯ ತುಮಕೂರು ಮರ್ಚೆಂಟ್ಸ್ ಮಲ್ಟಿ ಸ್ಟೇಟ್ ಕ್ರೆಡಿಟ್ ಕೋ–ಆಪರೇಟಿವ್ ಲಿ., ಇದರ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಎನ್.ಎಸ್.ಜಯಕುಮಾರ್ ರವರು ಭಾರತೀಯ ಏಕತಾ ಪರಿಷತ್ ಮತ್ತು ಅಂತರಾಷ್ಟ್ರೀಯ ವ್ಯವಹಾರ (Business Council) ಪರಿಷತ್ ಮತ್ತು ಅಂತರಾಷ್ಟ್ರೀಯ ಶಿಕ್ಷಣ ಮತ್ತು ವ್ಯವಸ್ಥಾಪನ ಸಂಸ್ಥೆಯವರು ನೀಡುತ್ತಿರುವ "ಇಂದಿರಾಗಾಂಧಿ ಸದ್ಭಾವನಾ ಚಿನ್ನದ ಪದಕ" ಪ್ರಶಸ್ತಿಗೆ ಭಾಜನರಾಗಿದ್ದಾರೆ.

## ಡಿಸೆಂಬರ್–2015 ಮಾಹೆಯಲ್ಲಿ ರಾಜ್ಯದಾದ್ಯಂತ ನಡೆದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಗಳು

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಸಹ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ 24 ಸ್ಥಳಗಳಲ್ಲಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಗಳು ಜರುಗಿಸಲಾಗಿದೆ. ಈ ಬಾರಿಯ ಸಭೆಗಳಲ್ಲಿ ಮುಖ್ಯಕಾರ್ಯನಿರ್ವಾಹಕರು ಹೆಚ್ಚು ಕ್ರಿಯಾಶೀಲರಾಗಿ ಭಾಗವಹಿಸಿರುವುದು ವಿಶೇಷ. ಈ ಸಭೆಯ ಜೊತೆಗೆ ಮುಖ್ಯಕಾರ್ಯನಿರ್ವಾಹಕರಿಗೆ ಅವರುಗಳು ನಿರ್ವಹಿಸಬೇಕಾದ ಶಾಸನಬದ್ಧ ಕಾರ್ಯಗಳ ಬಗ್ಗೆ ಮಾಹಿತಿಯನ್ನು ಸಂಯುಕ್ತ ಸಹಕಾರಿಯ ಅಧಿಕಾರಿಗಳ ಮೂಲಕ ಒದಗಿಸಲಾಯಿತು. ಸಭೆಗಳನ್ನು ಜರುಗಿಸುವ ಸಂದರ್ಭದಲ್ಲಿ ಅನೇಕ ಸಹಕಾರಿ ಸಂಸ್ಥೆಗಳ, ಸಹಕಾರಿ ಪ್ರಮುಖರ ಹಾಗೂ ಸಹಕಾರಿ ಇಲಾಖೆಯ ಅಧಿಕಾರಿಗಳ ಸಹಯೋಗವು ಪ್ರೋತ್ಸಾಹದಾಯಕವಾಗಿತ್ತು. ಒಟ್ಟಾರೆ ನಡೆಸಿದ 24 ಸಭೆಗಳಲ್ಲಿ 1654 ಸೌಹಾರ್ದ ಸಹಕಾರಿಗಳಿಂದ 1878 ಮುಖ್ಯಕಾರ್ಯನಿರ್ವಾಹಕರು/ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಹೆಚ್ಚಿನ ಮಾಹಿತಿ ಮುಂದಿನ ಪುಟಕ್ಕೆ...

| ವಿಭಾಗ | ಸಭೆಯ ಸಂಖ್ಯೆ | ದಿನಾಂಕ | ಭಾಗವಹಿಸಿದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು | ಸ್ಥಳ | ಭಾಗವಹಿಸಿದ್ದ | |
|---|---|---|---|---|---|---|
| | | | | | ಸೌಹಾರ್ದ ಸಹಕಾರಿಗಳ ಸಂಖ್ಯೆ | ಪ್ರತಿನಿಧಿಗಳ ಸಂಖ್ಯೆ |
| ಬೆಳಗಾವಿ ವಿಭಾಗ | 1 | 16.12.2015 | ಬಸವನ ಬಾಗೇವಾಡಿ, ಮುದ್ದೇಬಿಹಾಳ, ಸಿಂದಗಿ, ಇಂಡಿ | ವಿಜಯಪುರ | 69 | 73 |
| | 2 | 17.12.2015 | ವಿಜಯಪುರ & ಹುನಗುಂದ ತಾಲ್ಲೂಕು | ವಿಜಯಪುರ | 87 | 102 |
| | 3 | 18.12.2015 | ಬಾಗಲಕೋಟೆ – ಹುನಗುಂದ ತಾಲ್ಲೂಕು ಹೊರತುಪಡಿಸಿ | ಮುಧೋಳ | 110 | 122 |
| | 4 | 21.12.2015 | ಅಥಣಿ, ಚಿಕ್ಕೋಡಿ, ರಾಯಭಾಗ ತಾಲ್ಲೂಕು | ಚಿಕ್ಕೋಡಿ | 97 | 124 |
| | 5 | 22.12.2015 | ಬೈಲಹೊಂಗಲ, ರಾಮದುರ್ಗ, ಸವದತ್ತಿ, ಗೋಕಾಕ ತಾಲೂಕು | ಗೋಕಾಕ | 129 | 140 |
| | 6 | 23.12.2015 | ಹುಕ್ಕೇರಿ | ಬೆಳಗಾವಿ | 135 | 142 |
| | 7 | 28.12.2015 | ಹಾವೇರಿ ಜಿಲ್ಲೆ | ಹಾವೇರಿ | 56 | 63 |
| | 8 | 29.12.2015 | ಗದಗ, ಧಾರವಾಡ ಜಿಲ್ಲೆ | ಹುಬ್ಬಳ್ಳಿ | 52 | 62 |
| | 9 | 29.12.2015 | ಬೆಳಗಾವಿ & ಖಾನಾಪುರ ತಾಲ್ಲೂಕು | ಬೆಳಗಾವಿ | 91 | 110 |
| | 10 | 30.12.2015 | ಉತ್ತರಕನ್ನಡ ಜಿಲ್ಲೆ | ಶಿರಸಿ | 58 | 65 |
| | | | | **ಒಟ್ಟು** | **884** | **1003** |
| ಕಲಬುರಗಿ ವಿಭಾಗ | 11 | 12.12.2015 | ರಾಯಚೂರು | ರಾಯಚೂರು | 66 | 69 |
| | 12 | 17.12.2015 | ಕಲಬುರಗಿ ಮತ್ತು ಯಾದಗಿರಿ | ಕಲಬುರಗಿ | 70 | 76 |
| | 13 | 18.12.2015 | ಬೀದರ್ | ಬೀದರ್ | 39 | 46 |
| | 14 | 22.12.2015 | ಬಳ್ಳಾರಿ | ಹೊಸಪೇಟೆ | 58 | 66 |
| | 15 | 23.12.2015 | ಕೊಪ್ಪಳ | ಗಂಗಾವತಿ | 71 | 93 |
| | | | | **ಒಟ್ಟು** | **304** | **350** |
| ಬೆಂಗಳೂರು ವಿಭಾಗ | 16 | 18.12.2015 | ತುಮಕೂರು ಜಿಲ್ಲೆ | ತುಮಕೂರು | 90 | 102 |
| | 17 | 19.12.2015 | ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆ | ದಾವಣಗೆರೆ | 46 | 50 |
| | 18 | 22.12.2015 | ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ರಾಮನಗರ ಜಿಲ್ಲೆ | ಬೆಂಗಳೂರು | 19 | 26 |
| | 19 | 29.12.2015 | ಬೆಂಗಳೂರು ನಗರ ಜಿಲ್ಲೆ | ಬೆಂಗಳೂರು | 61 | 87 |
| | 20 | 30.12.2015 | ಶಿವಮೊಗ್ಗ ಜಿಲ್ಲೆ | ಶಿವಮೊಗ್ಗ | 58 | 63 |
| | | | | **ಒಟ್ಟು** | **274** | **328** |
| ಮೈಸೂರು ವಿಭಾಗ | 21 | 14.12.2015 | ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು | ಮೈಸೂರು | 41 | 44 |
| | 22 | 17.12.2015 | ಹಾಸನ & ಚಿಕ್ಕಮಗಳೂರು | ಚಿಕ್ಕಮಗಳೂರು | 30 | 31 |
| | 23 | 18.12.2015 | ದಕ್ಷಿಣ ಕನ್ನಡ ಜಿಲ್ಲೆ | ಮಂಗಳೂರು | 51 | 51 |
| | 24 | 19.12.2015 | ಉಡುಪಿ ಜಿಲ್ಲೆ | ಉಡುಪಿ | 70 | 71 |
| | | | | **ಒಟ್ಟು** | **192** | **197** |

# ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಯ ಛಾಯಾಚಿತ್ರಗಳು

## ಬೆಳಗಾವಿ ವಿಭಾಗ



ಬಸವನ ಬಾಗೇವಾಡಿ, ಮುದ್ದೇಬಿಹಾಳ, ಸಿಂದಗಿ, ಇಂಡಿ



ವಿಜಯಪುರ & ಹುನಗುಂದ ತಾಲ್ಲೂಕು



ಬಾಗಲಕೋಟೆ – ಹುನಗುಂದ ತಾಲ್ಲೂಕು ಹೊರತುಪಡಿಸಿ



ಅಥಣಿ, ಚಿಕ್ಕೋಡಿ, ರಾಯಭಾಗ ತಾಲ್ಲೂಕು



ಬೈಲಹೊಂಗಲ, ರಾಮದುರ್ಗಾ, ಸವದತ್ತಿ, ಗೋಕಾಕ ತಾಲೂಕು



ಹುಕ್ಕೇರಿ




ಹಾವೇರಿ ಜಿಲ್ಲೆ



ಗದಗ, ಧಾರವಾಡ ಜಿಲ್ಲೆಗಳು



ಬೆಳಗಾವಿ ಮತ್ತು ಖಾನಾಪುರ ತಾಲ್ಲೂಕು



ಉತ್ತರ ಕನ್ನಡ ಜಿಲ್ಲೆ

## ಕಲಬುರಗಿ ವಿಭಾಗ



ರಾಯಚೂರು ಜಿಲ್ಲೆ



ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳು



ಬೀದರ್ ಜಿಲ್ಲೆ



ಬಳ್ಳಾರಿ ಜಿಲ್ಲೆ



ಕೊಪ್ಪಳ ಜಿಲ್ಲೆ

## ಬೆಂಗಳೂರು ವಿಭಾಗ



ತುಮಕೂರು ಜಿಲ್ಲೆ



ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳು



ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ರಾಮನಗರ ಜಿಲ್ಲೆಗಳು



ಬೆಂಗಳೂರು ನಗರ ಜಿಲ್ಲೆ



ಶಿವಮೊಗ್ಗ ಜಿಲ್ಲೆ

## ಮೈಸೂರು ವಿಭಾಗ



ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳು



ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಗಳು



ದಕ್ಷಿಣ ಕನ್ನಡ ಜಿಲ್ಲೆ



ಉಡುಪಿ ಜಿಲ್ಲೆ

# ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ವಿಭಾಗೀಯ ಕಛೇರಿಗಳಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ



**ಕೇಂದ್ರ ಕಛೇರಿ ಹಾಗೂ ಬೆಂಗಳೂರು ವಿಭಾಗ :** ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಬೆಂಗಳೂರು ವಿಭಾಗದ ಸಿಬ್ಬಂದಿಗಳಿಗಾಗಿ ಕೇಂದ್ರ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ವಿವಿಧ ರೀತಿಯ ಕ್ರೀಡೆಗಳು ಹಾಗೂ ಸಾಂಪ್ರದಾಯಿಕ ಉಡುಗೆ ತೊಡುಗೆಗಳ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ವಿಜೇತರಿಗೆ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಬಹುಮಾನ ವಿತರಣೆ ಮಾಡಿದರು.





**ಬೆಳಗಾವಿ ವಿಭಾಗ :** ಬೆಳಗಾವಿ ವಿಭಾಗೀಯ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯಂದು ಸಹಕಾರಿ ಧ್ವಜರೋಹಣವನ್ನು ಮ.ನಿಂ.ಪ್ರಣವ ಸ್ವರೂಪಿ ಶ್ರೀ ಗುರುಸಿದ್ಧ ಮಹಾಸ್ವಾಮಿಗಳು, ಕಾರಂಜಿಮಠ ಬೆಳಗಾವಿ ಇವರ ಅಮೃತ ಹಸ್ತದಿಂದ ನೆರವೇರಿಸಲಾಯಿತು. ದಿನಾಚರಣೆಯ ನಿಮಿತ್ತ ಕ್ರೀಡಾ ಕಾರ್ಯಕ್ರಮಗಳು ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗೀಯ ಕಛೇರಿ ಸಿಬ್ಬಂದಿಗಳಿಗಾಗಿ ಹಮ್ಮಿಕೊಳ್ಳಲಾಗಿತ್ತು. ದಿನಾಚರಣೆಯಲ್ಲಿ ಸಹಕಾರಿಗಳ ಪ್ರತಿನಿಧಿಗಳು ಹಾಗೂ ಲೆಕ್ಕಪರಿಶೋಧಕರಾದ ಶ್ರೀ ಶಾಂತಿನಾಥ ನಾಯ್ಕರವರು, ಸಾರ್ವಜನಿಕರು ಭಾಗವಹಿಸಿದ್ದರು.



**ಕಲಬುರಗಿ ವಿಭಾಗ :** ಕಲಬುರಗಿಯ ಮುನ್ನುರು ಸಮಾಜ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುಭಾಷರವರಿಂದ ಧ್ವಜಾರೋಹಣ.



**ಮೈಸೂರು ವಿಭಾಗ :** ಸಹಕಾರಿ ಧ್ವಜಾ ರೋಹಣವನ್ನು ಶ್ರೀ ಬೈರಪ್ಪ, ಮಹಾಪೌರರು, ಮಹಾನಗರ ಪಾಲಿಕೆ, ಮೈಸೂರು ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ರಾಜಶೇಖರ್ ಕೋಟಿ, ಸಂಪಾದಕರು, ಆಂದೋಲನ ದಿನ ಪತ್ರಿಕೆ, ಮೈಸೂರು ಹಾಗೂ ಶ್ರೀ ಬಿ.ವಿ. ಮಂಜುನಾಥ, ಮಾನ್ಯ ಸದಸ್ಯರು, ಮಹಾನಗರ ಪಾಲಿಕೆ, ಮೈಸೂರು ಇವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಹೆಚ್.ವಿ. ರಾಜೀವ್, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ವಹಿಸಿದ್ದರು.

ಈ ಸಂದರ್ಭದಲ್ಲಿ ಶ್ರೀ ಹೆಚ್.ಆರ್. ರಾಜೇಂದ್ರ ಮತ್ತು ಶ್ರೀಮತಿ ಎಂ.ಕೆ. ಶ್ವೇತಾ, ಸಂಸ್ಥಾಪಕರು, ಅಕ್ಷಯ ಆಹಾರ ಫೌಂಡೇಶನ್, ಮೈಸೂರು ಇವರಿಗೆ ಸನ್ಮಾನಿಸಲಾಯಿತು.

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತದ ಸಿಬ್ಬಂದಿಗಳಿಗಾಗಿ ತರಬೇತಿ ಕಾರ್ಯಾಗಾರ

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಇದರ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಾಗಾರವು ಮಂಗಳೂರು ಪ್ರೊಡಕ್ಟಿವಿಟಿ ಕೌನ್ಸಿಲ್‌ನ ಸಹಯೋಗದಲ್ಲಿ ದಿನಾಂಕ 12 ಡಿಸೆಂಬರ್ 2015ರಂದು ಸಹಕಾರಿಯ ನೂತನ ತರಬೇತು ಕೊಠಡಿಯಲ್ಲಿ ನಡೆಯಿತು.




ಕಾರ್ಯಕ್ರಮದ ಉದ್ಘಾಟನೆಯನ್ನು ಪುತ್ತೂರಿನ ಮಾಸ್ಟರ್ ಪ್ಲಾನರಿಯ ಮಾಲೀಕರಾದ ಶ್ರೀ ಎಸ್.ಕೆ. ಆನಂದ್‌ರವರು ನೆರವೇರಿಸಿದರು. ವೇದಿಕೆಯಲ್ಲಿ ಮಂಗಳೂರು ಪ್ರೊಡಕ್ಟಿವಿಟಿ ಕೌನ್ಸಿಲ್‌ನ ಅಧ್ಯಕ್ಷರಾದ ಶ್ರೀ ರಾಮ ರಾವ್ ಹಾಗೂ ಶ್ರೀ ರಮೇಶ್ ಪ್ರಭು ಹಾಗೂ ಶ್ರೀ ವಸಂತ್ ಎ. ಉಪಸ್ಥಿತರಿದ್ದರು. ತರಬೇತುದಾರರು ಹಾಗೂ ಕರ್ನಾಟಕ ಬ್ಯಾಂಕಿನ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಅಂ ಮುರಳೀಧರ ಕೆ ರಾವ್ "Credit assessment, Credit recovery, Monetory policies" ವಿಷಯದ ಬಗ್ಗೆ ತರಬೇತಿಯನ್ನು ನೀಡಿದರು. ನಂತರದ ತರಬೇತುದಾರರು ಹಾಗೂ ಕರ್ನಾಟಕ ಬ್ಯಾಂಕ್‌ನ ಹಿರಿಯ ವ್ಯವಸ್ಥಾಪಕರಾದ ಡಾ. ಶ್ರೀಧರ ಜೋಯಿಷ್ ಕೆ.ಎಸ್ "Customer Relationship Management" ವಿಷಯದ ಬಗ್ಗೆ ತರಬೇತಿ ನೀಡಿದರು. ಕಾರ್ಯಕ್ರಮದ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಪುತ್ತೂರಿನ ವಕೀಲರಾದ ಶ್ರೀ ಉದಯರವಿ ಆಗಮಿಸಿದ್ದರು.

## "College of Banking and Financial Studies (under central bank of Oman), Mascat ಇದರ ನಿರ್ದೇಶಕರಾದ ಡಾ. ರಾಜೇಶ್ ನಾಯಕ್ ರವರಿಂದ ತರಬೇತಿ ಕಾರ್ಯಕ್ರಮ"




ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತದ ಸಿಬ್ಬಂದಿಗಳಿಗೆ ಹಾಗೂ ಪುತ್ತೂರು ಮತ್ತು ಸುಳ್ಯ ತಾಲ್ಲೂಕಿನ ಸಹಕಾರಿ ಸಿಬ್ಬಂದಿಗಳಿಗೆ ತರಬೇತು ಕಾರ್ಯಾಗಾರವು ದಿನಾಂಕ 19 ಡಿಸೆಂಬರ್ 2015ರಂದು ಮಧ್ಯಾಹ್ನ 1.45 ರಿಂದ 5.30ರವರೆಗೆ ರೋಟರಿ ಕ್ಯಾಂಪ್ಕೋ ಬ್ಲಡ್ ಬ್ಯಾಂಕ್‌ನ ಸಭಾಭವನದಲ್ಲಿ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಪುತ್ತೂರಿನ ಪ್ರಸಿದ್ಧ ಚಿನ್ನಾಭರಣ ಮಳಿಗೆ ಜಿ.ಎಲ್ ಆಚಾರ್ಯ ಇದರ ಮಾಲೀಕರಾದ ಶ್ರೀ ಬಲರಾಮ ಆಚಾರ್ಯರು ನೆರವೇರಿಸಿದರು.

ವೇದಿಕೆಯಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರ ಹಾಗೂ ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ್ ಎ. ಉಪಸ್ಥಿತರಿದ್ದರು. FCA ಎಸ್.ಎಸ್. ನಾಯಕ್ "Business Development & Customer Satisfaction" ಹಾಗೂ College of Banking and Financial Studies (under central bank of Oman), Mascat ಇದರ ನಿರ್ದೇಶಕರಾದ ಅಂತರರಾಷ್ಟ್ರೀಯ ಮಟ್ಟದ ತರಬೇತುದಾರರಾದ ಡಾ. ರಾಜೇಶ್ ನಾಯಕ್ "Communication & Customer Service'' ವಿಷಯದ ಬಗ್ಗೆ ತರಬೇತಿಯನ್ನು ನೀಡಿದರು. ಶ್ರೀಮತಿ ಜೀವಿತಾ ಪ್ರಾರ್ಥಿಸಿದರು. ಸಹಕಾರಿಯ ಸಿಬ್ಬಂದಿಗಳಾದ ಶ್ರೀ ಶಿವಪ್ರಸಾದ್ ತಲೆಪ್ಪಾಡಿ ಸ್ವಾಗತಿಸಿ, ಕಾರ್ಯಕ್ರಮವನ್ನು ನಿರೂಪಿಸಿದರು ಹಾಗೂ ಶ್ರೀ ಪ್ರಕಾಶ್ಚಂದ್ರ ವಂದನಾರ್ಪಣೆಗೈದರು.

## ದಿ ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಂತೆ ಶಿಗ್ಲಿ ಶಾಖೆಯಲ್ಲಿ ಇ-ಸ್ಟ್ಯಾಂಪಿಂಗ್ ಸೇವೆ ಪ್ರಾರಂಭ

ದಿ ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಧಾರವಾಡ ಇದರ ನೂತನ ಶಾಖೆ ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಸಂತೆ ಶಿಗ್ಲಿಯಲ್ಲಿ ಇ-ಸ್ಟ್ಯಾಂಪಿಂಗ್ ಸೇವೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಆರ್.ಎನ್.ದೇಶಪಾಂಡೆ ಇವರು ಉದ್ಘಾಟಿಸಿ, ಶಿಗ್ಲಿ ಗ್ರಾಮದ ಮತ್ತು ಸುತ್ತಮುತ್ತಲಿನ ಅನೇಕ ಗ್ರಾಮಗಳಿಗೆ ಈ ಸೇವೆಯ ಉಪಯೋಗವಾಗಲಿ ಎಂದು ಹಾರೈಸಿದರು. ಈ ಸಂದರ್ಭದಲ್ಲಿ ಶ್ರೀಯುತರನ್ನು ಸಹಕಾರಿಯ ಪರವಾಗಿ ಸನ್ಮಾನಿಸಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀ ಚಂದ್ರಕಾಂತ ಪಡಚಣ್ಣನವರ, ಹಿರಿಯ ಸದಸ್ಯರಾದ ಶ್ರೀ ಎಸ್.ಎಸ್. ಹಕಾರೆ, ಸಹಕಾರಿಯ ಅಧಿಕಾರಿಗಳಾದ ಶ್ರೀ ನಾರಾಯಣ ಕದಂ ಮತ್ತು ಶಿಗ್ಲಿ ಶಾಖಾ ವ್ಯವಸ್ಥಾಪಕರಾದ ಶ್ರೀ ಸುಭಾಷ ಜಾಧವ ಇವರು ಉಪಸ್ಥಿತರಿದ್ದರು.



# ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ನಿ., ಮತ್ತು ಶ್ರೀ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಇವರ ಜಂಟಿ ಆಶ್ರಯದಲ್ಲಿ ಜಿಲ್ಲಾ ಸೌಹಾರ್ದ ಸಹಕಾರಿಗಳಿಗೆ ತರಬೇತಿ ಕಾರ್ಯಾಗಾರ



ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ನಿ., ಮತ್ತು ಶ್ರೀ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಇವರ ಜಂಟಿ ಆಶ್ರಯದಲ್ಲಿ ಜಿಲ್ಲಾ ಸೌಹಾರ್ದ ಸಹಕಾರಿಗಳಿಗೆ ತರಬೇತಿ ಕಾರ್ಯಾಗಾರವನ್ನು ದಿನಾಂಕ 12 ಡಿಸೆಂಬರ್ 2015ರಂದು ಹಮ್ಮಿಕೊಳ್ಳಲಾಗಿತ್ತು. ಕಾರ್ಯಾಗಾರವನ್ನು ಉದ್ಘಾಟಿಸಿ, ಮಾತನಾಡಿದ ಶ್ರೀ ಬಿ. ಹರೀಶ್ ಆಚಾರ್, ಅಧ್ಯಕ್ಷರು, ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್, ಮಂಗಳೂರು ಇವರು ರಾಜ್ಯದಲ್ಲಿ ಎಲ್ಲಾ ಸಹಕಾರಿಗಳು ಒಂದೇ ಎಂಬ ಭಾವನೆಯಿರಬೇಕು, ಒಂದು ಸಹಕಾರಿಯಲ್ಲಿ ಪಡೆದಿರುವ ಸಾಲವನ್ನು ಇನ್ನೊಂದು ಮೂಲೆಯಲ್ಲಿನ ಸಹಕಾರಿಯಲ್ಲಿ ಕಟ್ಟುವಷ್ಟು ಸಹಕಾರದಲ್ಲಿ ತಂತ್ರಜ್ಞಾನ ಬೆಳೆಯಬೇಕು ಎಂದು ತಿಳಿಸಿದರು.

ನಂತರ ಮಾತನಾಡಿದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಮಂಜುನಾಥ ಎಸ್.ಕೆ. ಇವರು ಸಹಕಾರಿಯು ಮುಂದೊಂದು ದಿನ ವಿಶಿಷ್ಠ ಸ್ಥಾನಮಾನ ಪಡೆದು, ಬ್ಯಾಂಕಿಂಗ್‌ನಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ನಷ್ಟು ಬೆಳೆಯಬೇಕೆಂದು ಆಶಯವನ್ನು ವ್ಯಕ್ತಪಡಿಸಿದರು. ಶ್ರೀ ಬಿ.ಭಾಸ್ಕರ ಕಾಮತ್, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಮಾತನಾಡಿ ಕರ್ನಾಟಕ ರಾಜ್ಯದಲ್ಲಿರುವ ಸೌಹಾರ್ದ ಸಹಕಾರಿಗಳಿಗೆ ಜಿಲ್ಲಾ ಮಟ್ಟದಲ್ಲಿ ತರಬೇತಿಯನ್ನು ನೀಡಲು ಕಷ್ಟವಾಗುವ ಕಾರಣ ಜಿಲ್ಲಾ ಸೌಹಾರ್ದ ಒಕ್ಕೂಟದ ಮುಖಾಂತರ ವಿಶೇಷ ತರಬೇತಿ ನೀಡುವುದು ಈಗಿನ ದೃಷ್ಠಿಯಲ್ಲಿ ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ತರಬೇತಿಯ ಅವಧಿಯಲ್ಲಿ "ಸಹಕಾರಿ ಸಂಘಗಳಲ್ಲಿ ಸಾಲ ಪತ್ರಗಳ ನಿರ್ವಹಣೆ" ಬಗ್ಗೆ ಶ್ರೀ ಜಿ.ಎಸ್.ಸೋಮಯಾಜಿ, ಪ್ರಧಾನ ವ್ಯವಸ್ಥಾಪಕರು, ಶ್ರೀ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮತ್ತು "ಸೌಹಾರ್ದ ಕಾಯ್ದೆ ಮತ್ತು ಇತ್ತೀಚೆಗಿನ ತಿದ್ದುಪಡಿ"ಯ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಬಿ.ಎ.ಮಹದೇವಪ್ಪ, ಸನ್ಮತಿ ಪ್ರತಿಷ್ಠಾನ, ಶಿವಮೊಗ್ಗ ಇವರು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಜಿಲ್ಲೆಯ 80ಕ್ಕೂ ಅಧಿಕ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿ, ತರಬೇತಿಯನ್ನು ಪಡೆದರು.

## ಕ್ಯಾಲೆಂಡರ್ ಬಿಡುಗಡೆ



ಸಹಕಾರ ಇಲಾಖೆಯ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿ ಶ್ರೀ ಮಹೇಂದ್ರ ಜೈನ್‌ರವರು ಸಂಯುಕ್ತ ಸಹಕಾರಿಯ 2016ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಎನ್.ಸಿ.ಡಿ.ಸಿ.ಯ ಪ್ರಾಂತೀಯ ನಿರ್ದೇಶಕರಾದ ಶ್ರೀ ಚನ್ನೇಶಪ್ಪ, ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತೀಕರ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಅವರುಗಳು ಉಪಸ್ಥಿತರಿದ್ದರು.

## ಶ್ರೀ ಎಸ್.ಆರ್. ಸತೀಶ್ಚಂದ್ರ ಅವರಿಗೆ ಸನ್ಮಾನ



ಶ್ರೀ ಎಸ್.ಆರ್.ಸತೀಶ್ಚಂದ್ರ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಇವರು ಪ್ರತಿಷ್ಠಿತ ಕ್ಯಾಂಪ್ಕೋ ಸಹಕಾರಿ ಸಂಸ್ಥೆಯ ಅಧ್ಯಕ್ಷರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಅವರನ್ನು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಸನ್ಮಾನಿಸಲಾಯಿತು.

## ಧಾರವಾಡದಲ್ಲಿ ಸೈಂಟ್ ಮಿಲಾಗ್ರಿಸ್ ಶಾಖೆಯ ಉದ್ಘಾಟನೆ

ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೊ-ಆಪರೇಟಿವ್ ಲಿ., ಕಾರವಾರ ಇದರ ನೂತನ 28ನೇ ಶಾಖೆ ಧಾರವಾಡದಲ್ಲಿ ದಿನಾಂಕ : 06 ಡಿಸೆಂಬರ್ 2015ರಂದು ಹೋಲಿ ಕ್ರಾಸ್ ಚರ್ಚಿನ ಧರ್ಮಗುರುಗಳಾದ ವಂ.ಫಾ. ಶಾಂತಪ್ಪ ಬೋರ್ಕರ್ ಇವರ ಆಶೀರ್ವಚನದಲ್ಲಿ ಹಾಗೂ ಭೂ ವಿಜ್ಞಾನ ಮತ್ತು ಗಣಿಗಾರಿಕಾ ಮಂತ್ರಿಗಳು ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ವಿನಯ ಕುಲಕರ್ಣಿ ಅವರು ಉದ್ಘಾಟಿಸಿದರು.



## ಜೀವ ವಿಮಾ ನಿಗಮದ ವತಿಯಿಂದ ಸೈಂಟ್ ಮಿಲಾಗ್ರಿಸ್ ಸಿಬ್ಬಂದಿಗಳಿಗೆ ಸನ್ಮಾನ




ಪ್ರಸ್ತುತ ವರ್ಷದಲ್ಲಿ ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಲಿ., ಕಾರವಾರ ಸಹಕಾರಿಯು ಪ್ರತಿಷ್ಠಿತ ಎಲ್.ಐ.ಸಿ ಕಂಪೆನಿಯೊಂದಿಗೆ ದಿನಾಂಕ : 03.06.2015ರಂದು ಒಡಂಬಡಿಕೆ ಮಾಡಿಕೊಂಡಿದ್ದು, ಇಲ್ಲಿಯವರೆಗೆ ಒಟ್ಟು 913 ಪಾಲಿಸಿಗಳನ್ನು ಮಾರಾಟ ಮಾಡಿರುತ್ತದೆ. ಹಾಗೆಯೇ, ಎಲ್.ಐ.ಸಿ ಧಾರವಾಡ ವಿಭಾಗದಿಂದ ಆಯೋಜಿಸಲಾದ ಕೊಡುಗೆಯಲ್ಲಿ ಸಹಕಾರಿಯ 5 ಶಾಖೆಗಳು ಅರ್ಹವಾಗಿದ್ದು, ದಿನಾಂಕ 10.12.2015 ಹಾಗೂ 11.12.2015 ರಂದು ನಡೆದ ಶಾಖಾ ವ್ಯವಸ್ಥಾಪಕರ ಸಭೆಯಲ್ಲಿ ಆಗಮಿಸಿದ ಎಲ್.ಐ.ಸಿ ಧಾರವಾಡ ವಿಭಾಗದ ಶಾಖಾ ವ್ಯವಸ್ಥಾಪಕರಾದ ಶ್ರೀ ಸುರೇಶ್‌ರವರು ಮಾತನಾಡಿ, ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಸಹಕಾರಿಯು "ಸಹಕಾರ ಕ್ಷೇತ್ರದಲ್ಲೇ ಕೇವಲ 4 ತಿಂಗಳುಗಳಲ್ಲಿ ಒಟ್ಟು 913 ಪಾಲಿಸಿಗಳನ್ನು ಮಾರಾಟ ಮಾಡಿರುವ ಏಕೈಕ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ" ಎಂದರು. ಈ ಸಂದರ್ಭದಲ್ಲಿ ಅತೀ ಹೆಚ್ಚು ಎಲ್.ಐ.ಸಿ ಪಾಲಿಸಿಗಳನ್ನು ಮಾಡಿದಂತಹ ಶ್ರೀ ರೋಹನ್ ನಾಯ್ಕ್, ಶ್ರೀ ಪ್ರಕಾಶ ಭಂಡಾರಿ, ಶ್ರೀ ಅನುಪ್ ಬಾಂದೇಕರ್, ಶ್ರೀ ಮೊಹಮ್ಮದ್ ವಾಸಿಮ್ ಹಾಗೂ ಶ್ರೀ ಮೊಹಮ್ಮದ್ ಇಕ್ಬಾಲ್ ಶೇಖ್‌ರವರಿಗೆ ಶಾಲ್ ಹೊದಿಸಿ, ಪ್ರಶಂಸಿದರು.

## ಮಯೂರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್, ಶಿವಮೊಗ್ಗ ಶಾಖೆಯ 6ನೇ ವಾರ್ಷಿಕೋತ್ಸವ

ಮಯೂರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್, ಶಿವಮೊಗ್ಗ ಶಾಖೆಯ 6ನೇ ವಾರ್ಷಿಕೋತ್ಸವವು ದಿನಾಂಕ 20.12.2015ರಂದು ರಾಘವ ಸಭಾಂಗಣ, ಕುವೆಂಪು ರಸ್ತೆ, ಶಿವಮೊಗ್ಗದಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಮಾತನಾಡಿದ ಶ್ರೀ ಬಿ.ಎ.ಮಹದೇವಪ್ಪನವರು ಸದಸ್ಯರ ಹಿತಕ್ಕಾಗಿ, ಒಂದಾಗಿ ಸೇರಿ, ಚಿಂತಿಸಿ ಸಂಸ್ಥೆಯ ಬೆಳವಣಿಗೆಗೆ ಕಾರಣ ಆಗಿರುವುದು ಇದೊಂದು ಮಾದರಿ ಆಗಿರುತ್ತದೆ. ಈ ಸಹಕಾರಿ ಬೆಳೆದರೆ ಕೇವಲ ಸದಸ್ಯರಿಗಲ್ಲದೇ ಸಮಾಜಕ್ಕೂ ತುಂಬಾ ಉಪಯೋಗವಾಗುತ್ತದೆ ಎಂದು ಹೇಳಿದರು.

ಸಹಕಾರಿಗಳ ಉಪನಿಬಂಧಕರಾದ ಶ್ರೀ ಎಸ್.ಜಯಪ್ಪನವರು ಹಾಜರಿದ್ದು, ಸಂಸ್ಥೆಯ ಆರೋಗ್ಯಕರ ಬೆಳವಣಿಗೆ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ಎಲ್ಲರೂ ಒಂದು ಸೂರಿನೆಡೆ ಸೇರಿ ಅಭಿವೃದ್ಧಿಯ ಕಡೆಗೆ ಸಾಗುವ ವ್ಯವಸ್ಥೆ ಇಂದಿನ ದಿನಕ್ಕೆ ಬಹಳ ಅತ್ಯಗತ್ಯ. ಈ ತರಹದ ಸಂಸ್ಥೆಗಳ ಬೆಳೆವಣಿಗೆಗೆ ಎಲ್ಲಾ



ರೀತಿಯ ಸಹಕಾರ ನೀಡುವುದು ಸಹಕಾರ ಇಲಾಖೆಯ ಕರ್ತವ್ಯವಾಗಿದೆ ಎಂದರು. ಇದೇ ಸಂದರ್ಭದಲ್ಲಿ ಮಂಕುತಿಮ್ಮನ ಕಗ್ಗದ ಉಪನ್ಯಾಸಕರಾದ ವಿದ್ವಾನ್ ಶ್ರೀ ಜಿ.ಎಸ್. ನಟೇಶ್ ಇವರಿಂದ "ಸಹಕಾರಿಗಳಿಗೆ ಮೌಲ್ಯಾಧಾರಿತ ಬದುಕು" ಎಂಬ ಸಂವಾದ ಕಾರ್ಯಕ್ರಮ ನಡೆಸಲಾಯಿತು.



ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ನಿ., ಯರಗಟ್ಟಿ ಸಹಕಾರಿಯ ಉದ್ಘಾಟನಾ ಸಮಾರಂಭ.



ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಗೆ ಸಂಸದರಾದ ಶ್ರೀ ನಳಿನ್ ಕುಮಾರ್ ಕಟೀಲ್ ಭೇಟಿ

# ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ



ಆದಿಶಕ್ತಿ ಸೌಹಾರ್ದ ಸಹಕಾರಿ ನಿಯಮಿತ, ಹಾನಗಲ್ಲ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯಂದು ಸಹಕಾರಿ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ.ಬಿ.ಕಲಾಲರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ನಿರ್ದೇಶಕರುಗಳು ಹಾಗೂ ಸಿಬ್ಬಂದಿವರ್ಗದವರು ಪಾಲ್ಗೊಂಡಿದ್ದರು.



ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ನೀಲಕಂಠಯ್ಯ, ಉಪಾಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಲ್.ಎಸ್.ಆನಂದ್, ಸಹಕಾರಿಯ ನಿರ್ದೇಶಕರುಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.



ಸಿರಿ ಸಂಜೀವಿನಿ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿರವಾರ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ.



ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಹುಲ್ಲೋಳಿ ಇದರ ಪ್ರಧಾನ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ.



ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹುಣಸಮಾರನಹಳ್ಳಿ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ. ಈ ಸಂದರ್ಭದಲ್ಲಿ ಗ್ರಾಮದ ಅಂಗನವಾಡಿಗಳ ಮಕ್ಕಳಿಗೆ ಆರೋಗ್ಯ ತಪಾಸಣೆಯನ್ನು ಏರ್ಪಡಿಸಲಾಗಿತ್ತು.



ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತದಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಕಾರ್ಯಕ್ರಮದ ಅಂಗವಾಗಿ ಸಹಕಾರಿಯ ಸಹಸಂಸ್ಥೆಯಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ.) ಇದರ ವತಿಯಿಂದ ಟ್ರಸ್ಟ್‌ನ 'ವೃತ್ತಿಕೌಶಲ್ಯಭಿವೃದ್ಧಿ' ಯೋಜನೆಯಡಿಯಲ್ಲಿ ಹೊಲಿಗೆ ತರಬೇತಿ ಪಡೆದ ಅಭ್ಯರ್ಥಿಗಳಿಗೆ ತರಬೇತಿ ಪೂರ್ಣಗೊಳಿಸಿದ ಕುರಿತು ಪ್ರಮಾಣ ಪತ್ರವನ್ನು ನೀಡಲಾಯಿತು.

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲು ನಿರ್ಧರಿಸಲಾಗಿದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ

– ಸಂಪಾದಕರು

## ನಿಮ್ಮ ಪ್ರಶ್ನೆ




## ನಮ್ಮ ಉತ್ತರ

– ಶ್ರೀಕಾಂತ ಬರುವೆ
ಸಹ ಪ್ರಧಾನ ವ್ಯವಸ್ಥಾಪಕರು,
ಕ.ರಾ.ಸೌ.ಸಂ.ಸ.ನಿ.,

**1. ಸೌಹಾರ್ದ ಸಹಕಾರಿಗಳು ವೃತ್ತಿ ತೆರಿಗೆಯನ್ನು ಪಾವತಿಸುವುದು ಕಡ್ಡಾಯವೇ?**

**ಉತ್ತರ** : ಕರ್ನಾಟಕ ವೃತ್ತಿ ತೆರಿಗೆ ಅಧಿನಿಯಮ, 1976ರಲ್ಲಿ ವೃತ್ತಿ ತೆರಿಗೆಯನ್ನು ಯಾರು ಪಾವತಿಸಬೇಕು ಎನ್ನುವುದನ್ನು ವಿವಿಧ ಶೆಡ್ಯೂಲ್‌ಗಳಲ್ಲಿ ತಿಳಿಸಲಾಗಿದೆ. ಸದರಿ ಯಾವುದೇ ಶೆಡ್ಯೂಲ್‌ನಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಡಿ ನೋಂದಣಿಗೊಂಡ ಸೌಹಾರ್ದ ಸಹಕಾರಿಗಳನ್ನು ಸೇರಿಸಿರುವುದಿಲ್ಲ. ಕರ್ನಾಟಕ ವೃತ್ತಿ ತೆರಿಗೆ ಅಧಿನಿಯಮ, 1976ರ ಶೆಡ್ಯೂಲ್ 23ರಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರಡಿ ನೋಂದಾಯಿತವಾದ ಸಹಕಾರ ಸಂಘಗಳು ಪಾವತಿಸಬೇಕಾದ ವೃತ್ತಿ ತೆರಿಗೆ ಕುರಿತು ಹೇಳಿದೆ. ಇದರಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಕುರಿತು ಹೇಳಿದೆಯೇ ಹೊರತು 'ಯಾವುದೇ ಸಹಕಾರಿ ಕಾಯ್ದೆಯಡಿ ನೋಂದಾಯಿತವಾದ ಸಹಕಾರಿ' ಎಂದು ಹೇಳಿರುವುದಿಲ್ಲ. ಅಲ್ಲದೇ ಸೌಹಾರ್ದ ಕಾಯ್ದೆ ಜಾರಿಗೆ ಬಂದಿದ್ದು 2001ರಲ್ಲಿ. ಆ ನಂತರ ವೃತ್ತಿ ತೆರಿಗೆ ಕಾಯ್ದೆಗೆ ಅನೇಕ ತಿದ್ದುಪಡಿಗಳಾಗಿವೆ. ಆದರೆ ಯಾವುದೇ ತಿದ್ದುಪಡಿಗಳಲ್ಲೂ ಸೌಹಾರ್ದ ಸಹಕಾರಿ ಕಾಯ್ದೆಯಡಿ ನೋಂದಣಿಯಾದ ಸಹಕಾರಿಗಳು ಪಾವತಿಸಬೇಕಾದ ವೃತ್ತಿ ತೆರಿಗೆಯ ಕುರಿತು ಪ್ರಸ್ತಾಪವಿಲ್ಲ.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಮತ್ತು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ನಡುವೆ ವ್ಯತ್ಯಾಸವಿದೆ ಹಾಗೂ ಸೌಹಾರ್ದ ಸಹಕಾರಿ ಮತ್ತು ಸಹಕಾರ ಸಂಘಗಳ ನಡುವೆ ವ್ಯತ್ಯಾಸವಿದೆ.

ವೃತ್ತಿ ತೆರಿಗೆ ಅಧಿನಿಯಮ, 1976ರ ಕಲಂ 3(2)ರ ಪ್ರಕಾರ ಸಕ್ಷಮ ಪ್ರಾಧಿಕಾರದಿಂದ ನೋಂದಣಿ ಪ್ರಮಾಣ ಪತ್ರ ಪಡೆದಿರುವ ಎಲ್ಲಾ ವ್ಯಕ್ತಿಗಳು/ ಸಂಸ್ಥೆಗಳು ವೃತ್ತಿ ತೆರಿಗೆ ಪಾವತಿಸಬೇಕಾಗುತ್ತದೆ. ಒಂದು ವೇಳೆ ನೋಟೀಸಿನಲ್ಲಿ ತಿಳಿಸಿರುವಂತೆ ಸ್ವಯಂ ನೋಂದಣಿಗೊಂಡು ಪ್ರಮಾಣ ಪತ್ರ ಪಡೆದರೆ ಬೇಡಿಕೆ ಮೊತ್ತದ ವೃತ್ತಿ ತೆರಿಗೆಯನ್ನು ಪಾವತಿಸಬೇಕಾಗುತ್ತದೆ. ತಾವು ಒಂದು ಬಾರಿ ವೃತ್ತಿ ತೆರಿಗೆ ಕಾಯ್ದೆಯಡಿಯಲ್ಲಿ ನೋಂದಾಯಿಸಿಕೊಂಡಲ್ಲಿ ಪ್ರತಿ ವರ್ಷವು ವೃತ್ತಿ ತೆರಿಗೆಯನ್ನು ಪಾವತಿಸಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಗಾಗಿ ಸೌಹಾರ್ದ ಸಹಕಾರಿಗಳು ತಮ್ಮ ಸಂಸ್ಥೆಯ ವೃತ್ತಿ ತೆರಿಗೆಯನ್ನು ಪಾವತಿಸಬೇಕಿರುವುದಿಲ್ಲ. ಈ ಕುರಿತು ಸಹಕಾರಿಗೆ ವಾಣಿಜ್ಯ ತೆರಿಗೆ ಇಲಾಖೆಯು ನೋಟೀಸ್ ನೀಡಿದಲ್ಲಿ, ನೋಟೀಸಿನ ಪ್ರತಿಯೊಂದಿಗೆ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆಯಬಹುದಾಗಿರುತ್ತದೆ.

**ಗಮನಿಸಿ** : ಸೌಹಾರ್ದ ಸಹಕಾರಿ ಬ್ಯಾಂಕುಗಳು ಕರ್ನಾಟಕ ವೃತ್ತಿ ತೆರಿಗೆ ಅಧಿನಿಯಮ, 1976ರ ಶೆಡ್ಯೂಲ್ 24ರನ್ವಯ ವೃತ್ತಿ ತೆರಿಗೆ ಪಾವತಿಸಬೇಕಾಗುತ್ತದೆ.

**2. ಸಹಕಾರಿಗಳು ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವುದು ಕಡ್ಡಾಯವೇ? ಸಲ್ಲಿಸುವುದಾದಲ್ಲಿ ಯಾವ ದಿನಾಂಕದ ಒಳಗಾಗಿ ಸಲ್ಲಿಸತಕ್ಕದ್ದು?**

**ಉತ್ತರ** : ಆದಾಯ ತೆರಿಗೆ ಅಧಿನಿಯಮ, 1961ರ ಕಲಂ 139(1) ರನ್ವಯ ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಆದಾಯ ತೆರಿಗೆ ರಿಟರ್ನ್ಸ್‌ನ್ನು ಪ್ರತಿ ವರ್ಷ ಸೆಪ್ಟೆಂಬರ್ 30ರ ಒಳಗಾಗಿ ಸಲ್ಲಿಸಬೇಕಿರುತ್ತದೆ. ಪತ್ತಿನ ವ್ಯವಹಾರ ನಡೆಸುವ ಸಹಕಾರಿಗಳು ವಾರ್ಷಿಕ ಒಟ್ಟು ಜಮಾ ಒಂದು ಕೋಟಿ ರೂ.ಗಳನ್ನು ಮೀರಿದಲ್ಲಿ ಅಂತಹ ಸಂಸ್ಥೆಗಳು ತಮ್ಮ ಲೆಕ್ಕಗಳನ್ನು ಸನ್ನದು ಲೆಕ್ಕಪರಿಶೋಧಕರಿಂದ ಆದಾಯ ತೆರಿಗೆ ಅಧಿನಿಯಮ, 1961ರ ಕಲಂ 44ಎಬಿ ರನ್ವಯ ಲೆಕ್ಕಪರಿಶೋಧನೆ ಮಾಡಿಸಬೇಕು.

**3. ಸಹಕಾರಿಯು ಠೇವಣಿಯನ್ನು ಸ್ವೀಕರಿಸಲು ಯಾವುದಾದರೂ ಮಿತಿ ಇದೆಯೇ? ಎಷ್ಟಾದರೂ ಠೇವಣಿ ಸ್ವೀಕರಿಸಬಹುದೇ? ಸಾಲ ಪಡೆಯಬಹುದೇ?**

**ಉತ್ತರ** : ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ ಸಂಖ್ಯೆ:3(4)(ಸಿ)ರನ್ವಯ ಸಹಕಾರಿಯು ಪಡೆಯಬಹುದಾದ ಸಾಲ ಮತ್ತು ಠೇವಣಿಗಳ ಪ್ರಮಾಣವು ಸಹಕಾರಿಯ ಸಂದಾಯಿತ ಶೇರು ಬಂಡವಾಳ, ಮೀಸಲು ನಿಧಿ ಮತ್ತು ಕಟ್ಟಡ ನಿಧಿಗಳನ್ನು ಕೂಡಿಸಿದಾಗ ಬರುವ ಮೊತ್ತದ 50ಪಟ್ಟು ಮೊಬಲಗಿನಲ್ಲಿ ಸಂಚಿತ ನಷ್ಟವನ್ನು ಕಳೆದಾಗ ಪ್ರಾಪ್ತವಾಗುವ ಮೊತ್ತವನ್ನು ಮೀರುವಂತಿಲ್ಲ.

ಡಿಸೆಂಬರ್ ತಿಂಗಳ ಸ್ವಾಭಿಮಾನಿ ಸಹಕಾರಿ ಪತ್ರಿಕೆಯ ಪ್ರಶ್ನೆ "ಒಂದಕ್ಕೆ" ನೀಡಲಾದ ಉತ್ತರದಲ್ಲಿ 'ನಿರ್ದೇಶಕನು' ಎಂದಿರುವಲ್ಲಿ 'ಸದಸ್ಯನು' ಎಂದು ಓದಿಕೊಳ್ಳಲು ವಿನಂತಿಸಿದೆ. ತಪ್ಪಿಗಾಗಿ ವಿಷಾಧಿಸುತ್ತೇವೆ.

# ಶುದ್ಧ ಕುಡಿಯುವ ನೀರಿನ ಘಟಕದ ಸ್ಥಾಪನೆಯಲ್ಲಿ ಸಹಕಾರ ಸಂಘಗಳ ಪಾತ್ರ

ಶ್ರೀ ಎಸ್.ವೀರೇಶ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ)

ನಾವು ಜೀವಿಸುವ ಭೂಗೋಳ ಪ್ರದೇಶವು ಶೇ.70 ರಷ್ಟು ಭಾಗ ನೀರಿನಿಂದ ಆವೃತವಾಗಿದೆ. ಭೂಗೋಳದ ಶೇ.70 ಭಾಗ ನೀರಿನಿಂದ ಕೂಡಿದ್ದರೂ ಸಹ ಇದರಲ್ಲಿ ಶೇ.97.2 ರಷ್ಟು ಸಮುದ್ರದ ನೀರು ಅಥವಾ ಉಪ್ಪು ನೀರಿನಿಂದ ಕೂಡಿದ್ದು, ಇದು ಬಳಕೆಗೆ ವ್ಯರ್ಜವಾಗಿರುತ್ತದೆ. ಉಳಿದ ಶೇ.2.8ರಷ್ಟು ಪ್ರಮಾಣದ ನೀರು ಮಾತ್ರ ಬಳಕೆಗೆ ಲಭ್ಯವಾಗಿರುತ್ತದೆ. ಹೀಗೆ ಭೂಪ್ರದೇಶದಲ್ಲಿ ಲಭ್ಯವಿರುವ ಶೇ.2.8ರಷ್ಟು ಭಾಗದ ನೀರಿನಲ್ಲಿ ಮಾನವ ಬಳಕೆಗೆ, ಕಲುಷಿತವಲ್ಲದ ಮತ್ತು ರೋಗಮುಕ್ತವಾದ ನೀರಿನ ಪ್ರಮಾಣದ ಬಗ್ಗೆ ಯೋಚಿಸಬೇಕಾಗಿದೆ. ಬಳಕೆಗೆ ಯೋಗ್ಯವಾದ ಅಂದರೆ ಸಮುದ್ರದ ಉಪ್ಪು ನೀರನ್ನು ಬಿಟ್ಟು ಲಭ್ಯವಿರುವ ನೀರನ್ನು ಸದ್ಬಳಕೆ ಮಾಡಿಕೊಳ್ಳಬೇಕಾದ ಮತ್ತು ಈ ಜಲಮೂಲವನ್ನು ದುರ್ಬಳಕೆಯಾಗದಂತೆ, ಅಂದರೆ ಕಲುಷಿತವಾಗದಂತೆ ನೋಡಿಕೊಳ್ಳುವುದು ಪ್ರಸ್ತುತ ಸಮಯದ ಅವಶ್ಯಕತೆಯಾಗಿದೆ. ಈ ನಿಟ್ಟಿನಲ್ಲಿ ಎದುರಿಸಬೇಕಾದ ಸವಾಲುಗಳು ದೇಶದ ಮುಂದಿವೆ.

ದೇಶದೊಳಗೆ ರಾಜ್ಯಗಳ ನಡುವೆ ಮತ್ತು ಪ್ರಪಂಚದಲ್ಲಿ ದೇಶ ದೇಶಗಳ ನಡುವೆ ನೀರಿಗಾಗಿ ವಿವಾದ ಏರ್ಪಟ್ಟು ಪರಸ್ಪರ ಜಗಳ, ನಿಂದನೆಗಳಿಂದ ದೇಶ, ವಿದೇಶಗಳ ಮತ್ತು ರಾಜ್ಯಗಳ ನಡುವಿನ ಬಾಂಧವ್ಯ ಕೆಟ್ಟು ಹೋಗುವ ಪರಿಸ್ಥಿತಿ ನಿರ್ಮಾಣವಾಗಿರುವುದನ್ನೂ ಸಹ ನಾವು ಕಾಣುತ್ತಿದ್ದೇವೆ. ದೇಶ ದೇಶಗಳ ಮಧ್ಯೆ ಇನ್ನು ಮುಂದೆ ನೀರಿಗಾಗಿ ಯುದ್ಧಗಳು ಏರ್ಪಟ್ಟರೂ ಆಶ್ಚರ್ಯವಿಲ್ಲವೆಂದು ತಜ್ಞರು ಅಭಿಪ್ರಾಯಪಡುತ್ತಾರೆ.

**ಕಲುಷಿತ ನೀರು ಮತ್ತು ಅದರ ಪರಿಣಾಮ :** ಜಲ ಮೂಲಗಳಾದ ನದಿಗಳು, ಕೆರೆಕೊಳಗಳು, ಅಂತರ್ಜಲದ ಮೂಲಗಳಾದ ತೆರೆದ ಬಾವಿ ಮತ್ತು ಕೊಳವೆ ಬಾವಿಗಳು ತಮ್ಮ ಹಿಂದಿನ ಸ್ವರೂಪಗಳನ್ನು ಬದಲಿಸಿಕೊಳ್ಳುತ್ತಾ ಅವುಗಳ ಮೇಲಾಗುತ್ತಿರುವ ದುಷ್ಪರಿಣಾಮಗಳಿಂದ ನಿರಂತರವಾಗಿ ಕಲುಷಿತಗೊಳ್ಳುತ್ತಾ ಮುಂದುವರೆದಿವೆ. ಬಳಕೆಗೆ ಲಭ್ಯವಿರುವ ಜಲಸಂಪತ್ತು ಕಲುಷಿತವಾಗಲು ಮುಖ್ಯ ಕಾರಣಗಳೆಂದರೆ :

1. ನದಿಗಳಿಗೆ ಕೈಗಾರಿಕಾ ತ್ಯಾಜ್ಯಗಳನ್ನು ಹರಿಯಬಿಡುವುದು. ನಗರ, ಪಟ್ಟಣ, ಜನ ವಸತಿಗಳ ತ್ಯಾಜ್ಯಗಳನ್ನು ಪರಿಷ್ಕರಿಸದೇ ಹಾಗೆಯೇ ಹರಿಯಲು ಬಿಡುವುದು.
2. ಕೈಗಾರಿಕೆಗಳಿಂದ ಹೊರಬರುವ ರಾಸಾಯನಿಕಾಂಶಗಳು ಮತ್ತು ಕೃಷಿ ಚಟುವಟಿಕೆಗಳಿಗೆ ಬಳಸುತ್ತಿರುವ ರಾಸಾಯನಿಕ ತ್ಯಾಜ್ಯಗಳು ಭೂಮಿಯಲ್ಲಿ ಇಂಗಿ ಅಂತರ್ಜಲದೊಂದಿಗೆ ಸೇರಿಕೊಳ್ಳುವುದು.
3. ಹೆಚ್ಚು ಹೆಚ್ಚು ಅಂತರ್ಜಲವನ್ನು ಹೊರ ತೆಗೆದು ಭೂಮಿಯನ್ನು ಬರಿದು ಮಾಡುವುದು. ಈ ಕ್ರಮದಿಂದ ನೈಸರ್ಗಿಕ ಹಸಿರು ಸಂಪತ್ತು (ಗಿಡ, ಮರ, ಹಸಿರು ವನಗಳು) ಭೂಮಿಯಲ್ಲಿನ ಜಲಕ್ಷಾಮದಿಂದ ಕ್ಷೀಣಿಸುತ್ತಿರುವುದು, ಈ ಕಾರಣದಿಂದ ಪರಿಸರದಲ್ಲಿ ನೈಸರ್ಗಿಕ ಅಸಮತೋಲನ ಏರ್ಪಟ್ಟು ಭೂಮಿ ಮೇಲಿನ ಜೀವರಾಶಿಗಳಿಗೆ ಹಾನಿಯುಂಟಾಗುವುದು.




ಕಲುಷಿತ ನೀರು ಸೇವನೆಯಿಂದ ಅನೇಕ ತೀವ್ರತರವಾದ ರೋಗಗಳು ಸಹಜವಾಗಿ ಮನುಷ್ಯರಿಗೆ ಬರುತ್ತವೆ. ಇವುಗಳಲ್ಲಿ ಗಂಭೀರ ಸ್ವರೂಪದ ಕಾಯಿಲೆಗಳಾದ ಡಯೇರಿಯಾ, ಕಾಲರಾ, ಟೈಫಾಯ್ಡ್, ಜಾಂಡೀಸ್ ಮುಂತಾದ ರೋಗಗಳು ಜನರ ಜೀವವನ್ನು ತೆಗೆಯುವ ಪ್ರಮಾಣಕ್ಕೆ ಬೆಳೆಯುತ್ತಿವೆ. ಪ್ರತಿವರ್ಷ ಕಲುಷಿತ ಅಥವಾ ಶುದ್ಧವಲ್ಲದ ನೀರಿನ ಸೇವನೆಯಿಂದ ಪ್ರಪಂಚದಲ್ಲಿ ಸುಮಾರು 3.4 ಮಿಲಿಯನ್ ಜನರು ಸಾವಿಗೀಡಾಗುತ್ತಿದ್ದಾರೆಂದು ವಿಶ್ವ ಆರೋಗ್ಯ ಸಂಸ್ಥೆ (W.H.O) ನಡೆಸಿದ ಸಮೀಕ್ಷೆಯಿಂದ ತಿಳಿದುಬರುತ್ತದೆ.

**ಭಾರತದ ಗ್ರಾಮೀಣ ಕುಡಿಯುವ ನೀರಿನ ಚಿತ್ರಣ :** ನಮ್ಮ ದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಅಗಾಧವಾದ ಸಮಸ್ಯೆಯಾಗಿ ಮುಂದುವರೆದಿದೆ. ಒಂದು ಅಂದಾಜಿನ ಪ್ರಕಾರ ಪ್ರತಿ ವರ್ಷ ಸುಮಾರು 37.7 ಮಿಲಿಯನ್ (ಮೂರು ಕೋಟಿ ಎಪ್ಪತ್ತು ಲಕ್ಷದಷ್ಟು) ದೇಶವಾಸಿಗಳು ಕುಡಿಯುವ ನೀರಿನ ಮೂಲಗಳಿಂದ ಬರುವ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗಿ ಬಳಲುತ್ತಾರೆ. ಹಾಗೆಯೇ ಸುಮಾರು 1.5 ಮಿಲಿಯನ್ (15 ಲಕ್ಷ) ಮಕ್ಕಳು ಕಲುಷಿತ ನೀರು ಸೇವನೆಯಿಂದ ಡಯೇರಿಯಾ, ಕಾಲರಾ ಮುಂತಾದ ಮಾರಕ ರೋಗಗಳಿಂದ ಸಾವನ್ನಪ್ಪುತ್ತಾರೆ.

**ಕರ್ನಾಟಕದಲ್ಲಿರುವ ಪರಿಸ್ಥಿತಿ :** ಕರ್ನಾಟಕದಲ್ಲಿ 59,753 ಜನವಸತಿ ಪ್ರದೇಶಗಳಿದ್ದು, ಇವುಗಳಿಗೆ ಶುದ್ಧ ಕುಡಿಯುವ ನೀರು ಒದಗಿಸಲು ಸುಮಾರು ರೂ.52,000 ಕೋಟಿ ಹಣದ ಅಗತ್ಯವಿದೆಯೆಂದು ಅಂದಾಜಿಸಲಾಗಿದೆ. ರಾಜ್ಯದಲ್ಲಿ ಕುಡಿಯುವ ನೀರಿನ ಮೂಲಗಳೆಂದರೆ ನದಿ, ಜಲಾಶಯ ಮತ್ತು ಕೊಳವೆ ಬಾವಿಗಳಾಗಿದ್ದು, ಇವುಗಳ ಪೈಕಿ ಕುಡಿಯುವ ನೀರು ಸರಬರಾಜು ಅಂತರ್ಜಲದ ಮೂಲದ ಕೊಳವೆ ಬಾವಿಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ. ಈ ಕೊಳವೆ ಬಾವಿಗಳು ದಿನ ಕಳೆದಂತೆ ಅತಿಯಾದ ಬಳಕೆಯಿಂದ ಬರಿದಾಗುತ್ತಿರುವುದರ ಜೊತೆಗೆ, ಇವುಗಳಿಂದ ದೊರೆಯುವ ನೀರಿನ ಗುಣಮಟ್ಟವೂ ಸಹ ಕಲುಷಿತಗೊಳ್ಳುತ್ತಿದೆ. ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಇಲಾಖೆಯ ವರದಿಯ ಪ್ರಕಾರ ಕರ್ನಾಟಕದ ಗ್ರಾಮೀಣ ಪ್ರದೇಶದ ಕುಡಿಯುವ ನೀರಿನ ಸ್ಥೂಲ ಚಿತ್ರಣ ತಿಳಿಯಬಹುದಾಗಿದೆ.

ಒಟ್ಟು 59,753 ಜನ ವಸತಿ ಪ್ರದೇಶಗಳಲ್ಲಿ 10,154 ಪ್ರದೇಶಗಳಲ್ಲಿ ಕುಡಿಯುವ ನೀರು ವಿವಿಧ ಕಾರಣಗಳಿಂದ ಅಶುದ್ಧವಾಗಿರುವುದು

ಕಂಡುಬರುತ್ತದೆ. ರಾಜ್ಯದ ದಕ್ಷಿಣದ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ರಾಮನಗರ ಮತ್ತು ತುಮಕೂರು ಜಿಲ್ಲೆಗಳು ಹಾಗೂ ಉತ್ತರ ಭಾಗದಲ್ಲಿನ ಬೀದರ್, ರಾಯಚೂರು, ಬಳ್ಳಾರಿ, ಕಲಬುರ್ಗಿ, ಯಾದಗಿರಿ, ಗದಗ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳು ನೀರಿನ ಕೊರತೆಯನ್ನು ಅನುಭವಿಸುತ್ತಿರುವ ಜಿಲ್ಲೆಗಳಾಗಿವೆ. ಕರ್ನಾಟಕದ ಸರಿಸುಮಾರು ಶೇ.50 ರಷ್ಟು ಭಾಗ ಕುಡಿಯುವ ನೀರಿನ ಕೊರತೆಯನ್ನು ಅನುಭವಿಸುತ್ತಿದೆ ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಎಚ್.ಕೆ. ಪಾಟೀಲ್‌ರವರು ಕಳೆದ ವಿಧಾನ ಮಂಡಳದ ಅಧಿವೇಶನದಲ್ಲಿ ಮಾಹಿತಿ ನೀಡಿದರು. ವಾಸ್ತವಾಂಶಗಳನ್ನು ಗಮನಿಸಿದಾಗ ಕರ್ನಾಟಕದಲ್ಲಿರುವ ನೀರಿನ ಸಮಸ್ಯೆಯ ಅಗಾಧತೆ ಬಗ್ಗೆ ಅರಿವುಂಟಾಗುವುದು ಸಹಜ. ಮಾಹಿತಿಯ ಪ್ರಕಾರ ರಾಜಸ್ಥಾನ ಹೊರತು ಪಡಿಸಿದರೆ ಕರ್ನಾಟಕ ರಾಜ್ಯ ಕುಡಿಯುವ ನೀರಿನ ಕೊರತೆಯಲ್ಲಿ ದೇಶದಲ್ಲಿಯೇ ಎರಡನೇ ಸ್ಥಾನದಲ್ಲಿದೆ.

ರಾಜ್ಯದ ಗ್ರಾಮೀಣ ಪ್ರದೇಶದ ಕುಡಿಯುವ ನೀರಿನ ಸಮಸ್ಯೆಗಳ ಪರಿಹಾರದ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪೂರಕ ಕ್ರಮಗಳನ್ನು ವಹಿಸುತ್ತಾ ಶುದ್ಧ ನೀರನ್ನು ಒದಗಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಿವೆ. ನಮ್ಮ ರಾಜ್ಯದಲ್ಲಿಯೂ ಸಹ ಈ ದಿಕ್ಕಿನಲ್ಲಿ ಪ್ರಯತ್ನಗಳು ನಡೆದಿವೆ. ಸಹಕಾರ ಕ್ಷೇತ್ರದ ನೆರವನ್ನು ಪಡೆದು ಸಹಕಾರ ಸಂಸ್ಥೆಯ ಸಹಭಾಗಿತ್ವದಲ್ಲಿ ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸಿ, ಅವುಗಳ ಮೂಲಕ ಗ್ರಾಮೀಣ ಜನರಿಗೆ ಶುದ್ಧ ನೀರನ್ನು ನೀಡುವ ಪ್ರಯತ್ನ ನಡೆಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಸಹಕಾರ ಸಂಸ್ಥೆಗಳ ಮತ್ತು ಸರ್ಕಾರೇತರ ಸಂಸ್ಥೆಗಳ ನೆರವನ್ನು ಪಡೆದು ಇವುಗಳ ಸಹಭಾಗಿತ್ವದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶುದ್ಧ ನೀರು ಸರಬರಾಜು ಘಟಕಗಳನ್ನು ಸ್ಥಾಪಿಸಿ ಅವುಗಳ ಮೂಲಕ ಗ್ರಾಮೀಣ ಜನರಿಗೆ ಆರೋಗ್ಯ ಪೂರ್ಣ ಕುಡಿಯುವ ನೀರು ಸಿಗುವಂತೆ ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಗ್ರಾಮೀಣ ನೀರು ಸರಬರಾಜು ಇಲಾಖೆಯಿಂದ ದಿನಾಂಕ: 13–08–2015 ರಂದು ಸರ್ಕಾರ ಆದೇಶ ಹೊರಡಿಸಿ, ಈಗಾಗಲೇ ಗುರುತಿಸಿರುವ ಸಮಸ್ಯಾತ್ಮಕ ಗ್ರಾಮೀಣ ಜನವಸತಿಗಳಲ್ಲಿ 2014–15ನೇ ಸಾಲಿನಲ್ಲಿ 4000 ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸಲು ಅನುಮೋದನೆ ನೀಡುವುದರ ಮೂಲಕ ಕಾರ್ಯ ಯೋಜನೆಗೆ ದಾರಿ ಮಾಡಿಕೊಡಲಾಗಿದೆ. ಇದರ ವಿವರ ಈ ಮುಂದಿನಂತಿದೆ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 21 ಗ್ರಾನೀಸ(8) 2015, ದಿನಾಂಕ 13–08–2015ರ ಲಗತ್ತು ಅನುಬಂಧ–1**

**2015–16ನೇ ಸಾಲಿನಲ್ಲಿ ಅಳವಡಿಸಬೇಕಾಗಿರುವ 4000 ನೀರು ಶುದ್ಧೀಕರಣ ಘಟಕಗಳ ಜಿಲ್ಲಾವಾರು ತ:ಖ್ತೆ**

2015–16ನೇ ಸಾಲಿನಲ್ಲಿ ಅಳವಡಿಸಬೇಕಾಗಿರುವ 4000 ನೀರು ಶುದ್ಧೀಕರಣ ಘಟಕಗಳ ಜಿಲ್ಲಾವಾರು ತ:ಖ್ತೆ ಶುದ್ಧ ಕುಡಿಯುವ ನೀರಿನ ಯೋಜನೆ ಅನುಷ್ಠಾನದಲ್ಲಿ ಸಹಕಾರ ಸಂಘ–ಸಂಸ್ಥೆಗಳು ನಿರ್ಮಾಣ ಮಾಡುವ ಘಟಕಗಳಿಗೆ ಸರ್ಕಾರದ ವತಿಯಿಂದ ಐದು ಲಕ್ಷ ರೂ.ಗಳು ನೆರವು, ಉಳಿಕೆ ಮೊತ್ತವನ್ನು ಸಹಕಾರ ಸಂಸ್ಥೆಗಳು ತಮ್ಮ ಲಾಭಾಂಶ/ ಸಾಮಾಜಿಕ ನಿಧಿ/ ಹಣ ಕ್ರೋಢೀಕರಿಸಿ ಯೋಜನೆ ಅನುಷ್ಠಾನಗೊಳಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಸಹಕಾರ ಎರಡೂ ಇಲಾಖೆಗಳ ಸಹಕಾರದೊಂದಿಗೆ ಈ ಹೊಸ ಯೋಜನೆ ಕಾರ್ಯಾರಂಭಗೊಂಡಿದೆ.

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಅಳವಡಿಸಬೇಕಾಗಿರುವ ನೀರು ಶುದ್ಧೀಕರಣ ಘಟಕಗಳ ಸಂಖ್ಯೆ |
|---|---|---|
| 1 | ಬಾಗಲಕೋಟೆ | 113 |
| 2 | ಬೆಂಗಳೂರು ಗ್ರಾಮಾಂತರ | 73 |
| 3 | ಬೆಂಗಳೂರು ನಗರ | 81 |
| 4 | ಬೆಳಗಾವಿ | 341 |
| 5 | ಬಳ್ಳಾರಿ | 197 |
| 6 | ಬೀದರ್ | 171 |
| 7 | ವಿಜಯಪುರ | 163 |
| 8 | ಚಾಮರಾಜನಗರ | 95 |
| 9 | ಚಿಕ್ಕಬಳ್ಳಾಪುರ | 137 |
| 10 | ಚಿಕ್ಕಮಗಳೂರು | 122 |
| 11 | ಚಿತ್ರದುರ್ಗ | 206 |
| 12 | ದಕ್ಷಿಣ ಕನ್ನಡ | 70 |
| 13 | ದಾವಣಗೆರೆ | 163 |
| 14 | ಧಾರವಾಡ | 89 |
| 15 | ಗದಗ | 39 |

**ಸಹಕಾರ ಸಂಸ್ಥೆಗಳ ಸ್ಪಂದನೆ :** ಸಹಕಾರ ಸಂಸ್ಥೆಗಳು ತಮ್ಮ ಸದಸ್ಯರ ಸೇವೆಯ ಜೊತೆಗೆ ಸಾರ್ವಜನಿಕರ ಸಮಸ್ಯೆಗಳಿಗೂ ಸ್ಪಂದಿಸುತ್ತಾ ಬಂದಿರುವುದು ಸಹಕಾರ ಕ್ಷೇತ್ರದ ಪರಿ ಪಾಠವಾಗಿದೆ. ಸಕಲ ಜೀವರಾಶಿಗಳಿಗೂ ಅಗತ್ಯವಾಗಿ ಬೇಕಾಗಿರುವ ಕುಡಿಯುವ ನೀರು ಉತ್ತಮ ಆಹಾರದಷ್ಟೇ ಮಹತ್ವವಾದ ವಿಷಯವಾಗಿರುತ್ತದೆ. ರೋಗಮುಕ್ತ ಸಮಾಜಕ್ಕೆ 'ಶುದ್ಧ ಕುಡಿಯುವ ಜಲ' ನೀಡುವ ಸರ್ಕಾರದ ಕಾರ್ಯಯೋಜನೆಗಳಿಗೆ, ಸದಾ ಸಮಾಜಮುಖಿ ಚಿಂತನೆ ಮತ್ತು ಧ್ಯೇಯಗಳನ್ನೊಳಗೊಂಡ ಸಹಕಾರ ಕ್ಷೇತ್ರವು ಅಭಿಯಾನಕ್ಕೆ ಸಮಯೋಚಿತವಾಗಿ ಸ್ಪಂದಿಸುತ್ತಿರುವುದು ಶ್ಲಾಘನೀಯವಾಗಿದೆ.

ನಮ್ಮ ನಾಡಿನ, ವಿಶೇಷವಾಗಿ ಗ್ರಾಮೀಣ ಜನರ ಆರೋಗ್ಯದ ಬಗ್ಗೆ ಒತ್ತು ನೀಡುವ ಈ ವಿಷಯದಲ್ಲಿ ಹೆಚ್ಚು ಸಹಕಾರ ಸಂಸ್ಥೆಗಳು, ಸಹಕಾರಿಗಳು ಕೈಜೋಡಿಸುತ್ತಿರುವುದು ಸಹ ಉತ್ತಮ ಬೆಳವಣಿಗೆಯಾಗಿದೆ. ಬನ್ನಿ ಸಹಕಾರಿಗಳೇ, 'ವಿಷಮುಕ್ತ, ಆರೋಗ್ಯಯುಕ್ತ ಕುಡಿಯುವ ನೀರನ್ನು ಸಂಗ್ರಹಿಸೋಣ, ಹಿತಮಿತವಾಗಿ ಬಳಸೋಣ ಮತ್ತು ಉತ್ತಮ ಜೀವನವನ್ನು ಸಾಗಿಸೋಣ' ■



# RBI NEWS-DECEMBER 2015

K.Vittal Shetty

The sixth bi-monthly monetary policy statement will be announced on Tuesday, February 2, 2016.

## I.IMPORTANT NEWS

**December 10, 2015 :** Maintenance of Statutory Liquidity Ratio (SLR) Statutory Liquidity Ratio (SLR) of scheduled commercial banks, local area banks, primary (Urban) co-operative banks (UCBs), state co-operative banks and central co-operative banks from 21.5 per cent of their Net Demand and Time Liabilities (NDTL) to :

(i) 21.25 per cent from April 2, 2016;

(ii) 21.00 per cent from July 9, 2016;

(iii) 20.75 per cent from October 1, 2016; and

(iv) 20.50 per cent from January 7, 2017

A Single regulation for the commercial banks, Primary (Urban) Co-operative Banks and State and Central Co-operative Banks is now applicable.




**Dec 17, 2015 :** RBI announces Marginal Cost of Funds Methodology for Interest Rate on Advances

The final guidelines on computing interest rates on advances based on the marginal cost of funds come into effect from April 1, 2016.

**The highlights of the guidelines are as under :**

i. All rupee loans sanctioned and credit limits renewed w.e.f. April 1, 2016 will be priced with reference to the Marginal Cost of Funds based Lending Rate (MCLR) which will be the internal benchmark for such purposes.

ii. The MCLR will be a tenor linked internal benchmark.

iii. Actual lending rates will be determined by adding the components of spread to the MCLR.

iv. Banks will review and publish their MCLR of different maturities every month on a pre-announced date.

v. Banks may specify interest reset dates on their floating rate loans. They will have the option to offer loans with reset dates linked either to the date of sanction of the loan/credit limits or to the date of review of MCLR.

vi. The periodicity of reset shall be one year or lower.

vii. The MCLR prevailing on the day the loan is sanctioned will be applicable till the next reset date, irrespective of the changes in the benchmark during the interim period.

viii. Existing loans and credit limits linked to the Base Rate may continue till repayment or renewal, as the case may be. Existing borrowers will also have the option to move to the Marginal Cost of Funds based Lending Rate (MCLR) linked loan at mutually acceptable terms.

ix. Banks will continue to review and publish Base Rate as hitherto.

## II. Cancellation, Withdrawl, Penalties and Directions on Urban Co-operative Banks

**Dec 10, 2015 :** RBI extends Directions on the Shri Chhatrapati Urban Co-operative Bank Ltd., Pimple Nilakh, District - Pune, Maharashtra.

**Dec 10, 2015:** Vyavsayik Sahkari Bank Ltd, Raipur – Penalised.

**Dec 11, 2015 :** RBI extends Directions issued to the Indian Mercantile Co-operative Bank Ltd., Lucknow, Uttar Pradesh till March 11, 2016. The bank has been under directions since June 12, 2014.

**Dec 15, 2015 :** Nagrik Sahkari Bank Ltd, Raipur – Penalised --a monetary penalty of 1,00,000/- (One lakh only) for violation of KYC/ AML norms / guidelines.

**Dec 21, 2015 :** RBI withdraws Directions issued to Shree Govardhansinghji Raghuvanshi Sahakari Bank Ltd., Nandurbar, Maharashtra, with effect from the close of business on December 19, 2015.

**Dec 23, 2015 :** RBI extends Directions issued to The R S Co-operative Bank Ltd., Mumbai, Maharashtra till June 25, 2016. ■

# ಸಹಕಾರಿ ನಾಯಕತ್ವ ಸವಾಲುಗಳು, ಅವಕಾಶಗಳು ಮತ್ತು ಉತ್ತರದಾಯಿತ್ವ



ಶ್ರೀ ಬಿ.ಎ.ಮಹದೇವಪ್ಪ, ಸನ್ಮತಿ ಪ್ರತಿಷ್ಠಾನ, ಶಿವಮೊಗ್ಗ.


**ನಾಯಕ ಎಂದರೆ ಯಾರು? :** ಮಾನವ ಸಂಪನ್ಮೂಲ ತಜ್ಞರಾದ ಆಲೆನ್ (Allen) ಅವರ ಪ್ರಕಾರ "ಇತರರಿಗೆ ಮಾರ್ಗದರ್ಶನ ಮತ್ತು ನಿರ್ದೇಶನವನ್ನು ನೀಡುವವನು... ನಾಯಕ"

- ನಾಯಕ ಜನರ ಗುಂಪಿನಿಂದಲೇ ಮೂಡಿ ಬರುತ್ತಾನೆ.
- ಬದ್ಧತೆಯಿಂದ ಕೆಲಸ ಮಾಡುತ್ತಾನೆ.
- ಅಯಸ್ಕಾಂತದಂತೆ ಜನರನ್ನು ಆಕರ್ಷಿಸಿ ಒಂದು ತಂಡವನ್ನು ಕಟ್ಟುತ್ತಾನೆ.
- ವೈಫಲ್ಯತೆಯ ಕಾಲದಲ್ಲಿ ಪ್ರೋತ್ಸಾಹ ನೀಡುತ್ತಾನೆ.
- ಇತರರು ತನಗೆ ಏನನ್ನು ಮಾಡಬಲ್ಲರು ಎಂಬುದಕ್ಕಿಂತ ತಾನು ಇತರರಿಗೆ ಏನು ಮಾಡಬಲ್ಲೆ? ಎಂದು ಯೋಚಿಸುತ್ತಾನೆ.

**ನಾಯಕತ್ವ ಎಂದರೇನು? :** "ನಾಯಕತ್ವದ ವ್ಯಾಖ್ಯಾನ ತುಂಬಾ ಕಠಿಣ. ಅದರಲ್ಲೂ ಉತ್ತಮ ನಾಯಕತ್ವದ ವಿವರಣೆ ಇನ್ನೂ ಕಷ್ಟ. ಆದರೆ... ಯಾರು ಅಂತಿಮ ಗುರಿಯನ್ನು ತಲುಪುವವರೆಗೆ ತನ್ನವರನ್ನು ಕರೆದೊಯ್ಯಬಲ್ಲನೋ ಆತನೇ ಅತ್ಯುತ್ತಮ ನಾಯಕ"

**ನಾಯಕ ಹೇಗಿರಬೇಕು? :** "ಸದಾ ಹೊಸತು ಏನನ್ನಾದರೂ ಕಲಿಯುತ್ತಿರಿ. ನೀವು ಹೊಸ ವಿಷಯಗಳನ್ನು ಕಲಿಯದಿದ್ದರೆ... ಹೊಸದೇನನ್ನು ಮಾಡಲು ಸಾಧ್ಯವಿಲ್ಲ".

**ನಾಯಕತ್ವದ ಲಕ್ಷಣಗಳೇನು? :** ಕೆಲಸದಲ್ಲಿ ನಾವು ತೋರುವ ನಾವೀನ್ಯತೆ ಎಂಬುದು. ನಾವು ನಾಯಕರಾಗುತ್ತೇವೋ... ಹಿಂಬಾಲಕರಾಗುತ್ತೇವೋ ಎಂಬುದನ್ನು ನಿರ್ಧರಿಸುತ್ತದೆ.




**ನಾಯಕ ಏನು ಮಾಡಬೇಕು? :** ನೀವು ಯಾವುದೇ ಕೆಲಸ ಮಾಡಿ, ಅದರಲ್ಲಿ ನಿಮ್ಮ 100 ಪರ್ಸೆಂಟ್ ಪರಿಶ್ರಮವಿರಬೇಕು. ನಿಮ್ಮ ಸಂಸ್ಥೆಯಲ್ಲಿ ನೀವೊಬ್ಬರೇ ಬೆಳೆಯುವ ಬಗ್ಗೆ ಯೋಚಿಸಬೇಡಿ. ಆ ವೃತ್ತಿಯ ವ್ಯಾಪ್ತಿಯನ್ನು ಬೆಳೆಸುವ ಬಗ್ಗೆ ಯೋಚಿಸಿ, ಆಗ ಅದರೊಟ್ಟಿಗೆ ನೀವೂ ಬೆಳೆಯುತ್ತೀರಿ"

**ಆದರ್ಶ ನಾಯಕ ಹೇಗಿರಬೇಕು? :** ಜನರು ನಿಮ್ಮ ಬಗ್ಗೆ ಏನನ್ನು ಯೋಚಿಸುತ್ತಾರೆಂಬುದಕ್ಕೆ ನೀವು ಜವಾಬ್ದಾರರಲ್ಲ. ಆದರೆ... ಅವರು ಯೋಚಿಸುವಂತೆ ಮಾಡಲು ನೀವು ಏನನ್ನು ಕೊಡ್ತೀರಿ ಎಂಬುದು ಬಹಳ ಮುಖ್ಯ. ಆದ್ದರಿಂದ... ಜನರು ಸದಾ ನಿಮ್ಮ ಬಗ್ಗೆ ಒಳ್ಳೆಯದನ್ನೇ ಯೋಚಿಸುವಂತಹ ಕೆಲಸ ಮಾಡಿ.

**ಸಹಕಾರಿ ನಾಯಕರು ಯಾರು? :** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಕಲಂ 2(ಎ3) ಯಾವುದೇ ಹೆಸರಿನಿಂದ ಕರೆಯಲ್ಪಡುವ ಒಂದು ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಕೆಲಸ ಕಾರ್ಯಗಳ ನಿರ್ವಹಣೆ ಮತ್ತು ವ್ಯವಸ್ಥಾಪನೆಯ ನಿಯಂತ್ರಣ ಮತ್ತು ಮಾರ್ಗದರ್ಶನವನ್ನು ವಹಿಸಿಕೊಟ್ಟ ನಿರ್ದೇಶಕರ ಮಂಡಲಿ ಅಥವಾ ಆಡಳಿತ ಮಂಡಲಿ.

ಈ ಹಿನ್ನೆಲೆಯಲ್ಲಿ... ನಿರ್ದೇಶಕರ ಸ್ಥಾನ ಬಹಳ ಮಹತ್ವವನ್ನು ಪಡೆಯುತ್ತದೆ. ಏಕೆಂದರೆ... ಅವರು ನಾಯಕನ ಸ್ಥಾನದಲ್ಲಿದ್ದಾರೆ. ಸಹಕಾರಿ ವ್ಯವಸ್ಥೆ... ಒಂದು ಆರ್ಥಿಕ ವ್ಯವಸ್ಥೆ. ಈ ವ್ಯವಸ್ಥೆಯ ಮಾರ್ಗದರ್ಶಕನೇ... ಸಹಕಾರಿ ನಾಯಕ. ಆತ... ಟೀಮ್ ಕ್ಯಾಪ್ಟನ್!

ಸಹಕಾರಿ ನಾಯಕ ಸಂಸ್ಥೆಯು ಈಗ ಹೇಗಿದೆ, ಮುಂದೆ ಹೇಗಾಗಬಹುದು, ಅದು ಹೇಗೆ ಆಗಬೇಕು... ಎಂಬ ಬಗ್ಗೆ ಸ್ಪಷ್ಟವಾದ ಕಲ್ಪನೆಯನ್ನು ಹೊಂದಿರಬೇಕು. ಇದನ್ನು 'ವಿಷನ್' ಎನುತ್ತೇವೆ. ಅದು ಕನಸಿನಂತೆ ಅಸ್ಪಷ್ಟವಾಗಿ ಇರಬಹುದು; ಒಂದು ಗುರಿಯಂತೆ ಕರಾರುವಾಕ್ಕಾಗಿ ಇರಬಹುದು; ಮಹಾಯೋಜನೆಯಂತೆಯೂ ಇರಬಹುದು.

ಸಹಕಾರಿ ನಾಯಕನಿಗೆ ಸದಸ್ಯರ ಅಭಿವೃದ್ಧಿ ಮುಖ್ಯ ಧ್ಯೇಯವಾಗಬೇಕು. ಸದಸ್ಯರನ್ನು ಈಗಿರುವ ಸ್ಥಿತಿಗಿಂತ... 5 ವರ್ಷಗಳ ನಂತರ ಇನ್ನೂ ಉತ್ತಮ ಮಟ್ಟಕ್ಕೆ ತರುವ ಕನಸುಗಾರನಾಗಬೇಕು. ಸದಸ್ಯ ಕೇಂದ್ರಿತ... ವ್ಯವಹಾರಗಳನ್ನು ರೂಪಿಸಿಕೊಂಡು ಅವರ ಆರ್ಥಿಕ ಸಾಮಾಜಿಕ ಅಭಿವೃದ್ಧಿಗೆ ಶ್ರಮಿಸಬೇಕು. ಏಕೆಂದರೆ... ಸಮೂಹದ ಹಿತವನ್ನು ಬಯಸುವವನು... ನಿಜವಾದ ನಾಯಕ ಸಹಕಾರಿ ನಾಯಕ ಸಂಸ್ಥೆಯ ಉದ್ದೇಶಗಳನ್ನು ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಸಹಕಾರಿ ಮೌಲ್ಯ ಮತ್ತು ತತ್ವಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ಆಚರಣೆಯಲ್ಲಿ ತರುವುದರ ಮೂಲಕ ಆ ಉದ್ದೇಶಗಳನ್ನು... ಈಡೇರಿಸುವಂತಿರಬೇಕು.

ಸಹಕಾರಿ ನಾಯಕ ಸಂಸ್ಥೆಯ ಉಪವಿಧಿ, ಕಾಯಿದೆ ಮತ್ತು ನಿಯಮಗಳಿಗೆ ಬದ್ಧನಾಗಿ ಕೆಲಸ ಮಾಡಬೇಕು. ಇವುಗಳನ್ನು ಉಲ್ಲಂಘಿಸಿ... ಕೆಲಸ ಮಾಡುವಂತಹ ಯಾವುದೇ ಒತ್ತಡಕ್ಕೆ ಮಣಿಯಬಾರದು. ನಿಯಮೋ ರಕ್ಷತಿ... ರಕ್ಷಿತಃ! ಸಹಕಾರಿ ನಾಯಕನ ಧ್ಯೇಯವಾಗಬೇಕು.

ಸಹಕಾರಿ ನಾಯಕ ವ್ಯಕ್ತಿಗಿಂತ ಸಂಸ್ಥೆ ದೊಡ್ಡದು ಎಂಬ ಬದ್ಧತೆಯನ್ನು ಬೆಳೆಸಿಕೊಳ್ಳುವುದಲ್ಲದೆ... ಇತರರಲ್ಲಿ ಬೆಳೆಸಲು ಪ್ರಯತ್ನಿಸಬೇಕು. ಆಗ ಮಾತ್ರ... ಎಲ್ಲರಲ್ಲೂ "ಇದು ನನ್ನ ಸಂಘ" ಎಂಬ ಭಾವನೆ ಬೆಳೆದುಬರುತ್ತದೆ. ಸಹಕಾರಿ ನಾಯಕ ಅಪ್‌ಡೇಟೆಡ್ ಆಗಿರಬೇಕು... ಇಲ್ಲದಿದ್ದರೆ ಔಟ್‌ಡೇಟೆಡ್

ಆಗಿಬಿಡುತ್ತಾನೆ

- ಅವನು ಅಧ್ಯಯನಶೀಲನಾಗಿರಬೇಕು.
- ತನ್ನನ್ನು ತಾನು ಅಧ್ಯಯನ ಮಾಡಿಕೊಳ್ಳುತ್ತಾ... ಸ್ವಾನುಭವದಿಂದ ಬೆಳೆಯುತ್ತಾ ಹೋಗಬೇಕು.
- ಬದಲಾವಣೆಗೆ ಹೊಂದಿಕೊಳ್ಳುವಂತವನಾಗಿರಬೇಕು.
- ತಾನೂ ಬೆಳೆಯುತ್ತಾ... ಎರಡನೇ ಸಾಲಿನ ನಾಯಕರನ್ನೂ ಬೆಳೆಸಬೇಕು.

ಸಹಕಾರಿ ನಾಯಕ ಸಂಸ್ಥೆಯ ವ್ಯವಹಾರದಲ್ಲಿ ಪಾರದರ್ಶಕತೆ ಇರುವಂತೆ ನೋಡಿಕೊಳ್ಳಬೇಕು. ವಾಕ್-ದಿ-ಟಾಕ್ ದಿನನಿತ್ಯದ ವ್ಯವಹಾರದಲ್ಲಿ ಕಂಡು ಬರಬೇಕು. ಪಾರದರ್ಶಕತೆ ಇದ್ದಲ್ಲಿ... ಪರಸ್ಪರ ನಂಬಿಕೆ, ವಿಶ್ವಾಸ ಮೂಡಿ... ಸಹಕಾರಿ ಬೆಳೆಯುತ್ತದೆ.

ಸಹಕಾರಿ ನಾಯಕ ಸಂಸ್ಥೆಯ ಕಷ್ಟ-ನಷ್ಟಗಳ ಹೊಣೆಯನ್ನು ಹೊರುವಂತಿರಬೇಕು. ಸಹೋದ್ಯೋಗಿಗಳು, ಕೈ ಕೆಳಗಿನವರು ಫೇಲ್ ಆದಾಗ... ಆ ಸೋಲನ್ನು ಸರಿತಿದ್ದುವ, ಸರಿಯಾಗಿ ಮಾಡಿಸುವ ಜವಾಬ್ದಾರಿ ಹೊರಬೇಕು. ಅವರ ತಪ್ಪನ್ನು ಉತ್ತೇಜಿಸುವುದು... ಅಪರಾಧ!

ಸಹಕಾರಿ ನಾಯಕ ಎಲ್ಲರನ್ನು ಸಮಾನವಾಗಿ ಕಾಣಬೇಕು, ಎಲ್ಲರೊಂದಿಗೆ ಬೆರೆಯಬೇಕು, ತಂಡ ಸ್ಫೂರ್ತಿಯನ್ನು ರೂಪಿಸಬೇಕು. ಟೀಕೆಗಳು ಬಂದಾಗ... ತೆಗೆದುಕೊಂಡ ಕ್ರಮಗಳು ಸರಿಯಿದ್ದರೆ ಉತ್ತರಿಸುವುದು. ಒಂದು ವೇಳೆ ತಪ್ಪಿದ್ದಲ್ಲಿ ಸಲಹೆಗಳ ರೂಪದಲ್ಲಿ ಸ್ವೀಕರಿಸಿ... ಎಚ್ಚರಿಕೆಯಿಂದ ಕೆಲಸ ಮಾಡಬೇಕು. ಸ್ಥಿತ ಪ್ರಜ್ಞತೆ ಸಹಕಾರಿ ನಾಯಕನ ವ್ಯಕ್ತಿತ್ವದಲ್ಲಿ ಮೂಡಿಬರಬೇಕು.

1. ಉದ್ದೇಶ ಸಾಧನೆಯೇನೋ ಸರಿ, ಆದರೆ, ಅದಕ್ಕಾಗಿ ಏನನ್ನಾದರೂ ಮಾಡಬಹುದೆಂಬುದು ಸರಿಯಲ್ಲ. ಗುರಿಯಷ್ಟೇ ಮಾರ್ಗವೂ ಉತ್ತಮವಾಗಿರಬೇಕು.
2. ಕೆಲವರು ಹುಟ್ಟಿನಿಂದಲೇ ನಾಯಕತ್ವದ ಲಕ್ಷಣಗಳನ್ನು ಹೊತ್ತು ತಂದಿದ್ದರೂ... ಸ್ವಯಂ ಪ್ರೇರಣೆ ಮತ್ತು ಸಾಧನೆಯೂ ಮುಖ್ಯವಾಗುತ್ತದೆ.
3. ಪರಸ್ಪರ ಅವಲಂಬನೆ ಮುಖ್ಯ. ಅತ್ಯುತ್ತಮ ಫಲಿತಾಂಶವು ಒಬ್ಬರಿಂದಲೇ ಸಾಧ್ಯವಿಲ್ಲ. ಇದನ್ನೇ ಟೀಂ ವರ್ಕ್ ಎನ್ನುತ್ತಾರೆ.
4. ಇದು ಸರ್ವಾಧಿಕಾರಿಯ ಮನೋಭಾವ. ಇಂಥ ವರ್ತನೆಯು ಒಮ್ಮೊಮ್ಮೆ ಉಪಯುಕ್ತವಾದುದಾದರೂ... ಎಲ್ಲ ಕಾಲಕ್ಕೂ ಒಳ್ಳೆಯದಲ್ಲ.
5. ಇಲ್ಲಿ 'ಯಾವಾಗಲೂ' ಎಂಬುದನ್ನು ಗಮನಿಸಬೇಕು. ಕೆಳಗಿನವರಿಗೆ ಕೆಲಸ ಮಾಡಲು ಸಾಕಷ್ಟು ಸ್ವಾತಂತ್ರ್ಯ ನೀಡಬೇಕು. ಮೇಲ್ವಿಚಾರಣೆ ಇರಲಿ... ಆದರೆ ಅತಿಯಾದ ನಿಯಂತ್ರಣ ಬೇಡ.
6. ಕೆಳಗಿನವರಿಗೆ ಜವಾಬ್ದಾರಿ ವಹಿಸುವುದರಿಂದ ಕೆಲಸಗಳು ಸುಗಮವಾಗುತ್ತವೆ. Deal, Delegate, Dump ಬಹಳ ಮುಖ್ಯ ಎಂಬುದನ್ನು ಒಳ್ಳೆಯ ನಾಯಕನಾದವನು ಗುರುತಿಸುತ್ತಾನೆ.
7. ಎಲ್ಲವೂ ವ್ಯವಸ್ಥಿತವಾಗಿ ನಡೆಯುತ್ತಿರುವಾಗ ನಾಯಕನೊಬ್ಬನ ಸಾಮರ್ಥ್ಯವನ್ನು ಅಳೆಯುವುದು ಅಸಾಧ್ಯ. ಆದರೆ ವ್ಯವಸ್ಥೆಯಲ್ಲಿ ಅಡ್ಡಿ-ಆತಂಕಗಳು ಎದುರಾದಾಗಲೇ ಆತನ ನೈಜ ಸಾಮರ್ಥ್ಯದ ಪರೀಕ್ಷೆಯಾಗುವುದು. ಹಾಗಾಗಿ ನಾಯಕನಾದವನು ಹೂವು-ಮುಳ್ಳು ಎರಡನ್ನೂ ಸಮಾನವಾಗಿ ಸ್ವೀಕರಿಸಬೇಕು.
8. ಅರ್ಹತೆಯಿರುವ ತನ್ನ ಕೆಳಗಿನವರನ್ನು ಮೇಲಿನ ಸ್ಥಾನಕ್ಕೆ ಬಡ್ತಿ ಕೊಡುವಂಥ ಗುಣ ಹೊಂದಿರುವಾತನು... ಯಶಸ್ವೀ ನಾಯಕನಾಗುತ್ತಾನೆ.
9. ನಾಯಕನಾದವನು ತನ್ನ ಸಂಸ್ಥೆಯ ಆಗು-ಹೋಗುಗಳ ಹೊಣೆಯನ್ನು ಹೊತ್ತುಕೊಳ್ಳಬೇಕು. ಗೆಲುವು ಉಂಟಾದಾಗ 'ನನ್ನಿಂದ', ವೈಫಲ್ಯತೆ ಸಂಭವಿಸಿದಾಗ 'ನಾನಲ್ಲ'... ಎಂದು ಹೇಳುವ ಮನೋಭಾವ ಇರುವವರು ಎಂದಿಗೂ ನಾಯಕರಾಗುವುದಿಲ್ಲ.
10. ಯಾವುದೇ ವ್ಯವಸ್ಥೆಯಲ್ಲಿ ಯಾರೂ ಅನಿವಾರ್ಯವಲ್ಲ. ಆದರೆ... ಅವರ ಕೊಡುಗೆಗಳು ಮಾತ್ರ ಗುರುತಿಸಲ್ಪಡುತ್ತವೆ.

ಸಹಕಾರಿ ನಾಯಕತ್ವ – ಸವಾಲುಗಳು...

### ಸಹಕಾರಿಗಳ ಕಾರ್ಯಕ್ಷಮತೆಯ ಕೊರತೆ

ರಾಜ್ಯದಲ್ಲಿ... ಮೂರು ವರ್ಗದ ಸಹಕಾರಿಗಳು ಕೆಲಸ ಮಾಡುತ್ತಿವೆ.

1. **ಪ್ರಾರಂಭದ ಹಂತದಲ್ಲಿರುವ... ಸಹಕಾರಿಗಳು** : 'ಏನು' ಮಾಡಬೇಕು ಎಂಬುದು ತಿಳಿದಿಲ್ಲ.
2. **ಪ್ರಾರಂಭವಾಗಿ 3 ವರ್ಷಕ್ಕೂ ಮೇಲ್ಪಟ್ಟ ಸಹಕಾರಿಗಳು** : 'ಏನು' ಮಾಡಬೇಕು ಎಂಬುದು ಗೊತ್ತಿದೆ. ಆದರೆ 'ಹೇಗೆ' ಮಾಡಬೇಕು ಎಂಬುದು ಗೊತ್ತಿಲ್ಲ. 'ಏನು' ಎಂಬುದನ್ನು ತಿಳಿದ ಸ್ಥಿತಿ ಅಪೂರ್ಣ. 'ಹೇಗೆ' ಎಂಬುದನ್ನು ಅರಿತಾಗ ಮಾತ್ರ ಅದು ಪರಿಪೂರ್ಣ.
3. **ಮಾದರಿ ಸಹಕಾರಿಗಳು** : 'ಏನು' ಮತ್ತು 'ಹೇಗೆ' ಮಾಡಬೇಕು ಎಂಬುದು ಎರಡೂ ಗೊತ್ತಿವೆ. ಆದರೆ ಇವುಗಳ ಸಂಖ್ಯೆ ಕಡಿಮೆ.

ಈ ಸಹಕಾರಿಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದೇ ಸಹಕಾರಿ ನಾಯಕತ್ವದ ಮುಂದಿರುವ ಮೊದಲ ಸವಾಲು.

### ಸಂಪನ್ಮೂಲದ ಕೊರತೆ

ಸಹಕಾರಿಗಳಿಗೆ ದುಡಿಯುವ ಬಂಡವಾಳದ ರೂಪದಲ್ಲಿ ಸಾಲದ ಅಗತ್ಯತೆ ಇದೆ. ಸಾರ್ವಜನಿಕ ಬ್ಯಾಂಕುಗಳಲ್ಲಿ ರೂ.1.94 ಲಕ್ಷ ಕೋಟಿ ಸಾಲ ಎನ್.ಪಿ.ಎ. ಆಗಿದ್ದರೂ... ಸರ್ಕಾರದಿಂದ ಆರ್ಥಿಕ ನೆರವು ದೊರೆಯುತ್ತದೆ. ಆದರೆ... ಸಹಕಾರ ಕ್ಷೇತ್ರಕ್ಕೆ...?

- ಪ್ರತಿವರ್ಷ ರೈತರಿಗೆ ಬೆಳೆ ಸಾಲ ನೀಡುವ ಮೊತ್ತದಲ್ಲಿ ಶೇ.50ರಷ್ಟನ್ನು ನಬಾರ್ಡ್ ಭರಿಸುತ್ತಿದ್ದು, ಈ ಬಾರಿ ಶೇ. 40ಕ್ಕೆ ಇಳಿಸಿದೆ. ಇದರಿಂದ ಸುಮಾರು 1000 ಕೋಟಿ ರೂ. ಗಳ ಕೊರತೆ ಬೀಳಲಿದೆ.
- ವಿವಿಧ ಇಲಾಖೆಗಳಲ್ಲಿ ವೆಚ್ಚವಾಗದೇ ಉಳಿದಿರುವ ಸುಮಾರು 5000 ಕೋಟಿ ರೂ. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಠೇವಣಿಯ ರೂಪದಲ್ಲಿದೆ. ಈ ಹಣವನ್ನು ಸಹಕಾರ ಬ್ಯಾಂಕುಗಳಿಗೆ ವರ್ಗಾಯಿಸಿದರೆ, ರೈತರಿಗೆ ಸಾಲ ನೀಡಲು ಸಮಸ್ಯೆಯಾಗುವುದಿಲ್ಲ.
- ಆದರೆ... ವಿವಿಧ ಇಲಾಖೆಗಳ ಠೇವಣಿಯನ್ನು ಸಹಕಾರ ಸಂಸ್ಥೆಗಳಿಗೆ ವರ್ಗಾಯಿಸಲು ಆರ್‌ಬಿಐ ಅಥವಾ ನಬಾರ್ಡ್ ಒಪ್ಪುವುದಿಲ್ಲ.
- ಸಹಕಾರ ಬ್ಯಾಂಕ್ ಅಥವಾ ಸಹಕಾರ ಸಂಘ ನಷ್ಟಕ್ಕೆ ಒಳಗಾಗಿ ಮುಚ್ಚಿ ಹೋದರೆ ವಿವಿಧ ಇಲಾಖೆಗಳು ಇಟ್ಟಿರುವ ಠೇವಣಿಗೆ ಯಾರು

Swabhimani Sahakari, Monthly, Posting Day 8th.
Posted at Bangalore PSO, Mysore Road, Bangalore 560026
Registered No. RNP/BGW/1744/2014-16. RNI No. KARBIL - 2004/18001. Pages 36


ಜವಾಬ್ದಾರರು ಎಂಬುದು ಪ್ರಮುಖ ಪ್ರಶ್ನೆ.

- ಒಂದು ವೇಳೆ ಸಾಲ ಪಡೆದ ರೈತರು ಮರುಪಾವತಿ ಮಾಡದೇ ಹೋದರೆ ಅದರ ಹೊಣೆಯನ್ನು ಹೊರುವವರು ಯಾರು?

### ಪೂರಕ ಸಂಸ್ಥೆಗಳು ಮತ್ತು ಪಾಲುದಾರಿಕೆ

ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997ರ ಸೆಕ್ಷನ್ 14ರನ್ವಯ ಸಹಕಾರಿಯು ಯಾವುದೇ ಒಂದು ನಿರ್ದಿಷ್ಟ ವ್ಯವಹಾರವನ್ನು ನಡೆಸುವುದಕ್ಕಾಗಿ ಪಾಲುದಾರಿಕೆಯಲ್ಲಿ ಸೇರಿಕೊಳ್ಳಬಹುದು ಮತ್ತು ಕಲಂ 15ರನ್ವಯ ಸಹಕಾರಿಗಳ ಉದ್ದೇಶಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಪೂರಕ ಸಂಸ್ಥೆಗಳನ್ನು ಪ್ರಾರಂಭಿಸಬಹುದು. ಉದಾ: ಕನ್ಸಾರ್ಟಿಯಂ ಫೈನಾನ್ಸ್

- ಸದಸ್ಯರ ಭಾಗವಹಿಸುವಿಕೆಯ ಕೊರತೆ
- ಐದು ವರ್ಷಗಳಲ್ಲಿ ಕನಿಷ್ಠ 2 ವರ್ಷ... ಸಹಕಾರಿಯ ಸೇವೆಗಳನ್ನು ಉಪಯೋಗಿಸಿಕೊಂಡರೆ ಸಾಕೆ...?
- ಸತತ 3 ವರ್ಷ ಮಹಾಸಭೆಗೆ ಹಾಜರಾದ ಮಾತ್ರಕ್ಕೆ... ಆತ ಪ್ರಜ್ಞಾವಂತ ಸದಸ್ಯನಾಗುತ್ತಾನಾ?
- ಮತದಾನದ ಹಕ್ಕುಳ್ಳ ಒಟ್ಟು ಸದಸ್ಯರ ಶೇ.10 ಅಥವಾ 1 ಸಾವಿರ ಯಾವುದು ಕಡಿಮೆಯೋ ಅಷ್ಟು ಸದಸ್ಯರ ಕೋರಂ... ಇದ್ದ ಮಾತ್ರಕ್ಕೆ ಎಲ್ಲ ಸದಸ್ಯರ ಕೊಡುಗೆ ಸಾಧ್ಯವೆ?ಕಾಯಿದೆಗಳು ಪೂರಕವಾಗಿಲ್ಲದಿರುವಿಕೆ

1. ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ ಮತ್ತು ನಿಯಮಗಳಿಗೆ 2014 ಮತ್ತು 2015ರಲ್ಲಿ ತಂದಿರುವ ತಿದ್ದುಪಡಿಗಳು
2. ಕರ್ನಾಟಕ ಮನಿಲೆಂಡರ್ಸ್ ಆಕ್ಟ್‌ನಲ್ಲಿ... ಸೌಹಾರ್ದ ಸಹಕಾರಿ ಪದ ಇಲ್ಲದಿರುವುದು.
3. ಜೂನ್ 2015 ರಿಂದ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಜಾರಿ ಮಾಡಿರುವ ಖಿಆಖ ನಿಯಮಗಳು
4. ಪಟ್ಟಣ ಸಹಕಾರ ಬ್ಯಾಂಕುಗಳ ಖಾಸಗೀಕರಣ ... ಇತ್ಯಾದಿ

### ಆದಾಯ ತೆರಿಗೆ ವಿನಾಯಿತಿಯ ಅವಶ್ಯಕತೆ ಇದೆ

ಈ ಹಿನ್ನೆಲೆಯಲ್ಲಿ... ಸೌಹಾರ್ದ ಸಹಕಾರಿಗಳಿಗೆ ಹಾಗೂ ಸಹಕಾರ ಸಂಘಗಳಿಗೆ ಆದಾಯ ತೆರಿಗೆಯಿಂದ ವಿನಾಯಿತಿ ನೀಡುವಂತೆ ಧಾರವಾಡ ಹೈಕೋರ್ಟ್ ಪೀಠ ಆದಾಯ ತೆರಿಗೆ ಇಲಾಖೆಗೆ ಸೂಚಿಸಿರುವುದು ಒಳ್ಳೆಯ ಬೆಳವಣಿಗೆಯಾಗಿದ್ದರೂ, ಆದಾಯ ತೆರಿಗೆ ಕಾಯಿದೆಯ ಅಂಶಗಳನ್ನು ಸ್ಪಷ್ಟವಾಗಿ ತಿಳಿಸುವ ಕೆಲಸ ಆಗಬೇಕಾಗಿದೆ. ಇವೆಲ್ಲಾ ಸಾಧ್ಯ ಆಗಬೇಕಾದರೆ... ಪ್ರತಿ ಸಹಕಾರಿಯಲ್ಲೂ ಸಮರ್ಥ ಸಹಕಾರಿ ನಾಯಕತ್ವ ರೂಪುಗೊಳ್ಳಬೇಕಾದ ಅಗತ್ಯತೆ ಇದೆ.

### ನಿಷ್ಠೆಯ ಕೊರತೆ

ಹೆಚ್ಚಿನ ಸಹಕಾರಿಗಳ ಆಡಳಿತದಲ್ಲಿ... ಬದ್ಧತೆ ಮತ್ತು ತಲ್ಲೀನತೆ ಕಂಡುಬರುತ್ತಿಲ್ಲ.

### Trust Deficit Ethical Degradation

### ಸಹಕಾರಿ ನಾಯಕರು ಗಮನಿಸಬೇಕಾದ ಅಂಶಗಳು :

- ನಿಮ್ಮ ನೌಕರರನ್ನು ಗುರುತಿಸಿ.
- ಅವರಿಗೆ ಸಾಕಷ್ಟು ಪ್ರೋತ್ಸಾಹ ನೀಡಿ.
- ಅಗತ್ಯವಾದ ತರಬೇತಿ ನೀಡಿ.
- ಅವರ ಅಭಿಪ್ರಾಯಗಳನ್ನು ಆಲಿಸಿ.
- ಯಶಸ್ಸನ್ನು ಅವರೊಂದಿಗೆ ಹಂಚಿಕೊಳ್ಳಿ.
- ಎಂಥ ಸವಾಲು ಎದುರಾದರೂ ಅದನ್ನು ಸ್ವೀಕರಿಸಲು, ರಿಸ್ಕ್‌ಗಳನ್ನು ತೆಗೆದುಕೊಳ್ಳಲು ಅವರಿಗೆ ಉತ್ತೇಜನ ನೀಡಿ.
- ಕೆಲಸ ಮಾಡುವ ಸ್ವಾತಂತ್ರ್ಯ ನೀಡಿ, ಅವರ ಸಾಮರ್ಥ್ಯದ ಮೇಲೆ ನೀವು ಇಟ್ಟಿರುವ ನಂಬಿಕೆಯನ್ನು ತೋರ್ಪಡಿಸಿ.
- ಏಕೆಂದರೆ.. ನಿಮ್ಮ ನೌಕರರು.. ನಿಮ್ಮ ಸಂಸ್ಥೆಯ ಆಂತರಿಕ ಗ್ರಾಹಕರು! ಮರೆಯದಿರಿ...
- ನಿಮ್ಮ ಪ್ರತಿಯೊಂದು ಹೆಜ್ಜೆಯನ್ನು ಗಮನಿಸುವವರಿದ್ದಾರೆ.
- ಪ್ರಶ್ನಿಸುವವರಿದ್ದಾರೆ... ಟೀಕಿಸುವವರಿದ್ದಾರೆ... ದೂರುವವರಿದ್ದಾರೆ.
- ಇವುಗಳ ಜೊತೆಗೆ ಪ್ರೋತ್ಸಾಹಿಸುವವರಿದ್ದಾರೆ, ಆದರಿಸುವವರೂ ಇದ್ದಾರೆ.
- ಆದ್ದರಿಂದ, ವ್ಯವಸ್ಥೆಯನ್ನು ಸರಿಪಡಿಸುವ-ಸುಧಾರಿಸುವ-ಉನ್ನತ ಮಟ್ಟಕ್ಕೇರಿಸುವ ಅನುಕರಣೀಯ ಕ್ರಮಗಳ ಬಗ್ಗೆ ಚಿಂತನೆ ಇರಲಿ.
- ನಿಮ್ಮ ಕೆಲಸವನ್ನು... ಸೇವೆಯೆಂದು ಪರಿಗಣಿಸಿ... ಮುಂದೆ ಸಾಗಿ!
- "ನನಗೆ ಮಾತ್ರ ಬೇಕು" ಎಂದು ಹೇಳಿದರೆ, ಅದು ಕೆಲಸ ಮಾಡುವುದಿಲ್ಲ.
- ಏನಾದರೂ ಒಳ್ಳೆಯ ಕೆಲಸಗಳನ್ನು ಮಾಡಬೇಕು.
- ಜನರ ಮುಖದಲ್ಲಿ ನಗೆಯನ್ನು ತರಬೇಕು.

ಆಗ ಮಾತ್ರ "ನಿಮಗೆ ಏನು ಬೇಕು?" ಎಂಬುದನ್ನು ಕೇಳುವ ಅಧಿಕಾರ ಬರುತ್ತದೆ. ಇದೇ ನಿಜವಾದ ನಾಯಕತ್ವ

**ನೆನಪಿಡಿ :** ನಿಮ್ಮ ಮುಖವನ್ನು ಸೂರ್ಯನ ಕಡೆ ತಿರುಗಿಸಿದರೆ.... ನೆರಳು ನಿಮ್ಮ ಹಿಂದೆ ಬೀಳುತ್ತದೆ.

ಸೇವೆಯ ಕಡೆಗೆ ತಿರುಗಿಸಿದರೆ.... ನಿಮ್ಮ ಹೆಸರು ಶಾಶ್ವತವಾಗಿ ಉಳಿಯುತ್ತದೆ. ■

ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್,1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1-ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು.560 010. ದೂ: 080 - 23525546
ಮೈಸೂರು ವಿಭಾಗೀಯ ಕಛೇರಿ : ನಂ. 200, ಶಂಕರ ಮಠ ಮುಖ್ಯರಸ್ತೆ, ಕಿಲ್ಲೇ ಮೊಹಲ್ಲಾ, ಮೈಸೂರು. ದೂ : 0821 - 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂ : 0831 - 2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಕಲಬುರಗಿ - 585102. ದೂ. 08472 - 270222.

Edited, Printed and Published by Sharangouda G. Patil - Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010